
ಪುಸ್ತಕ ಪ್ರಪಂಚ

ಸಂಪುಟ ೪೪ ಜುಲೈ ೧೯೯೪ ಸಂಚಿಕೆ ೧೧



ವಿಷಯ ಸೂಚಿಕೆ

ಮುಖಚಿತ್ರ : ಎ. ಎನ್. ಮೂರ್ತಿರಾವ್

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಜುಲೈ ೧, ೧೯೯೪ ಸಂಚಿಕೆ ೧೧

ಶ್ರೀ ಎ. ಎನ್. ಮೂರ್ತಿರಾವ್

೧೯೯೩ನೆಯ ಸಾಲಿನ 'ಪಂಪ ಪ್ರಶಸ್ತಿ'ಗೆ ಪ್ರೊ॥ ಎ. ಎನ್. ಮೂರ್ತಿರಾವ್ ಅವರು ಪಾತ್ರರಾಗಿದ್ದಾರೆ. ಅವರ 'ದೇವರು' ಎಂಬ ವೈಚಾರಿಕ ಕೃತಿಗೆ ರಾಜ್ಯ ಸರ್ಕಾರ ಈ ಪ್ರಶಸ್ತಿ ನೀಡಿ ಗೌರವಿಸಿದೆ.

ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾವ್ ಅವರು ಮಂಡ್ಯ ಜಿಲ್ಲೆ ಕೃಷ್ಣರಾಜ ಪೇಟೆ ತಾಲ್ಲೂಕಿನ ಅಕ್ಕಿಹೆಬ್ಬಾಳುವಿನಲ್ಲಿ ದಿನಾಂಕ ೧೬–೬–೧೯೦೦ ರಂದು ಜನಿಸಿದರು. ಕೂಲಿಮಠದಲ್ಲಿ ಮರಳಿನ ಮೇಲೆ ಅ,ಆ,ಇ,ಈ ತಿದ್ದಿದ ಕಾಲವನ್ನು ಬಿಟ್ಟರೆ ಬಾಲ್ಯವನ್ನು ತಮ್ಮ ಹುಟ್ಟೂರಲ್ಲಿ ಕಳೆದಿದ್ದು ಕಡಿಮೆ. ಇವರ ತಂದೆ ಸಬ್‌ಓವರ್ಸಿಯರ್ (ಜ್ಯೂನಿಯರ್ ಎಂಜಿನಿಯರ್) ಆಗಿ ಮೇಲುಕೋಟೆಯಲ್ಲಿ ಕರ್ತವ್ಯನಿರತರಾಗಿದ್ದರಿಂದ ಇವರ ಬಾಲ್ಯ ಮೊದಲಿಗೆ ಮೇಲುಕೋಟೆಯಲ್ಲಿ, ಆನಂತರ ನಾಗಮಂಗಲದಲ್ಲಿ ಕಳೆಯಿತು. ಮೇಲುಕೋಟೆಯ ಬೆಟ್ಟದ ಮೇಲಿನ ಕೋಡುಗಲ್ಲನ್ನು ಹತ್ತಿನಿಂತು ಕೆಳಗಿನ ವಿಶಾಲವಾದ ಬಯಲನ್ನು ನೋಡುತ್ತಾ ಆನಂದ ಪಡುತ್ತಿದ್ದ ಈ ಬಾಲಕನಿಗೆ, ನಿಸರ್ಗದ ಬಗ್ಗೆ ಅಪಾರ ಮಮತೆ. ಪ್ರಾಥಮಿಕ ತರಗತಿಯನ್ನು ಮೇಲುಕೋಟೆಯಲ್ಲಿ ಮುಗಿಸುವ ವೇಳೆಗೆ, ತಂದೆಯವರು ವರ್ಗಾವಣೆಯಿಂದಾಗಿ ನಾಗಮಂಗಲಕ್ಕೆ ಪಯಣ ಬೆಳೆಸಿದ್ದರಿಂದ, ಪ್ರಾಥಮಿಕ ತರಗತಿ ವ್ಯಾಸಂಗ ನಾಗಮಂಗಲದಲ್ಲಿ ಮುಂದುವರಿಯಿತು. ಒಂದೆರಡು ವರ್ಷದಲ್ಲಿಯೇ ತಂದೆಯವರು ಕುದುರೆಯ ಮೇಲಿಂದ ಬಿದ್ದು ಖಾಯಿಲೆ ಮಲಗಿದ್ದರ ಪರಿಣಾಮ ಕುಟುಂಬವೇ ಊರಿಗೆ ಹಿಂದಿರುಗಿದ್ದರಿಂದ ಇವರ ವ್ಯಾಸಂಗಕ್ಕೆ ಅಡ್ಡಿಯಾಯಿತು.

೧೯೧೩ ರಲ್ಲಿ ಮೂರ್ತಿಯವರು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು. ತಮ್ಮ ಬಂಧುಗಳ ಆಶ್ರಯದಲ್ಲಿ ಉಳಿದು ವೆಸ್ಲಿಯನ್ ಮಿಷನ್ ಹೈಸ್ಕೂಲಿನ ಮಾಧ್ಯಮಿಕ ಶಾಲೆಯ ಎರಡನೇ ಫಾರಂ (೯ ನೇ ತರಗತಿಗೆ) ಸೇರಿದರು. ಕ್ರೈಸ್ತಮತ ಪ್ರಚಾರಕ್ಕಾಗಿ ಹುಟ್ಟಿಕೊಂಡಿದ್ದ ಈ ಮಿಷನರಿಗಳಲ್ಲಿ, ಇಂಗ್ಲಿಷ್ ವಿದ್ಯಾಭ್ಯಾಸ ಉತ್ತಮವಾಗಿ ನಡೆಯುತ್ತಿತ್ತು. ಅವರ ಪ್ರಯೋಜನ ಮೂರ್ತಿ ರಾಯರಿಗೂ ಲಭಿಸಿತು. ಅಲ್ಲಿನ ವಿಲಿಯಂ ನಾಗಮುತ್ತ, ಡಿ. ದೇವಪುತ್ರ, ವೀಯಸ್ ಮುಂತಾದ ಶಿಕ್ಷಕರ ಪ್ರಭಾವಕ್ಕೆ ಒಳಗಾದ ಇವರು ಬಹುಬೇಗನೆ ಆಂಗ್ಲ ಭಾಷೆಯಲ್ಲಿ ಪ್ರೌಢಿಮೆ ಸಂಪಾದಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆ, ಮೆಟ್ರಿಕ್ಯುಲೇಷನ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದರು.

೧೯೧೯ ರಲ್ಲಿ ಮೂರ್ತಿರಾಯರು ಮಹಾರಾಜ ಕಾಲೇಜಿನ ಬಿ.ಎ. ತರಗತಿಗೆ ಸೇರಿದರು. ಮೈಸೂರು ವಿಶ್ವವಿದ್ಯಾನಿಲಯ ಆಗಿನ್ನೂ ನಾಲ್ಕೈದು ವರ್ಷಗಳ ಹಸುಗೂಸು. ಡಾ|| ರಾಧಾಕೃಷ್ಣನ್, ಕೆ.ಟಿ. ಷಾ, ಎನ್. ಎಸ್. ಸುಬ್ಬರಾವ್, ಎಂ. ಹಿರಿಯಣ್ಣ ಮುಂತಾದ ವಿದ್ವಾಂಸರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಮಾದರಿಯಲ್ಲಿ ಮೈಸೂರು ವಿಶ್ವವಿದ್ಯಾಲಯವನ್ನು ಕಟ್ಟಬೇಕೆಂದು ಮಿಡಿಯುತ್ತಿದ್ದ ಕಾಲವದು. ಅಂಥ ಸಂದರ್ಭದಲ್ಲಿ ಮೂರ್ತಿರಾಯರು ವ್ಯಾಸಂಗಾರ್ಥಿಯಾಗಿ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿ ಅದು ಬೆಳೆದಂತೆ ತಾವೂ ಬೆಳೆದರು. ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಜೆ. ಸಿ. ರಾಲೊ, ಡಾ|| ರಾಧಾಕೃಷ್ಣನ್, ಎಂ. ಹಿರಿಯಣ್ಣ ಮುಂತಾದ ಪ್ರಾಧ್ಯಾಪಕರ ಮಾರ್ಗದರ್ಶನ, ಉಪನ್ಯಾಸಗಳಲ್ಲಿ ಇವರ ಅಧ್ಯಯನ ಸಾಗಿತು. ಉತ್ತಮ ಗುರುಶಿಷ್ಯರ ಸಂಬಂಧ, ತೀ. ನಂ. ಶ್ರೀಕಂಠಯ್ಯ, ಡಿ. ಎಲ್. ನರಸಿಂಹಾಚಾರ್, ಕೇಶವನ್ ಮುಂತಾದ ಗೆಳೆಯರ ನಡುವೆ ಮೂರ್ತಿರಾಯರು ಉನ್ನತ ವ್ಯಾಸಂಗ, ಆದರ್ಶ ವ್ಯಕ್ತಿತ್ವ ಮತ್ತು ವೈಚಾರಿಕ ಧೋರಣೆ ರೂಪುಗೊಂಡಿತು. ಇವರ ಚಿತ್ರಗಳು–ಪತ್ರಗಳು ಕೃತಿಯಲ್ಲಿ, ಗುರುವರ್ಯರನ್ನು ಚಿತ್ರಿಸಿರುವ ಬಗೆ ಮೂರ್ತಿರಾಯರು ಗುರುಗಳಿಂದ ಎಷ್ಟೊಂದು ಪ್ರಭಾವಿತರಾಗಿದ್ದರು ಎಂಬುದನ್ನು ತಿಳಿಸುತ್ತದೆ. ೧೯೨೪ ರ ವೇಳೆಗೆ ಆಂಗ್ಲ ಎಂ. ಎ. ಪದವಿ ಪಡೆದ ಇವರು ಅದೇ ವರ್ಷ ಮಹಾರಾಜ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು.

ಬಾಲ್ಯದಿಂದಲೂ ಸಂಪ್ರದಾಯವನ್ನು ಪ್ರಶ್ನಿಸುವ, ಅನಿಷ್ಟ ಪದ್ಧತಿಗಳನ್ನು ಟೀಕಿಸುವ, "ಅರ್ಥವಿಲ್ಲದ ಪದ್ಧತಿಗಳಿಗೆ ಸೊಪ್ಪು ಹಾಕುವವ ನಾನಲ್ಲ" ಎಂದು

ಗುಡುಗುವ ಮನಸ್ಸು ಅವರದು. ಅವರೇ ತಮ್ಮ ಆತ್ಮಕಥನದಲ್ಲಿ ಹೇಳಿಕೊಂಡಿರುವಂತೆ–"ನಾನು ಎಂ.ಎ. ತರಗತಿಗೆ ಸೇರುವ ವೇಳೆಗಾಗಲೇ ಬ್ರಾಹ್ಮಣರು ಆಚರಿಸಬೇಕಾದ ರಿಚ್ಯುಯಲ್ (ಧರ್ಮಸೂತ್ರ, ವಿಧಿ ಆಚರಣೆ) ಎಲ್ಲವನ್ನು ಹೆಚ್ಚು ಕಡಿಮೆ ಬಿಟ್ಟಿದ್ದೆ" ಎನ್ನುತ್ತಾರೆ.

ಪ್ರೊ|| ಮೂರ್ತಿರಾಯರ ಸಾಹಿತ್ಯಕೃಷಿ ಗಮನಾರ್ಹವಾದದ್ದು. ಅವರ ಬರವಣಿಗೆ ಯಾವ ಅಬ್ಬರ ಆಡಂಬರಗಳಿಲ್ಲದ್ದು. ಸರಳತೆ, ಸುಲಲಿತೆ ಅವರ ಬರಹದ ವೈಶಿಷ್ಟ್ಯ. ಹೀಗಿದ್ದೂ ಆಳದಲ್ಲಿ ಅವರು ಬದುಕನ್ನು ಕಾಣುವ ಬಗೆ ಅನನ್ಯವಾದುದು. ನಾಟಕ, ಪ್ರಬಂಧ, ವಿಮರ್ಶೆ, ಪ್ರವಾಸಕಥನ, ಅನುವಾದ, ವಿಚಾರ ಮುಂತಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಉತ್ತಮ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಶ್ರೀಯುತರು ನವೋದಯ ಸಾಹಿತ್ಯಪಂಥವನ್ನು ಬೆಳೆಸಿದ ಹಿರಿಯರ ಸಾಲಿನಲ್ಲಿ ಸೇರುತ್ತಾರೆ.

೧೯೩೧ ರಲ್ಲಿ ರಚಿತವಾದ ಇವರ 'ಆಷಾಢಭೂತಿ' ನಾಟಕ ಅತ್ಯಂತ ಪ್ರಸಿದ್ಧಿಯನ್ನು ಪಡೆಯಿತು. ಇದು ಪ್ರಸಿದ್ಧ ಫ್ರೆಂಚ್ ಕವಿ ಮೊಲಿಯೇರ್‌ನ 'ತಾರ್ತುಫ್ (Tartuffe) ನಾಟಕದ ರೂಪಾಂತರ. ಪ್ರಸ್ತಾಪನೆಯಲ್ಲಿ ಹೇಳಿರುವಂತೆ "ಪಾಶ್ಚಾತ್ಯ ಸಾಹಿತ್ಯದ ಪರಿಚಯವಿಲ್ಲದವರಿಗೆ ಈ ನಾಟಕದಲ್ಲಿ ಅಭಿರುಚಿ ಹುಟ್ಟುವಂತೆ ಮಾಡುವುದೇ ಈ ಪ್ರಯತ್ನದ ಉದ್ದೇಶ". ಮೂಲ ನಾಟಕವನ್ನು ನಮ್ಮ ಸಮಾಜದ ಸ್ಥಿತಿಗತಿಗೆ ಹೊಂದಿಸಿಕೊಳ್ಳುವಾಗ ಹಲವು ದೃಶ್ಯಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ಕನ್ನಡದ ಜೀವ ತುಂಬಿರುವುದು ಕಂಡುಬರುತ್ತದೆ.

ನಾಟಕವನ್ನು ರಚಿಸುವುದರ ಮೂಲಕ ಸಾಹಿತ್ಯಲೋಕವನ್ನು ಪ್ರವೇಶಿಸಿದ ಮೂರ್ತಿರಾಯರು ಸೊಗಸಾದ ಪ್ರಬಂಧ ರಚನೆಕಾರರಾಗಿ ಪ್ರಸಿದ್ಧಿ ಪಡೆದರು. ಅವರು ಮೊದಲ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಬಿ.ಎಂ. ಶ್ರೀಯವರ ಸೂಚನೆಯಂತೆ ಟೆನ್ನಿಸನ್ನನ 'In memorium' ಕಾವ್ಯವನ್ನು ಕುರಿತು ಬರೆದ ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯದ ಮ್ಯಾಗಸೀನ್‌ನಲ್ಲಿ ಪ್ರಕಟವಾಗಿ ಇವರಿಗೆ ಅಪಾರ ಹೆಸರು ತಂದಿತ್ತು ; ಅಧ್ಯಾಪಕರಾದಿಯಾಗಿ ಎಲ್ಲರೂ ಮೆಚ್ಚಿಕೊಂಡಿದ್ದರು. ಮೂರ್ತಿರಾಯರು ಹುಟ್ಟು ಪ್ರಬಂಧಕಾರರು. ನೇರವಾದ ಸರಳಶೈಲಿಯಲ್ಲಿ ರಚಿಸಿರುವ ಇವರ ಪ್ರಬಂಧಗಳು ಹಿತವಾದ ವರ್ಣನೆಗಳಿಂದ ಕೂಡಿವೆ. ಸಣ್ಣದೊಂದು ಘಟನೆಯನ್ನು ತೆಗೆದುಕೊಂಡು ಅದನ್ನು ಎಳೆ-ಎಳೆಯಾಗಿ ಬಿಡಿಸಿ ವಿವಿಧ ದೃಷ್ಟಿಕೋನಗಳಿಂದ ವಿಶ್ಲೇಷಿಸಿ, ಹಾಸ್ಯಲೇಪಿತ ಶೈಲಿ

ಯಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿಸುವ ಕಲೆ ಇವರಿಗೆ ಕರಗತವಾಗಿದೆ. ಆಳ ವಾದ ಜೀವನ ಪ್ರೀತಿಯನ್ನು, ಬದುಕಿನ ವಿಡಂಬನೆಯನ್ನೂ ಪ್ರತಿಬಿಂಬಿಸುವ ಇವರ ಪ್ರಬಂಧಗಳಲ್ಲಿ, ಮನಸ್ಸಿನ ಓರೆಕೋರೆಗಳು, ನಂಬಿಕೆ, ಅಪನಂಬಿಕೆ, ಉತ್ಸಾಹ, ವ್ಯಾಕುಲ, ವೈಮನಸ್ಯ, ಪಶ್ಚಾತ್ತಾಪ, ಹಾಸ್ಯ, ಕುಚೋದ್ಯ ಹೀಗೆ ಮನುಷ್ಯಸ್ವಭಾವದ ವರ್ತನೆಯನ್ನು ಮೃದುಹಾಸ್ಯದೊಂದಿಗೆ ತಮ್ಮ ಪ್ರಬಂಧ ಗಳಲ್ಲಿ ಚಿತ್ರಿಸಿದ್ದಾರೆ. ಹಗಲುಗನಸುಗಳು (೧೯೩೭) ಅಲೆಯುವ ಮನ (೧೯೫೭) ಮಿನುಗುಮಿಂಚು (೧೯೬೨)—ಇವರ ಪ್ರಮುಖ ಪ್ರಬಂಧ ಸಂಕಲನಗಳು.

ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾಗಿರುವ ಪ್ರೊ॥ ಮೂರ್ತಿರಾಯರ "ಚಿತ್ರಗಳು—ಪತ್ರಗಳು" ಕೃತಿ ಕನ್ನಡದ ಸಾಹಿತ್ಯ ಸಂದರ್ಭ ದಲ್ಲಿ ವಿಶಿಷ್ಟವಾದುದು. ಇದರ ಮೊದಲ ಭಾಗದಲ್ಲಿ ರೆವರೆಂಡ್ ಆರ್. ಡಬ್ಲ್ಯೂ. ಬೂಟ್, ಎನ್. ದೇಶಿಕಾಚಾರ್ಯ, ಎಸ್. ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾಯ, ಜೆ. ಸಿ. ರಾಲೊ, ಬಿ. ಎಂ. ಶ್ರೀ., ಟಿ. ಎಸ್. ವೆಂಕಣ್ಣಯ್ಯ ಮುಂತಾದ ಗುರುಗಳ ವ್ಯಕ್ತಿಚಿತ್ರಗಳಿವೆ. ಎರಡನೆಯ ಭಾಗದಲ್ಲಿ ಗೆಳೆಯರಾದ ತೀ. ನಂ. ಶ್ರೀಕಂಠಯ್ಯ, ಪುತ್ರ ಎ. ಎನ್. ಸುಬ್ಬರಾಮು ಮತ್ತು ಸೊಸೆ ನ್ಯಾನ್ಸಿನಾಗರಾಜ್ ಇವರುಗಳಿಗೆ ಬರೆದ ಎಪ್ಪತ್ತೈದು ಪತ್ರಗಳನ್ನು ಸಂಕಲಿಸಿ ಪ್ರಕಟಿಸಿದ್ದಾರೆ. ಕನ್ನಡದಲ್ಲಿ ಪತ್ರಗಳೂ ಸಾಹಿತ್ಯದ ಗದ್ದುಗೆಯೇರಿದ್ದು ಬಹುಶಃ ಇವರ ಮೂಲಕವೇ ಎಂದು ಕಾಣುತ್ತದೆ. ಗುರು—ಶಿಷ್ಯರ ಸಂಬಂಧ ವನ್ನು ಮಗ—ಸೊಸೆಯರ ಬಾಂಧವ್ಯವನ್ನು ಹೇಳುವ 'ಚಿತ್ರಗಳು-ಪತ್ರಗಳು' ಕೃತಿ ಹೊಸಬಗೆಯದು.

'ಅಪರ ವಯಸ್ಕನ ಅಮೆರಿಕ ಯಾತ್ರೆ' ಪ್ರವಾಸಕಥನವಾದರೆ 'ಸಂಜೆಗಣ್ಣಿನ ಹಿನ್ನೋಟ' ಇವರ ಆತ್ಮಕಥನ. ಈ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮೊದಲಿನದು ಒಂದು ಯಾತ್ರೆಯ ಅನುಭವವನ್ನು ಹೇಳಿ ದರೆ, ಎರಡನೆಯದು ಒಂದು ಶತಮಾನದ ಅನುಭವವನ್ನು ಸಾಹಿತ್ಯಿಕವಾಗಿ ಹೇಳುವಂಥದು. ತೊಂಬತ್ತರ ಹರೆಯದಲ್ಲಿ ನಿಂತು ತಾವು ಬದುಕನ್ನು ಸ್ವೀಕರಿ ಸಿದ ಬಗೆಯನ್ನು ಈ ಕೃತಿಯಲ್ಲಿ ಮೂರ್ತಿಯವರು ಸಿಂಹಾವಲೋಕನ ಮಾಡಿ ದ್ದಾರೆ. ಸಂಜೆಗಣ್ಣಿನಲ್ಲಿಯೂ ಕೂಡ ಇವರ ಹದಿ—ಹರೆಯದ ನೆನಪುಗಳೇ ಹೆಚ್ಚಾಗಿ ಬರವಣಿಗೆಗಿಳಿದಿರುವುದನ್ನು ಕಾಣುತ್ತೇವೆ. ಜ್ಞಾಪಕಕ್ಕೆ ಬಂದದ್ದನ್ನು, ಬಂದಹಾಗೆ ಬರೆದಿದ್ದಾರೆ. ಅವರೇ ಹೇಳುವಂತೆ "ನಾನು ಬರೆಯುತ್ತಿರುವುದು ಯಾವ ವರ್ಗದವನಾಗಿಯೂ ಅಲ್ಲ; ಯಾವ ಜಾತಿಯವನಾಗಿಯೂ ಅಲ್ಲ;

ಯಾವ ಜನಾಂಗ, ವೃತ್ತಿ ಅಥವಾ ಮತದವನಾಗಿಯೂ ಅಲ್ಲ–ಕೇವಲ ಸಾಮಾನ್ಯ ಮಾನವನಾಗಿ".

"ಇದನ್ನು ಆತ್ಮಕಥೆ ಎಂದು ಕರೆಯಬಹುದು. ಆದರೂ ಇದರ ಮುಖ್ಯ ವಸ್ತು 'ನಾನು ಬದುಕಿನಲ್ಲಿ ಏನು ಮಾಡಿದೆ' ಎಂಬುದಲ್ಲ. ಬದುಕು ನನ್ನ ಕಣ್ಣಿಗೆ ಹೇಗೆ ಕಂಡಿತು ; ನನ್ನೆದುರಿಗೆ ಕಾಲದಿಂದ ಕಾಲಕ್ಕೆ ಪರಿಸ್ಥಿತಿ ಹೇಗೆ ಬದಲಾಯಿಸಿತು ; ಸಂಪ್ರದಾಯವೂ ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸವೂ ನನ್ನ ಮೇಲೆ ಉಂಟುಮಾಡಿದ ಪರಿಣಾಮವೇನು ; ಬಂಧುಗಳು, ಮಿತ್ರರು, ಗುರುಗಳು ನನ್ನ ಮೇಲೆ ಬೀರಿದ ಪ್ರಭಾವ"–ಇದನ್ನೆಲ್ಲ ಕಾಣಿಸುವುದು ನನ್ನ ಮುಖ್ಯೋದ್ದೇಶ ಎಂದು ಸ್ಪಷ್ಟವಾಗಿ ಮುನ್ನುಡಿಯಲ್ಲಿಯೇ ಹೇಳಿಬಿಡುತ್ತಾರೆ. ಎಲ್ಲಿಯೂ ಆಕರ್ಷಣೆಗಾಗಿ, ಕೀರ್ತಿಗಾಗಿ, ತಮ್ಮ ಅನುಭವದಾಚೆನದನ್ನು ಹೇಳುವ ಪ್ರಯತ್ನ ಮಾಡಿಲ್ಲ; ಪ್ರಾಮಾಣಿಕವಾದ ನಿಷ್ಠುರ ಬರವಣಿಗೆ ಇವರದು.

'ಸಂಜೆಗಣ್ಣಿನ ಹಿನ್ನೋಟ'ದಲ್ಲಿಯೇ ಮೂರ್ತಿರಾಯರಲ್ಲಿ ಒಂದು ಬಗೆಯ "Secular" ಮನೋಧೋರಣೆ ರೂಪುಗೊಳ್ಳುತ್ತಿರುವುದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ.

"ದೇವರನ್ನು ನಂಬುವುದಿಲ್ಲ' ಎಂದು ನಾನೇನೂ ಪಣತೊಟ್ಟಿಲ್ಲ. ನನ್ನ ಅಪನಂಬಿಕೆ ಪ್ರಯತ್ನ ಪೂರ್ವಕವಾಗಿ ಬರಮಾಡಿಕೊಂಡಿದ್ದಲ್ಲ. ನಂಬಿಕೆ ಬರಲೊಲ್ಲದು—ಅಷ್ಟೆ! 'ಇತರರಿಗೆ ದೈವ ಭಕ್ತಿಯಿಂದ ಶಾಂತಿ ಬರುವುದಾದರೆ ಬರಲಿ; ಅದರಿಂದ ಸಜ್ಜನಿಕೆಗೆ ಉತ್ತೇಜನ ದೊರಕುವುದಾದರೆ ಅವರ ದೈವ ಭಕ್ತಿ ಸಂತತವಾಗಿ ಇರಲಿ" ಎಂದು ಹಾರೈಸಲು ನಾನು ಸಿದ್ಧ. ನನಗೆ ನಂಬಿಕೆ ಬರಲೊಲ್ಲದು—" ಎನ್ನುವ ಮೂರ್ತಿರಾಯರು ಈಶ್ವರವಾದಿ–ನಿರೀಶ್ವರವಾದಿ, ಈ ಎರಡು ಮನಸ್ಸುಗಳನ್ನು ಮಾನವತಾವಾದಿ ನೆಲೆಗೆ ತಂದು ವಿಮರ್ಶೆಗೆ ಹಚ್ಚುವ, ಚರ್ಚೆಗೆ ಒಳಗುಮಾಡುವ ವಿಶಿಷ್ಟ ಕೃತಿ 'ದೇವರು'.

"—ನನ್ನಂಥ ನಿರೀಶ್ವರವಾದಿಗಳೂ ಸೇರಿದಂತೆ ಮನುಕುಲಕ್ಕೆ ಕರುಣಾರ್ದ್ರ ಹೃದಯನು, ಪ್ರೇಮ ಸ್ವರೂಪಿಯು ಆದ ದೇವರು ಬೇಕು. ನಾನು 'ದೇವರು ಇಲ್ಲ' ಎಂದುಕೊಳ್ಳುವಾಗ ನನ್ನ ಮನಸ್ಸಿನಲ್ಲಿರುವುದು ಸಂತೋಷವಲ್ಲ, ನಾನು ಸಂಪ್ರದಾಯದ ಗುಲಾಮನಲ್ಲ, ವಿಚಾರವಾದಿ, ಎಂಬ ಹೆಮ್ಮೆಯಲ್ಲ. ನಂಬುವವರನ್ನು ಹೀಯಾಳಿಸಬೇಕೆಂಬ ಅಪೇಕ್ಷೆಯಂತೂ ಖಂಡಿತ ಅಲ್ಲ 'ದೇವರು ಇಲ್ಲವಲ್ಲ' ಎಂಬ... ಅದನ್ನು 'ವಿಷಾದ' ಎಂದೇ ಕರೆಯಬಹುದೇನೋ! ಇರಾನಿನಲ್ಲಿ ಆದಂಥ ಭೂಕಂಪಗಳನ್ನು ತಡೆಯಬಲ್ಲ ದೇವರು, ಹಿಟ್ಲರ್, ಮುಸಲೋನಿ

ಯಂಥವರನ್ನು ಹದಕ್ಕೆ ತಂದು ಮಾನವರನ್ನಾಗಿಸಬಲ್ಲ ದೇವರು, 'ಇವರ ನೆರಳೂ ನಮ್ಮ ಮೇಲೆ ಬೀಳಬಾರದು' ಎನಿಸುವಷ್ಟು ಅಸಹ್ಯಗೊಳಿಸುವ ರಾಜಕಾರಣಿಗಳಿಗೆ ಬುದ್ಧಿ ಕಲಿಸಬಲ್ಲ ದೇವರು, ನ್ಯೂಕ್ಲಿಯರ್ ಅಸ್ತ್ರಗಳನ್ನು ಬಳಸದಂತೆ ತಡೆಯಬಲ್ಲ ದೇವರು, ಒಟ್ಟಿನಲ್ಲಿ ಜೀವಕೋಟಿಯ ಸಂಕಟವನ್ನು ಪರಿಹರಿಸಬಲ್ಲ ದೇವರು—ಅಂಥ ದೇವರಿದ್ದರೆ ಯಾರು 'ಬೇಡ' ಎನ್ನುತ್ತಾರೆ!

ದೇವರು ಬೇಕು, ಆದರೆ ಅವನಿಲ್ಲ! ಇದು ನಮ್ಮ ಕರುಣಾಜನಕ ಐರನಿ! (ದೇವರು–ಪುಟ–೧೪೩)

ಹೀಗೆ ಮಾನವೀಯ ಮೌಲ್ಯಗಳನ್ನು ಕಾಯ್ದುಕೊಳ್ಳಬಲ್ಲ ದೇವರಿಗಾಗಿ ಹಂಬಲಿಸುವ ಮನಸ್ಸು ಮೂರ್ತಿರಾಯರದು. ದೇವರನ್ನು ಕುರಿತ ಈ ಮಾತುಗಳು ದೇವರ ಬಗೆಗಿನ ಇವರ ಒಟ್ಟಾರೆ ನಿಲುವು ಕೂಡ. ದೇವರುಬೇಕು! ಆದರೆ ಅವನಿಲ್ಲ ಎಂದು ಹೇಳುತ್ತಲೇ ಇಲ್ಲವೆಯನ್ನು ಪೂಜಿಸುವುದರಲ್ಲಿ, ಪ್ರಾರ್ಥಿಸುವುದರಲ್ಲಿ ಅರ್ಥವುಂಟೇ? ಎಂಬ ವ್ಯಂಗ್ಯವನ್ನು ಧ್ವನಿಸುತ್ತಾರೆ. ಇಂಥ ನಿಲುವಿಗೆ ಬರುವ ಮುನ್ನ ಇವರು ಅಪಾರ ಚರ್ಚೆ ನಡೆಸಿದ್ದಾರೆ. ದೇವರನ್ನು ಕುರಿತು ನಮ್ಮಲ್ಲಿನ ಕಲ್ಪನೆಗಳು, ಪುರಾಣಗಳಲ್ಲಿ, ಮಹಾ ಕಾವ್ಯಗಳಲ್ಲಿ, ಜಾನಪದದಲ್ಲಿ, ಪಾಶ್ಚಾತ್ಯರಲ್ಲಿ, ಪೌರಾತ್ಯರಲ್ಲಿ ಹೀಗೆ ತಮ್ಮ ವಿಸ್ತಾರವಾದ ಓದಿನ, ಆಳವಾದ ಜೀವನಾನುಭವದ ಮೂಲಕ ವಾಸ್ತವ ಪ್ರಜ್ಞೆಯಿಂದ ತುಲನಾತ್ಮಕವಾಗಿ, ಸೋದಾಹರಣವಾಗಿ ವಿಮರ್ಶಿಸಿ, ಚರ್ಚಿಸಿ, ಉಜ್ಜಿ, ತೀಡಿತಿಕ್ಕಿ ಇಂಥ ಒಂದು ಮಹತ್ವದ ತೀರ್ಮಾನಕ್ಕೆ ಬರುತ್ತಾರೆ. ವಿಚಾರಗಳ ಮಂಡನೆಯಲ್ಲಿ ಸಮತೋಲನ, ತಮ್ಮ ಜ್ಞಾನಸಂಪತ್ತಿನ ಹಿನ್ನೆಲೆಯಲ್ಲಿ ಪ್ರತಿಯೊಂದನ್ನೂ ಒರೆಹಚ್ಚಿ ನೋಡುವ ತಾರ್ಕಿಕ ದೃಷ್ಟಿ ಇವರ ಕೃತಿಯಲ್ಲಿ ಕಂಡುಬರುವ ಪ್ರಧಾನ ಅಂಶಗಳು. ದೇವರೇ ಇಲ್ಲ ಎಂದು ಖಂಡಿಸುವ ಯತ್ನ ಮಾಡದೆ ದೇವರಿಲ್ಲ ಎಂಬ ಖಚಿತತೆಗೆ ಕೊಡಬಹುದಾಗ ಎಲ್ಲ ಕಾರಣಗಳನ್ನೂ ಕೊಟ್ಟು ವಿಶ್ಲೇಷಣೆ ಮಾಡಿದ್ದಾರೆ. ದೇವರಿಲ್ಲದಿರುವುದಕ್ಕೆ ಸಾವಿರಾರು ಕಾರಣ ಕೊಡುವ ಮನಸ್ಸೇ, ದೇವರಿದ್ದಾನೆ ಎನ್ನುವುದಕ್ಕೆ ಸಮರ್ಥವಾದ ಒಂದು ಕಾರಣವೂ ಸಿಗುತ್ತಿಲ್ಲವಲ್ಲ ಎಂದು ತಡಕಾಡಿದೆ. ಪರಿಪಕ್ವವಾದ ಮಾಗಿದ ಮನಸ್ಸಿಗೆ ಮಾತ್ರ ಇಂಥ ಸಮತೂಕದ ಬರವಣಿಗೆ ಸಾಧ್ಯವಾಗುವುದು.

ಪುರೋಹಿತಶಾಹಿ ಮನೆತನದಲ್ಲಿ ಹುಟ್ಟಿ, ಬ್ರಾಹ್ಮಣ ಸಂಪ್ರದಾಯಗಳ ಚೌಕಟ್ಟಿನಲ್ಲಿ ಬೆಳೆದು, ಬೆಳಗಾದರೆ ಮಡಿಯುಟ್ಟು ಮಂತ್ರ ಪಠಣಮಾಡುತ್ತಾ, ಶ್ಲೋಕವನ್ನು ಗೊಣಗುತ್ತಾ, ಉಪನಯನ, ಯಜ್ಞ, ಹೋಮಾದಿಗಳ

ಧರ್ಮಾಚರಣೆಯಲ್ಲಿ ಮುಳುಗಿರುವ ಆವರಣದಲ್ಲಿಯೇ ಬದುಕು ಆರಂಭಿಸಿದ ಮೂರ್ತಿರಾಯರು ಭಿನ್ನವಾದ ವ್ಯಕ್ತಿತ್ವವನ್ನು, ವೈಚಾರಿಕತೆಯ ಮನೋಭಾವವನ್ನು ತಾಳಿ, ಇಂದ್ರಿಯಾನುಭವಕ್ಕೆ ಎಟುಕದ ನಡವಳಿಕೆಗಳನ್ನು ಋಜುಮಾರ್ಗದಲ್ಲಿ ತಿರಸ್ಕರಿಸುತ್ತ ಸತ್ಯವನ್ನು ಶೋಧಿಸುವ ಪ್ರಾಮಾಣಿಕ ಪ್ರಯತ್ನವನ್ನು ತಮ್ಮ ಬರವಣಿಗೆಯಲ್ಲಿ ಪ್ರಕಟಿಸಿದ್ದಾರೆ.

ಸೃಜನಶೀಲ ಮತ್ತು ಸೃಜನೇತರ ಕೃತಿಗಳನ್ನು ರಚಿಸಿರುವ ಶ್ರೀಯುತರು ಉತ್ತಮ ಅನುವಾದಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಷೇಕ್ಸ್‌ಪಿಯರನ, ಮೋಲಿಯೇರನ ನಾಟಕಗಳನ್ನು, 'ಹವಳದ್ವೀಪ' ಎಂಬ ಕಥೆಯನ್ನು, ಸಾಕ್ರೆಟೀಸನ ಕೊನೆಯ ದಿನಗಳು, ಯೋಧನ ಪುನರಾಗಮನ, ಪಾಶ್ಚಾತ್ಯ ಸಣ್ಣ ಕಥೆಗಳು ಮುಂತಾದ ಕೃತಿಗಳನ್ನೂ ಕನ್ನಡಕ್ಕೆ ತಂದಿದ್ದಾರೆ.

ಹೀಗೆ ಬಹುಮುಖ ಪ್ರತಿಭೆಯುಳ್ಳ ಪ್ರೊ|| ಮೂರ್ತಿರಾಯರು ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ, ಆಕಾಶವಾಣಿ ನಿಲಯದ ಸಹಾಯಕ ನಿರ್ದೇಶಕರಾಗಿ, ಪ್ರಾಂಶುಪಾಲರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ನಿವೃತ್ತಿನಂತರ ಕೂಡ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ, ಕೆಲವು ಸಾಹಿತ್ಯ ಅಕಾಡೆಮಿಯಲ್ಲಿ ಕನ್ನಡ ಸಲಹಾ ಸಮಿತಿಯ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅಮೆರಿಕ, ಕೆನ್ಯಾ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸ ಮಾಡಿ ತಮ್ಮ ಜ್ಞಾನಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾರೆ.

ಹೀಗೆ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಪ್ರೊ|| ಮೂರ್ತಿರಾಯರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದಿವೆ. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ. ಲಿಟ್ ನೀಡಿ ಗೌರವಿಸಿದೆ. ಕೈವಾರದಲ್ಲಿ ನಡೆದ ಅಖಿಲ ಭಾರತ ೫೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಸಿ (೨೨-೨೪ ಮಾರ್ಚ್ ೧೯೮೪) ಸಾಹಿತ್ಯ ಪರಿಷತ್ತು ಗೌರವಿಸಿದೆ. ಇದೀಗ ಆದಿ ಕವಿ ಪಂಪನ ಹೆಸರಿನ "ಪಂಪ ಪ್ರಶಸ್ತಿ" ಲಭಿಸಿದೆ.

ಒಟ್ಟಾರೆ ಹೇಳುವುದಾದರೆ ತೊಂಬತ್ನಾಲ್ಕು ವರ್ಷಗಳ ತುಂಬುಬಾಳನ್ನು ಬಾಳುತ್ತಿರುವ ಪ್ರೊ|| ಎ. ಎನ್. ಮೂರ್ತಿರಾಯರು 'ದೇವರು' ಎಂಬ ಕೃತಿಯ ಮೂಲಕ ನಮಗೆ ಹತ್ತಿರವಾಗಿದ್ದಾರೆ.

ಹಾಲತಿ ಸೋಮಶೇಖರ್

ಶಾಲಾ ಮಕ್ಕಳಿಗೆ ಬೇಕೆ ಸನ್ನಡತೆಯ ಪಾಠ?

"ಶಾಲಾ ಮಕ್ಕಳು ಶಾಲಾ ಜೀವನಕ್ಕೆ ವಿದಾಯ ಹೇಳಿ ಕಾಲೇಜು ಮೆಟ್ಟಿಲು ಹತ್ತಿದ ನಂತರ ಕೃತಕ ಗರ್ಭಪಾತ, ಮರಣ ದಂಡನೆ ಶಿಕ್ಷೆ, ದಯಾ ಹತ್ಯೆ ಇತ್ಯಾದಿಗಳಲ್ಲಿ ನೀತಿ ನಡಾವಳಿ ಅಳವಡಿಕೆಯಾಗಿದೆಯೇ ಇಲ್ಲವೇ ಎಂದು ಚರ್ಚಿಸುತ್ತಾರೆ. ಆದರೆ ಇವರು ಶಾಲೆಗಳಲ್ಲಿ ಕಲಿಯುವ ಕಾಲಕ್ಕೆ ಖಾಸಗಿ ಬದುಕಿನಲ್ಲಿ ಅಗತ್ಯವಾಗಿ ಲಕ್ಷಿಸಬೇಕಾದ ನೀತಿ ನಿಯಮಗಳ ಬಗ್ಗೆ ತಲೆ ಕೆಡಿಸಿ ಕೊಳ್ಳುವುದೇ ಇಲ್ಲ. ಆ ವಯಸ್ಸಿನ ಮಕ್ಕಳಿಗೆ ನೀತಿ ಶಾಸ್ತ್ರದ ಗೊಡವೆ ಅಷ್ಟಾಗಿ ಇರುವುದಿಲ್ಲವೆಂದು ತಿಳಿಯಬಹುದಾದರೂ ಮೋಸ ಮಾಡುವುದು ಅಂಥ ಅಪರಾಧವಲ್ಲವೆಂದು ಅವರು ಹೇಳುವಾಗ ಮಾತ್ರ ದಿಗ್ಭ್ರಾಂತಿಯಾಗುತ್ತದೆ."

ಅಮೆರಿಕಾದ ಸನ್ನಿವೇಶವನ್ನು ಕುರಿತು ಶ್ರೀಮತಿ ಕ್ರಿಸ್ಟಿನಾ ಹಾಫ್ ಸಾಮರ್ಸ್ ಈ ಮೇಲಿನ ಮಾತುಗಳನ್ನಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ನಮ್ಮ ಸಂದರ್ಭದ ಒಂದು ಘಟನೆ ನೆನಪಿಗೆ ಬರುತ್ತಿದೆ. ಆರನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹುಡುಗನೊಬ್ಬ ಭೋಜನ ಪೂರ್ವದ ತರಗತಿಗಳಿಗೆ ಹಾಜರಾಗಿದ್ದು ಮಧ್ಯಾಹ್ನದ ಕ್ಲಾಸ್‌ಗಳಿಗೆ ಚಕ್ಕರ್ ಹೊಡೆದ. ಮಾರನೆಯ ದಿನ ಅವನ ತರಗತಿಯ ಉಪಾಧ್ಯಾಯಿನಿ 'ನಿನ್ನೆ ನೀನು ಮಧ್ಯಾಹ್ನದ ತರಗತಿಗಳಿಗೆ ಬಂದಿರಲಿಲ್ಲವೆಂದು' ಕೇಳಿದಾಗ ಹುಡುಗ ತಮ್ಮ ಅಜ್ಜ ತೀರಿಕೊಂಡ ಸುದ್ದಿ ಬಂದದ್ದರಿಂದ ತುರ್ತಾಗಿ ಮನೆಗೆ ಹೋಗಬೇಕಾಯಿತೆಂದು ತಿಳಿಸಿದ. ಫೋನ್ ಮಾಡಿ ಕೇಳಲಾಗಿ ಹುಡುಗನ ತಾಯಿ ಅಂಥಾದ್ದೇನೂ ನಡೆದಿಲ್ಲವೆಂದು ತಿಳಿಸಿದರಲ್ಲದೆ ತಮ್ಮ ಮಗ ಕೊಟ್ಟಿದ್ದ ಸಬೂಬಿನಿಂದ ಗಾಬರಿಗೊಂಡರು. ವಾಸ್ತವವಾಗಿ ಆ ಹುಡುಗನ ಅಜ್ಜ ಸತ್ತಿರಲಿಲ್ಲ. ಅಲ್ಲದೆ ಅವನು ನೇರವಾಗಿ ಮನೆಗೂ ಹೋಗಿರಲಿಲ್ಲ. ಹಾಗಾದ್ರೆ ಅವನು ಎಲ್ಲಿ ಹೋಗಿದ್ದ? ಗೆಳೆಯನ ಮನೆಗೆ ಹೋಗಿ ಸಂಜೆಯವರೆಗೆ ಟಿ.ವಿ. ನೋಡಿದ್ದ. ಟಿ.ವಿ. ನೋಡುವುದಕ್ಕೆ ಅಜ್ಜಯನ್ನು 'ಸಾಯಿಸಬೇಕೆ? ಯಾಕೆ ಸುಳ್ಳು ಹೇಳಿದೆ ಎಂದು ಟೀಚರ್ ಕೇಳಿದರೆ ಹುಡುಗ ನೆಲ ನೋಡಿಕೊಂಡು ನಿಂತನಂತೆ.

ಚಿಕ್ಕಮಕ್ಕಳು ತಮ್ಮದಲ್ಲದ ಪೆನ್ನು, ಪೆನ್ಸಿಲ್ಲು ಮತ್ತು ರಬ್ಬರ್‌ಗಳನ್ನು ಶಾಲೆಯಿಂದ ತಂದಾಗ ತಂದೆ ತಾಯಿಗಳಿಗೆ 'ಶಾಕ್' ಆಗದೆ ಪುಳಕವಾದರೆ

೧೯೯೪ರ ಜನವರಿ 'ಸ್ಪ್ಯಾನ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಕ್ರಿಸ್ಟಿನಾ ಹಾಫ್ ಸಾಮರ್ಸ್‌ರ ಲೇಖನದ ಅನುವಾದ.

ಮುಂದೆ ಬೆಳೆದು ಹೆಮ್ಮರವಾಗುವ ಐಬಿನ ಬೀಜಾಂಕುರವಾದಂತೆಯೇ ಸರಿ. ಗಿಡವಾಗಿ ಬಗ್ಗದ್ದನ್ನ ಮರವಾಗಿ ಬಗ್ಗಿಸುವುದು ಕಷ್ಟವಲ್ಲವೆ? ಕೇವಲ ಟಿ.ವಿ. ನೋಡುವುದಕ್ಕಾಗಿ ಅಜ್ಜಿಯನ್ನೇ 'ಕೊಲೆ' ಗೈಯ್ಯುವ ಬಾಲಕ, ಪಾಸಾಗುವ ತರಾತುರಿಯಲ್ಲಿ ಪರೀಕ್ಷೆಯಲ್ಲಿ ನಕಲು ಮಾಡುವ ಹುಡುಗ, ಹಾಗೆಯೇ ಬೇರೊಬ್ಬರ ಪೆನ್ಸಿಲ್, ರಬ್ಬರ್ ತೆಗೆದುಕೊಂಡು ಇಟ್ಟುಕೊಳ್ಳುವ ಮಗು— ಇವರಿಗೆಲ್ಲ ಸರಿಯಾದ ಕೌಟುಂಬಿಕ ವಾತಾವರಣ ದಕ್ಕುತ್ತಿಲ್ಲ ಎಂಬುದು ಸ್ವಯಂಸ್ಪಷ್ಟವಾಗುತ್ತದೆ. ಅವರು ಮಾಡುತ್ತಿರುವುದು ತಪ್ಪು ಎಂದು ಅವರನ್ನು ಅಲ್ಲಲ್ಲೇ ತಿದ್ದದೇ ಹೋದರೆ ಅವರು ಬೆಳೆದು ದೊಡ್ಡವರಾದ ಮೇಲೆ ಇದರ ಹತ್ತರಷ್ಟು ಪ್ರಮಾಣದ ಪ್ರಮಾದಗಳನ್ನು ಅನಾಯಾಸವಾಗಿ ಮತ್ತು ನಿರ್ಭಿಡೆಯಿಂದ ಮಾಡುತ್ತಾರೆ.

ಶಾಲೆ ಕಲಿಯುವಾಗಲೇ ನೈತಿಕತೆಯ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸದ ಮಕ್ಕಳು ಕಾಲೇಜು ಮೆಟ್ಟಿಲು ಹತ್ತಿದ ಮೇಲೆ ಸಾಮಾಜಿಕ ನೈತಿಕತೆಯ ಬಗ್ಗೆ ಭಾಷಣ ಬಿಗಿಯುವುದನ್ನು ಕರಗತ ಮಾಡಿಕೊಳ್ಳುತ್ತಾರೆ. ಖಾಸಗಿ ನೈತಿಕತೆ ಎಂಬುದು ಒಂದಿದೆ ಎಂದು ಅವರಿಗೆ ಮನವರಿಕೆಯಾಗಬೇಕಾದುದು ಅತ್ಯಗತ್ಯ. ವಾಸ್ತವವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಖಾಸಗಿ ನೈತಿಕತೆಗೆ ಮೊದಲು ಮನ್ನಣೆ ಕೊಡಬೇಕು, ಸಾಮಾಜಿಕ ನೈತಿಕತೆಯ ಸ್ಥಾನ ಎರಡನೆಯದು. ಇವೆರಡು ಬೇರೆ ಬೇರೆ ಎಂದು ಹೇಳುವಾಗಲೂ ಇವುಗಳನ್ನು ಸಮಪ್ರಮಾಣದಲ್ಲಿ ಅನುಸರಿಸದ ಹೊರತು ಸಮಾಜದ ಸಮತೋಲನದಲ್ಲಿ ಏರುಪೇರಾಗುವುದು ಖಂಡಿತ.

ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯದ ಬಗ್ಗೆ ಹೆಚ್ಚು ತಿಳಿಸಿಕೊಡಬೇಕು ಎಂದು ಕೆಲವು ಶಿಕ್ಷಕರು ಅಭಿಪ್ರಾಯ ಪಡುತ್ತಾರೆ. ಅಂಥವರು ವಾದ ಮಾಡುವ ಕ್ರಮವನ್ನು ಹೀಗೆ ದಾಖಲು ಮಾಡಬಹುದು: "ನೀತಿಯುತ ಸಂಸ್ಥೆಗಳನ್ನು ನಾವು ಪಡೆಯುವ ತನಕ ನೀತಿವಂತ ಜನರನ್ನು ಪಡೆಯಲಾಗದು. ನೀತಿಯುತ ಸರ್ಕಾರವನ್ನು ಪಡೆಯುವ ತನಕ ನೀತಿವಂತ ಪ್ರಜೆಗಳನ್ನು ಪಡೆಯಲಾಗದು." ವಸ್ತುಸ್ಥಿತಿ ಹಾಗಿರಲಾಗಿ ಖಾಸಗಿ ನೈತಿಕತೆಯೆಂಬ ಮಧ್ಯಮವರ್ಗದ ನೈತಿಕತೆಯ ಬಗ್ಗೆ ಮಾತನಾಡುತ್ತಾ ವೃಥಾ ಕಾಲಹರಣ ಮಾಡುವ ಬದಲು ಸಾಮಾಜಿಕ ಅನ್ಯಾಯದ ಬಗ್ಗೆ ಶಾಲಾ ಮಕ್ಕಳ ಗಮನ ಸೆಳೆಯುವುದು ಆಗತ್ಯವೆಂದು ಅವರ ವಾದ.

ಸಾಮಾಜಿಕ ಅನ್ಯಾಯದ ಬಗ್ಗೆ ಗಮನ ಸೆಳೆಯಬೇಕು ಎಂದು ವಾದಿಸುವ ಶಿಕ್ಷಕಿ ಮನೆಯಲ್ಲಿ ಪ್ರಬಂಧ ಬರೆದುಕೊಂಡು ಬನ್ನಿ ಎಂದು ಮಕ್ಕಳಿಗೆ ವಿಷಯ ಕೊಟ್ಟಾಗ ಮುಕ್ಕಾಲು ಮೂರು ವೀಸ ಪಾಲು ಮಕ್ಕಳು ಬೇರೆ ಪುಸ್ತಕಗಳಿಂದ ಸಾರಾಸಗಟು ನಕಲು ಮಾಡಿ 'ಪ್ರಬಂಧ' ತಯಾರಿಸಿದ್ದರು. ಇವರು ಬೋಧಿಸಲು ಹೆಣಗುವ ನೀತಿ ಪಾಠದ ಕತೆ ಏನಾಯಿತು? ಉಪಾಧ್ಯಾಯಿನಿ ಕೊಟ್ಟ ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿ ನಕಲು ತಯಾರಿಸುವುದು ತಪ್ಪು ಎಂದು ತಿಳಿಯದ ಮಕ್ಕಳು ಸಾಮಾಜಿಕ ನ್ಯಾಯದ ಬಗ್ಗೆ ಸೊಪ್ಪು ಹಾಕುತ್ತಾರೆಯೇ?

ಕಾಲೇಜು ಮೆಟ್ಟಿಲು ಹತ್ತುವ ಹುಡುಗರ ಕತೆ ಇದಕ್ಕಿಂತಲೂ ಚಿಂತಾಜನಕ ವಾಗಿರುತ್ತದೆ; ಏಕೆಂದರೆ ಮೋಸ ಮಾಡುವುದು ತಪ್ಪು ಎಂದು ಅನ್ನಿಸದಂಥ 'ನೀತಿ ನಡಾವಳಿ' ಅವರಿಗೆ ರಕ್ತಗತವಾಗಿ ಹೋಗಿರುತ್ತದೆ. ಪುಟ್ಟ ಮಗು ಮೊಂದಕ್ಕೆ ಚಿತ್ರ ಹಿಂಸೆ ಕೊಡುವುದು, ಹಸಿವೆಯಿಂದ ಬೇರೆಯವರು ಸಾಯುವು ದನ್ನು ನೋಡಿಯೂ ನೋಡದಂತಿರುವುದು, ಅಂಗವಿಕಲರನ್ನು ನೋಡಿ ಅಣಕಿಸಿ ಕೊಳ್ಳುವುದು—ಇವೆಲ್ಲಾ ನೈತಿಕವಾಗಿ ತಪ್ಪು ಎಂದು ತಿಳಿಯಬೇಕಾದ ಅಗತ್ಯವಿದೆ.

ವಿದ್ಯಾರ್ಥಿಗಳೆಲ್ಲರೂ ನೀತಿ ನಡಾವಳಿಯಲ್ಲಿ ಮೊಂಡಾಗಿಲ್ಲದಿರಬಹುದು, ಸುಳ್ಳು, ಮೋಸವನ್ನು ರಕ್ತಗತ ಮಾಡಿಕೊಂಡಿಲ್ಲದಿರಬಹುದು. ಆದಾಗ್ಯೂ ನೈತಿಕ ಶೈಥಿಲ್ಯ ಸ್ವಲ್ಪ ಹೆಚ್ಚು ವ್ಯಾಪಕವಾಗುತ್ತಿರುವುದನ್ನು ಗಮನಿಸ ಬಹುದಾಗಿದೆ. ನೈತಿಕವಾಗಿ ಒಂದು ತೀರ್ಮಾನಕ್ಕೆ ತಲುಪುವ-ಸಾಮರ್ಥ್ಯ ವಿದ್ಯಾರ್ಥಿಗಳಲ್ಲಿ ಕ್ಷೀಣವಾಗುತ್ತಿರುವುದು ಕಂಡು ಬರುತ್ತಿದೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರೊಬ್ಬರು ಪ್ರತಿ ವರ್ಷ ಒಂದು ದೊಡ್ಡ ತರಗತಿಗೆ ಎರಡನೆ ಮಹಾಯುದ್ಧ ಮತ್ತು ನಾಜಿಗಳ ಬಗ್ಗೆ ಉಪನ್ಯಾಸ ಗಳನ್ನು ಕೊಡುತ್ತಾರೆ. ತಮ್ಮ ವಾದವನ್ನು ವಿದ್ಯಾರ್ಥಿಗಳು ಒಪ್ಪುತ್ತಿದ್ದಾರೆ ಎಂದು ಭಾವಿಸಿದ ಪ್ರಾಧ್ಯಾಪಕರು ತಮ್ಮ ಬೋಧನ ಸಹಾಯಕ ತಿಳಿಸಿದ ಸಂಗತಿಯಿಂದಾಗಿ ದಿಗ್ಭ್ರಾಂತರಾಗುತ್ತಾರೆ. ಏಕೆಂದರೆ ತಾವು ಹೇಳುವುದನ್ನು ಸುಮ್ಮನೆ ಕೇಳಿಕೊಳ್ಳುತ್ತಿರುವಂತೆ ಕಾಣುವ ವಿದ್ಯಾರ್ಥಿಗಳು ಒಳಗೊಳಗೆ ನಾಜಿ ಕಾಲದ ನರಮೇಧಕ್ಕಾಗಿ ಯಾರನ್ನೂ ನಿಂದಿಸಲಾಗದೆಂದು ನಂಬುವವರು. ವಿದ್ಯಾರ್ಥಿಗಳ ಪ್ರಕಾರ ಆ ನರಮೇಧ ಒಂದು ವಿಧದಲ್ಲಿ ನೈಸರ್ಗಿಕ ಘಟನೆ; ಅನಿವಾರ್ಯವೂ ಅಪರಿಹಾರ್ಯವೂ ಆದಂಥ ಆ ಘಟನೆ ನಡೆದ ಎರಡನೇ

ಮಹಾ ಯುದ್ಧದ ಸನ್ನಿವೇಶ ಅವರ ಅಭಿಪ್ರಾಯದಂತೆ "ದೋಷರಹಿತ ಚರಿತ್ರೆ."

ನೀತಿ ಯಾವುದು ಅನೀತಿ ಯಾವುದು ಎಂದು ವಿಂಗಡಿಸಿ ಹೇಳಲಾಗದ ಮಕ್ಕಳು 'ನೈತಿಕ ಅನಕ್ಷರತೆ'ಗೆ ತುತ್ತಾದವರು. ತತ್ವಶಾಸ್ತ್ರಜ್ಞರು ಇದನ್ನು 'ನೈತಿಕ ಉಗ್ರುವಿಕೆ' ಎಂದು ಕರೆದರೆ ಶಿಕ್ಷಣ ತಜ್ಞರೊಬ್ಬರು 'ನೈತಿಕ ಓಜೋನ್ ಪದರದಲ್ಲಿ ಉಂಟಾಗಿರುವ ರಂಧ್ರ' ಎಂದು ಕರೆಯುತ್ತಾರೆ. "ದೋಷರಹಿತ ಚರಿತ್ರೆ"ಯಲ್ಲಿನ ದೋಷವನ್ನು ತೋರಿಸಲು, "ನೈತಿಕ ಓಜೋನ್ ಪದರದಲ್ಲಿ ಆಗಿರುವ ರಂಧ್ರ"ವನ್ನು ಮುಚ್ಚಲು ನೈತಿಕವಾಗಿ ಸಾಕ್ಷರರನ್ನಾಗಿ ಮಾಡಲು ಶಾಲೆಗಳು ಯಾವ ಉಪಾಯ ಅನುಸರಿಸಬೇಕು?

ಗತಕಾಲವನ್ನು ನೆನಪು ಮಾಡಿಕೊಳ್ಳುವಾಗ ಅಮೆರಿಕದ ಕಾಲೇಜುಗಳಲ್ಲಿ ಹಿಂದೆ ಯಾವ ರೀತಿ ನೀತಿಶಾಸ್ತ್ರದ ಬೋಧನೆಯಾಗುತ್ತಿತ್ತು ಎಂದು ತಿಳಿಯುತ್ತದೆ. ೧೯ನೇ ಶತಮಾನದಲ್ಲಿ ನೀತಿಶಾಸ್ತ್ರವು ಕಾಲೇಜು ಶಿಕ್ಷಣದಲ್ಲಿ ಅತ್ಯಂತ ಪ್ರಮುಖವಾದ ವಿಷಯವಾಗಿತ್ತು. ಸಾಮಾನ್ಯವಾಗಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ, ಕಾಲೇಜಿನ ಅಧ್ಯಕ್ಷರೇ ಈ ವಿಷಯವನ್ನು ಬೋಧಿಸುತ್ತಿದ್ದರು. ಸೀನಿಯರ್ ನೀತಿಶಾಸ್ತ್ರದ ಕೋರ್ಸ್ ವಿದ್ಯಾರ್ಥಿಗಳ ಕಾಲೇಜು ಜೀವನದ ಉಚ್ಚ ಅನುಭವವಾಗುತ್ತಿತ್ತು. ಆದರೆ ೨೦ನೇ ಶತಮಾನದಲ್ಲಿ ಸಾಮಾಜಿಕ ವಿಜ್ಞಾನಗಳ ಪ್ರಾಮುಖ್ಯತೆ ಹೆಚ್ಚಾದಾಗ ನೀತಿಶಾಸ್ತ್ರದ ಸ್ಥಾನ ಗೌಣವಾಯಿತು, ಬರುಬರುತ್ತಾ ತತ್ವಶಾಸ್ತ್ರ ಇಲಾಖೆ ಬೋಧಿಸುವ ಹಲವು ವಿಷಯಗಳಲ್ಲಿ ಇದೂ ಒಂದಾಯಿತು. ೧೯೬೦ರ ದಶಕದ ಮಧ್ಯಭಾಗದ ಹೊತ್ತಿಗೆ ನೈತಿಕ ತತ್ವಶಾಸ್ತ್ರಕ್ಕೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಅತ್ಯಂತ ಕಡಿಮೆಯಾಯಿತು. ಉನ್ನತ ಶಿಕ್ಷಣದ ಚರಿತ್ರಕಾರರೊಬ್ಬರು ಅಭಿಪ್ರಾಯಪಡುವಂತೆ "ಕಾಲೇಜಿನ ನೀತಿಶಾಸ್ತ್ರ ವಿಭಾಗ ನಿಜಕ್ಕೂ ಅಪಾಯದಲ್ಲಿತ್ತು."

ಅನ್ವಯಿಕ ನೀತಿಶಾಸ್ತ್ರವನ್ನು ಬೋಧಿಸಿದ ಅಧ್ಯಾಪಕರೊಬ್ಬರು ವರ್ಷಾಂತ್ಯದಲ್ಲಿ ಈ ಕೋರ್ಸಿನ ಬಗ್ಗೆ ನಿಮ್ಮ ಅಭಿಪ್ರಾಯವೇನೆಂದು ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಿದಾಗ ಅವರು ಬರೆದಿದ್ದ ಉತ್ತರ ನಿಜಕ್ಕೂ ದಿಗಿಲುಂಟುಮಾಡುವಂತಿತ್ತು; ಒಬ್ಬ ಬರೆದಿದ್ದ: "ನನ್ನ ಪ್ರಕಾರ ಸರಿ ಅಥವಾ ತಪ್ಪು ಎಂಬ ಪ್ರಭೇದ ಇಲ್ಲವೇ ಇಲ್ಲ, ಇರುವುದೇನಿದ್ದರೂ ಒಳ್ಳೆಯ ಅಥವಾ ಕೆಟ್ಟ ವಾದಗಳು ಮಾತ್ರ." ಇನ್ನೊಬ್ಬನ ಅಭಿಪ್ರಾಯ ಹೀಗಿತ್ತು: "ನೈತಿಕತೆ ಎಂಬುದು ಇಲ್ಲವೇ ಇಲ್ಲ ಎಂದು ಮಾತ್ರ ನಾನು ಕಲಿತೆ." ವಿದ್ಯಾರ್ಥಿಗಳ ಈ

ಬಗೆಯ ನೈತಿಕ ಅಗ್ನೇಯತಾವಾದಕ್ಕೆ ಏನು ಕಾರಣ ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಪ್ರತಿಯೊಬ್ಬನ ಅರಿವಿನಲ್ಲಿಯೂ ಕೆಲವು ವಿವಾದಾತೀತ ಸತ್ಯಗಳು ಇರುತ್ತದೆ, ಇರಬೇಕು. ಆಧುನಿಕ ಅಮೆರಿಕನ್ನರ ಪ್ರಕಾರ ಈ ವಿವಾದಾತೀತ ಸತ್ಯಗಳೆಂದರೆ ಇವು:

> **ಒಂದು ಮಗುವನ್ನು ಒರಟಾಗಿ ಕಾಣುವುದು ತಪ್ಪು, ಇನ್ನೊಬ್ಬರನ್ನು ಅವಮಾನಗೊಳಿಸುವುದು, ಪ್ರಾಣಿ ಹಿಂಸೆಮಾಡುವುದು, ನಿಮ್ಮ ಬಗ್ಗೆಯೇ ಸದಾ ಯೋಚಿಸುವುದು, ಕಳ್ಳತನ, ಸುಳ್ಳು ಹೇಳುವುದು, ಕೊಟ್ಟ ಮಾತಿಗೆ ತಪ್ಪುವುದು—ಇವೆಲ್ಲ ತಪ್ಪು; ಇತರರಿಗೆ ಗೌರವ ತೋರಿಸುವುದು ಮತ್ತು ಇತರರನ್ನು ಅರ್ಥಮಾಡಿಕೊಳ್ಳುವುದು, ಪರೋಪಕಾರ, ಉದಾರಗುಣ—ಇವೆಲ್ಲ ಸರಿಯಾದವು.**

ಸರಿ-ತಪ್ಪುಗಳನ್ನು ಪಟ್ಟಿ ಮಾಡುವ ಪ್ರಯತ್ನದಲ್ಲಿ ಅಮೆರಿಕದ ಆನ್ವಯಿಕ ನೀತಿಶಾಸ್ತ್ರಜ್ಞರೊಬ್ಬರು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಹೇಳಿರುವ ಮಾತುಗಳನ್ನು ಬಹಳ ಹಿಂದೆಯೇ ಬಸವಣ್ಣನವರು ಲೋಕಪ್ರಸಿದ್ಧವಾದ ವಚನದಲ್ಲಿ ಹೇಳಿದ್ದಾರೆ. ಕನ್ನಡಿಗರೆಲ್ಲರ ನಾಲಗೆ ಮೇಲೆ ನಲಿದಾಡುವ ಈ ವಚನವನ್ನು ಆಗಾಗ ಮನಸ್ಸಿಗೆ ತಂದುಕೊಂಡರೆ ಶ್ರೇಯಸ್ಸು. ಕಾರಣ, ಆಧುನಿಕ ಬದುಕಿನ ಧಾವಂತದಲ್ಲಿ ಈ ವಚನದ ಸೊಗಸಾದ ನುಡಿಗಟ್ಟುಗಳನ್ನು ಗುನುಗಿ 'ಭೇಷ್' ಅಂತ ಬಾಯಿ ಚಪ್ಪರಿಸುತ್ತೇವೆಯೇ ಹೊರತು ಈ ವಚನದ ಅರ್ಥವನ್ನು ಅರಿತು ಅರಗಿಸಿಕೊಳ್ಳುವ ಸಾಹಸಕ್ಕೆ ಹೋಗುವುದಿಲ್ಲ. ಅಣ್ಣನವರು ಹೇಳಿದುದು ಹೀಗೆ:

> ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
> ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
> ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ,
> ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
> ಇದೇ ನಮ್ಮ ಕೂಡಲ ಸಂಗನನೊಲಿಸುವ ಪರಿ

ಕುಂದದ ಕಾಂತಿಯಿಂದ ಸದಾ ತೊಳಗುವ ವಚನ ಇದು.

ಅಮೆರಿಕದ ಕಾಲೇಜುಗಳಲ್ಲಿ ನೀತಿಶಾಸ್ತ್ರ ಬೋಧನೆಗಾಗಿ ಮೊದಲು ಅರಿಸ್ಟಾಟಲನ ಕಡೆ ಗಮನ ಹರಿಸುತ್ತಾರೆ. ಸನ್ನಡತೆಯ ಬಗ್ಗೆ ಅರಿಸ್ಟಾಟಲ್

ಹೆಚ್ಚು ಒತ್ತುಕೊಟ್ಟು ಹೇಳಿರುವುದರಿಂದ ಇದಕ್ಕೆ ಮೊದಲ ಮನ್ನಣೆ ದೊರೆಯ ಬೇಕೆಂದು ತಜ್ಞರ ಅಭಿಮತ. ಅರಿಸ್ಟಾಟಲ್‌ನ ಜೊತೆಗೆ ಪ್ಲೇಟೋ, ಅಗಸ್ಟಿನ್, ಕಾಂಟ್ ಮತ್ತು ಮಿಲ್ ಮುಂತಾದ ತತ್ವಜ್ಞಾನಿಗಳು ಸನ್ನಡತೆಯ ಬಗ್ಗೆ ಹೇಳಿರುವುದನ್ನು ವ್ಯವಸ್ಥಿತವಾಗಿ ತಿಳಿಸಿಕೊಡುತ್ತಾರೆ. ಈ ಕ್ಷೇತ್ರದಲ್ಲಿ ಸಮ ಕಾಲೀನ ಸಾಹಿತ್ಯ ವಿಪುಲವಾಗಿದೆಯಾದರೂ ಪ್ರಾರಂಭ ಮಾತ್ರ ಅರಿಸ್ಟಾಟಲ್ ನಿಂದಲೇ.

ಧೈರ್ಯ, ಔದಾರ್ಯ, ಹಿತಮಿತತೆ ಮುಂತಾದ ಸನ್ನಡತೆ ಶಿಕ್ಷಣದ ಬಗ್ಗೆ ಅರಿಸ್ಟಾಟಲ್ ಹೇಳಿರುವುದರಲ್ಲಿ ವಿದ್ಯಾರ್ಥಿಗಳು ಔಚಿತ್ಯ ಕಾಣುತ್ತಾರೆ. ಜೊತೆಗೆ ನೈತಿಕತೆ ಎನ್ನುವುದು ಬೇರೆ ಬೇರೆ ಸಮಾಜಕ್ಕೆ ಬೇರೆ ಬೇರೆಯಾಗಿರುತ್ತದೆ ಎಂಬ ತಿಳಿವಳಿಕೆ ತಪ್ಪು ಎಂದು ತಿಳಿಯುತ್ತಾರೆ. ಏಕೆಂದರೆ, ಧೈರ್ಯ, ಉದಾರ ಗುಣ ಮತ್ತು ಹಿತಮಿತತೆ–ಇವು ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ಯಾಗಿರಲು ಸಾಧ್ಯವಿಲ್ಲ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಮಕ್ಕಳಿಗೆ ಸನ್ನಡತೆಯ ತತ್ವ ಕೊಂಚ ಭಾರವೆನಿಸಿದರೂ ಮಹತ್ತರವಾದದ್ದನ್ನು ಸಾಧಿಸಿರುವ ಸ್ತ್ರೀ–ಪುರುಷರ ಜೀವನ ಚರಿತ್ರೆಗಳನ್ನು, ಕತೆಗಳನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಸಮರ್ಥರಿರುತ್ತಾರೆ. ದುರದೃಷ್ಟವಶಾತ್ ಇಂದಿನ ದಿನಗಳಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ನೀತಿ ತುಂಬಿದ ಕತೆ ಹೇಳಿ ಮಕ್ಕಳ ಮನಸ್ಸನ್ನು ಆ ಕಡೆ ವಾಲಿಸುವ ಪರಿಪಾಠವನ್ನು ಯಾಕೊ ಏನೊ ಬಿಟ್ಟುಬಿಟ್ಟಿದ್ದಾರೆ. ಈ ನೀತಿ ಕತೆಗಳನ್ನು ಹೇಳುವಾಗಲೂ ಉಪಾಧ್ಯಾಯರು ನೇರವಾಗಿ ಇದು ಸರಿ ಇದು ತಪ್ಪು ಎಂದು ಖಂಡಿತವಾಗಿ ಹೇಳುವುದಕ್ಕಿಂತ ಕತೆ ಹೇಳಿದ ನಂತರ ಸರಿ ಯಾವುದು ತಪ್ಪು ಯಾವುದು ನೀವೇ ನಿರ್ಧರಿಸಿ ಎಂದು ವಿದ್ಯಾರ್ಥಿಗಳಿಗೆ ಬಿಡುವುದು ಒಳ್ಳೆಯದು.

ನೀತಿ ಕತೆಗಳನ್ನು ಹೇಳುವಾಗ 'ಸಂದಿಗ್ಧ ನೀತಿ'ಯನ್ನೊಳಗೊಂಡ ಕತೆ ಗಳನ್ನು ಹೇಳಬಾರದು. ಉದಾಹರಣೆಗೆ ಏಳು ಜನ ಒಂದು ದೋಣಿಯಲ್ಲಿದ್ದಾರೆ. ನಾಲ್ಕೇ ಜನಕ್ಕಾಗುವಷ್ಟು ಆಹಾರ ಧಾನ್ಯ ಇದೆ. ಆಗ ಅವರೇನು ಮಾಡುವುದು? ಈ ತರಹದ ಕತೆಯಾಗಲೀ ಅಥವಾ ಒಬ್ಬ ಗರೀಬನಿದ್ದಾನೆ; ಅವನ ಹೆಂಡತಿ ಸಕತ್ತು ಕಾಯಿಲೆಯಿಂದ ಬಳಲುತ್ತಿದ್ದಾಳೆ. ಅವನು ಔಷಧಿ ಅಂಗಡಿಯಿಂದ ಔಷಧಿ ಕದಿಯುತ್ತಾನೆ. ಆ ಗರೀಬ ತಪ್ಪಿತಸ್ಥನೋ ಅಲ್ಲವೋ? ಈ ತರಹದ ಕತೆಗಳನ್ನೇ ಆಗಲಿ ಎಳೆಯರ ಮುಂದೆ ಹೇಳಬಾರದು. ಇವುಗಳಲ್ಲಿ ಸನ್ನಡತೆ

ಯಾವುದು ದುರ್ನಡತೆ ಯಾವುದು ಅಥವಾ ಸರಿ ಯಾವುದು ತಪ್ಪು ಯಾವುದು ಎಂದು ಗೊತ್ತಾಗುವುದಿಲ್ಲ. ಆದ ಕಾರಣ, ನೀತಿ ಕತೆಗಳು ಕೇಳುಗರನ್ನು ಸಂದಿಗ್ಧದಲ್ಲಿ ಸಿಲುಕಿಸದಂತೆ ನೇರವಾಗಿ, ನಿಖರವಾಗಿ ಇರಬೇಕಾದುದು ಅವಶ್ಯಕ.

ಮೇಲೆ ಉದಾಹರಿಸಿದ 'ಸಂದಿಗ್ಧ ನೀತಿ' ಕತೆಗಳು ವಿದ್ಯಾರ್ಥಿಗಳ ಮನಸ್ಸಿಗೆ ಕೊಂಚ ಕಾಲ ಕಚಗುಳಿ ಇಡಬಹುದಾದರೂ ಅವರ ಭಾವನೆಗಳನ್ನೂ, ನೀತಿ ಪ್ರಜ್ಞೆಯನ್ನು ತಟ್ಟುವುದಿಲ್ಲ. ಇಲ್ಲಿ ಉದ್ಭವವಾಗುವ ಪ್ರಶ್ನೆಗಳು ಎರಡೂ ಕಡೆ ವಾಲುವ ಸಾಧ್ಯತೆಯನ್ನು ಸೂಚಿಸುವುದರಿಂದ ಕೇಳುಗರು ತಮ್ಮ ನಿರ್ಧಾರಕ್ಕೆ ಬರಲು ಸ್ವತಂತ್ರರಾಗಿರುತ್ತಾರೆ. ಆದರೆ ನಿಜವಾದ ನೀತಿ ಕತೆಗಳಲ್ಲಿ ವಿದ್ಯಾರ್ಥಿಗಳಿಗೆ ಈ ಬಗೆಯ ಸ್ವಾತಂತ್ರ್ಯ ಇರುವುದಿಲ್ಲ, ಇರಬಾರದು. ಹಾಗೂ ಆಗಬಹುದು, ಹೀಗೂ ಆಗುಬಹುದು ಎಂಬ 'ಬೇಲಿ ಮೇಗಲ ಟಿಕಾಣೆ' ಸಾಧ್ಯವಾಗುವುದಿಲ್ಲ. ಈ 'ಸಂದಿಗ್ಧ ನೀತಿ ಕತೆ'ಗಳಿಂದ ಭಿನ್ನವಾದ ಕತೆಯೊಂದನ್ನು ನೊಬೆಲ್ ಪಾರಿತೋಷಕ ವಿಜೇತ ಬರಹಗಾರ ಸಾಲ್ ಬೆಲೊ ಹೇಳಿರುವುದುಂಟು. ಆ ಕತೆ ಹೀಗಿದೆ :

> ಒಂದಾನೊಂದು ಕಾಲದಲ್ಲಿ ರಷ್ಯಾದ ಒಂದು ಪುಟ್ಟ ಯುಹೂದ್ಯರ ಗ್ರಾಮದಲ್ಲಿ ಒಬ್ಬ ರಬ್ಬೈ (ಪಾದ್ರಿ) ಇದ್ದ. ಅವನು ಪ್ರತೀ ಶುಕ್ರವಾರ ಸುಮಾರು ಹೊತ್ತು ಯಾರಿಗೂ ಕಾಣಿಸಿಕೊಳ್ಳದ ಹಾಗೆ ಹೊರಗೆ ಹೋಗುತ್ತಿದ್ದ. ಆ ಹಳ್ಳಿಯ ಆಸ್ತಿಕ ಜನರು ನಮ್ಮ ಗುರು ಈ ವೇಳೆಯಲ್ಲಿ ಸ್ವರ್ಗಕ್ಕೆ ಹೋಗಿ ದೇವರ ಹತ್ತಿರ ಮಾತನಾಡಿ ಬರುತ್ತಾರೆ ಎಂದು ಹೇಳುತ್ತಿದ್ದರು. ಆ ಹಳ್ಳಿಗೆ ಹೊಸದಾಗಿ ಬಂದ ಆಸಾಮಿಯೊಬ್ಬನಿಗೆ ಇದರಲ್ಲಿ ನಂಬಿಕೆ ಬಾರದೆ ರಬ್ಬೈ ನಿಜವಾಗಿ ಆ ಸಮಯದಲ್ಲಿ ಎಲ್ಲಿಗೆ ಹೋಗುತ್ತಾನೆ- ಪರೀಕ್ಷೆ ಮಾಡಿಯೇ ಬಿಡಬೇಕೆಂದು ಮನಸ್ಸಾಯಿತು.
>
> ಒಂದು ಶುಕ್ರವಾರ ಆ ಆಸಾಮಿ ರಬ್ಬೈನ ಮನೆ ಪಕ್ಕ ಅಡಗಿ ಕುಳಿತುಕೊಂಡು ಬೆಳಗಾಗೆದ್ದು ಅವನು ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಹಳ್ಳಿ ರೈತನ ತರಹ ಅಂಗಿ ತೊಟ್ಟುಕೊಂಡು ಹೊರಗೆ ನಡೆಯುವುದನ್ನು ಗಮನಿಸಿದ. ಅವನ ಹಿಂದೆಯೇ ಸದ್ದು ಮಾಡದೆ ಹೊರಟ. ರಬ್ಬೈ ಕೊಡಲಿ ಹಿಡಿದುಕೊಂಡು ಕಾಡಿನ ಕಡೆ ಹೊರಟಿದ್ದ. ಕಾಡು ಸೇರುತ್ತಿದ್ದಂತೆಯೇ ಒಂದು ಮರ ಕಡಿದು ಉರುಳಿಸಿ, ಭರ್ಜರಿಯಾಗಿ ಸೌದೆ ಹೊರೆ ಕಟ್ಟಿಕೊಂಡು

ಊರಿಗೆ ಬಂದು ಒಂದು ಗುಡಿಸಿಲ ಮುಂದೆ ಹೊರೆ ಇಳುಕಿದ. ಆ ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದ ಮುದುಕಿಗೆ ಒಂದು ವಾರಕ್ಕಾಗುವಷ್ಟು ಸೌದೆಯಾಯಿತು. ಮೌನವಾಗಿ ರಬ್ಬೈ ತನ್ನ ಮನೆಗೆ ಹಿಂದಿರುಗಿದ.

ಇದಾದ ನಂತರ ರಬ್ಬೈನನ್ನ ಅಜಮಾಯಿಶಿ ಮಾಡುತ್ತಿದ್ದ ಆಗಂತುಕನ ಮನಃಪರಿವರ್ತನೆಯಾಗಿ ಅವನು ಆ ಗ್ರಾಮದಲ್ಲೇ ನೆಲೆಸಿ ರಬ್ಬೈನ ಶಿಷ್ಯನಾದ. ಆ ಗ್ರಾಮಸ್ಥರಾದರೂ ಈಗ 'ನಮ್ಮ ರಬ್ಬೈ ಪ್ರತೀ ಶುಕ್ರವಾರ ಸ್ವರ್ಗಕ್ಕೆ ಹೋಗಿ ದೇವರ ಜೊತೆ ಮಾತನಾಡಿ ಬರುತ್ತಾರೆ' ಎಂದರೆ ಈ ಆಗಂತುಕ 'ಇನ್ನೂ ಮೇಲಕ್ಕಲ್ಲದಿದ್ದರೆ' ಎಂದು ಮೆಲ್ಲಗೆ ದನಿಗೂಡಿಸುತ್ತಾನೆ.

ಸಾಲ್ ಬೆಲೊ ಹೇಳಿರುವ ಈ ಕತೆಯಲ್ಲಿ ಸಂದಿಗ್ಧತೆಗೆ ಎಡೆಯಿಲ್ಲ. ಈ ಕತೆಯುನ್ನು ಕೇಳುವ ಯಾರೇ ಆಗಲೀ ರಬ್ಬೈ ಮಾಡಿದ್ದು ಸರಿಯೊ ತಪ್ಪೊ ಎಂಬ ಪ್ರಶ್ನೆ ಹಾಕಿಕೊಳ್ಳುವುದಿಲ್ಲ. ನೀತಿಪಾಠ ಸ್ಪಷ್ಟವಾಗೇ ಇದೆ: "ಈ ಸಜ್ಜನ ರಬ್ಬೈ, ದಯಾಮಯಿ, ಅಂತಃಕರಣವುಳ್ಳವನು; ಬಡವಿಯೂ, ದುರ್ಬಲಳೂ ಆದ ಒಂದು ಜೀವಿಗೆ ಸಹಾಯ ಮಾಡುತ್ತಾನೆ. ಇವನ ಹಾಗೆ ಆಗಿ."

ಕತೆಗಳು ಮತ್ತು ದೃಷ್ಟಾಂತ ಕತೆಗಳನ್ನು ಬಳಸಿಕೊಂಡು ಸಂದೇಶ ಮುಟ್ಟಿಸುವುದು ಒಂದು ವಿಧಾನವಾದರೆ ಸಾಹಿತ್ಯ ಕೃತಿಗಳ ಮೂಲಕವಾಗಿ ನೀತಿ ಬೋಧನೆ ಮಾಡುವುದು ಇನ್ನೊಂದು ವಿಧಾನ. ಶೇಕ್ಸ್‌ಪಿಯರ್‌ನ 'ದೊರೆ ಲಿಯರ್'ದಂಥ ಕತೆಯನ್ನು ಗಮನಿಸಿದರೆ ಉಳಿದ ಸಮಸ್ಯೆಗಳು ಈ ನಾಟಕದಲ್ಲಿ ಪ್ರಸ್ತಾಪಿತವಾಗಿದ್ದರೂ ಇಲ್ಲಿನ ಕೇಂದ್ರ ವಸ್ತು 'ಪಿತೃ-ಪುತ್ರ' ಸಂಬಂಧನೇ ಆಗಿದೆ. ಪಿತೃ ತಿರಸ್ಕಾರ ಸಹಜವೆಂದು ಸಮಾಜ ಸಲೀಸಾಗಿ ಒಪ್ಪಿಕೊಳ್ಳುವುದಾದರೆ ಆ ಸಮಾಜಕ್ಕೆ ಉಳಿಗಾಲವಿಲ್ಲವೆಂಬ ಸತ್ಯವನ್ನು 'ದೊರೆ ಲಿಯರ್' ಸ್ಪಷ್ಟಪಡಿಸುತ್ತದೆ. ನೀತಿ ಶಿಕ್ಷಣಕ್ಕೆ ನೈತಿಕ ದೃಷ್ಟಾಂತಗಳು ಅಗತ್ಯವೆಂದು ಅರಿಸ್ಟಾಟಲ್ ಹೇಳಿರುವಂತೆ ಸಾಹಿತ್ಯ ಪಾತ್ರಗಳು ವಿದ್ಯಾರ್ಥಿಗಳಿಗೆ ಅದನ್ನು ಪೂರೈಸಬಲ್ಲವು.

ಈ ಹಿನ್ನೆಲೆಯಲ್ಲಿ ತಜ್ಞರು ಶಿಫಾರಸು ಮಾಡುವ ಕೆಲವು ನಿಯಮಗಳನ್ನು ಅನುಸರಿಸಿದರೆ ಶಾಲಾ ಮಕ್ಕಳಿಗೆ ಸನ್ನಡತೆಯ ಪಾಠ ಲಭ್ಯವಾಗುವುದರಲ್ಲಿ ಸಂದೇಹವಿಲ್ಲ. ಈ ಸಲಹೆ ಸೂಚನೆಗಳು ಹೊಸವೇನಲ್ಲ, ಅವರಲ್ಲೂ ಭಾರತೀಯ ಸಂದರ್ಭದಲ್ಲಿ ಇವು ತೀರಾ ಅನಾದಿ ಕಾಲದವಾಗಿವೆ. ನಮ್ಮ ಬದುಕಿನ ಒಂದು ಅವಿಭಾಜ್ಯ ಅಂಗವಾಗಿದ್ದ ನೀತಿ ಪಾಠ ಪ್ರಾಯಶಃ ಆಧುನಿಕ ಕಾಲದ ಅತಿವೇಗದ

ಧಾವಂತದಲ್ಲಿ, ನಮ್ಮ ನೆರೆಯುವನಿಗಿಂತ ಹೇಗಾದರೂ ಓಟದಲ್ಲಿ ಮೊದಲಿರ ಬೇಕೆಂಬ ಸ್ಪರ್ಧೆಯಲ್ಲಿ ನೀತಿ ನೈವೇದ್ಯವಾಗಿರುವಂತಿದೆ.

ಸಜ್ಜನಿಕೆ, ದಯೆ, ಆತ್ಮ-ಸಂಯಮ, ಪ್ರಾಮಾಣಿಕತೆ—ಇವುಗಳ ಮಹತ್ವ ವನ್ನು ಶಾಲೆಗಳಲ್ಲಿ ಬೋಧಿಸಬೇಕು. ಒಳ್ಳೆಯತನವನ್ನು ಬಲಪಡಿಸುವಂಥ ಕತೆಗಳನ್ನು ಮಕ್ಕಳಿಗೆ ಅಗತ್ಯವಾಗಿ ಹೇಳಬೇಕು. ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ನೀತಿಪಾಠವಿರುವ ಅಭಿಜಾತ ಕೃತಿಗಳನ್ನು ಓದಬೇಕು, ಓದಿದರೆ ಸಾಲದು, ಅಧ್ಯಯನ ಮಾಡಬೇಕು ಹಾಗೂ ಚರ್ಚಿಸ ಬೇಕು.

ಸಾಹಿತ್ಯದಲ್ಲಿ ಧರ್ಮ ಮತ್ತು ತತ್ವಶಾಸ್ತ್ರದಲ್ಲಿ ನಮ್ಮ ನೈತಿಕ ಪರಂಪರೆ ಹೇಗೆ ಬೆಳೆದು ಬಂದಿದೆ ಎಂಬುದನ್ನು ಉಪಾಧ್ಯಾಯರು ಮಕ್ಕಳಿಗೆ ತಿಳಿಯ ಪಡಿಸಬೇಕು. ಸನ್ನಡತೆಯನ್ನು ಬೋಧಿಸಬಹುದೆಂಬುದೇ ಈ ಸಲಹೆಯ ಇಂಗಿತ, ಹಾಗೂ ಪರಿಣಾಮಕಾರಿಯಾದಂಥ ನೀತಿ ಶಿಕ್ಷಣ ಮನಸ್ಸು ಭಾವನೆಗಳೆರಡಕ್ಕೂ ಒಗ್ಗುವುದರಲ್ಲಿ ಸಂದೇಹವಿಲ್ಲ.

ಐಹಿಕ ಐಭೋಗದ ಪರಾಕಾಷ್ಠೆ ಮುಟ್ಟಿರುವ ಅಮೆರಿಕ ಸಮಾಜ ತನ್ನ ಪರಿಸರದಲ್ಲಿ ಗೈರುಹಾಜರಾಗುತ್ತಿರುವ ಸನ್ನಡತೆಯನ್ನು ಕುರಿತು ಆತಂಕ ಗೊಂಡಿರುವ ಪ್ರಸ್ತುತದಲ್ಲಿ ಆ ಗುರಿಯತ್ತ ದಾಪುಗಾಲು ಹಾಕುತ್ತಿರುವ ನಮಗೆ ಪರೋಕ್ಷವಾದ ಪಾಠವಿದೆ. ನೈತಿಕತೆ ಹಾಗೂ ಮಾನವೀಯ ಮೌಲ್ಯಗಳು ಸಂಪೂರ್ಣವಾಗಿ ನಾಶವಾದ ಬಳಿಕ ಪ್ರಲಾಪಿಸುವ ಬದಲು ಇವುಗಳನ್ನು ಹೆಚ್ಚಿಸಿಕೊಂಡು ಸಾಮಾಜಿಕ ಸಮತೋಲನ ಸಾಧಿಸುವತ್ತ ನಾವು ಕಾರ್ಯಪ್ರವೃತ್ತರಾಗಬೇಕಾಗಿದೆ.

ಸಿ. ನಾಗಣ್ಣ

ಪಾಪಿಯು ಯಾವಾಗಲೂ ಪ್ರಕಾಶರಹಿತ ಅಂಧಕಾರವನ್ನೇ ಬಯಸು ತ್ತಾನೆ. ಏಕೆಂದರೆ ಪ್ರಕಾಶದಿಂದ ತನ್ನ ಪಾಪ ಕೃತ್ಯಗಳು ಬೆಳಕಿಗೆ ಬಿದ್ದಾವೆಂದು ಅವನಿಗೆ ಅಂಜಿಕೆಯಿರುತ್ತದೆ.

—ಟಾಲ್‌ಸ್ಟಾಯ್

ಮರಳಿ ಬಂದ ಮಾರಕ ರೋಗ ಮಲೇರಿಯಾ

ಭಾರತದಲ್ಲಿ ಮಲೇರಿಯಾ....

ಮೂವತ್ತು ವರ್ಷಗಳ ಹಿಂದೆ ಭಾರತ ಮಲೇರಿಯಾವನ್ನು ನಿರ್ನಾಮ ಮಾಡುತ್ತಿರುವಂತೆ ಕಂಡಿತು. ೧೯೬೫ರಲ್ಲಿ ನಮ್ಮ ದೇಶದಲ್ಲಿ ಒಂದು ಲಕ್ಷ ಜನರು ಬಳಲಿದರೂ, ಒಬ್ಬ ವ್ಯಕ್ತಿಯೂ ಸತ್ತಿರಲಿಲ್ಲ. ಸ್ವಾತಂತ್ರ್ಯದ ಸಮಯದಲ್ಲಿ ಸುಮಾರು ೭೫ ದಶಲಕ್ಷ ಭಾರತೀಯರು ಈ ರೋಗದಿಂದ ಬಳಲುತ್ತಿದ್ದರು. ಪ್ರತಿವರ್ಷ ೮ ಲಕ್ಷ ಜನರಾದರೂ ಮೃತರಾಗುತ್ತಿದ್ದರು. ಅರವತ್ತರ ದಶಕದಲ್ಲಿ ಮರಳಿ ಬಂದ ಮಲೇರಿಯಾ ೧೯೭೬ರ ಸಮಯಕ್ಕೆ ಇನ್ನಷ್ಟು ಜನರ(೬.೫ ದಶಲಕ್ಷ)ನ್ನು ರೋಗಗ್ರಸ್ತರನ್ನಾಗಿಸಿತು. ಈ ದಿಶೆಯಲ್ಲಿ ಹೆಚ್ಚು ಕಾಳಜಿ ವಹಿಸಿದ್ದರ ಫಲವೆಂಬಂತೆ, ಈ ರೋಗದ ದಾಳಿ ಕಡಿಮೆಯಾಗ ಹತ್ತಿತು. ಇಷ್ಟಾದರೂ, ಎರಡು ದಶಲಕ್ಷ ಜನರು ಈಗಲೂ ಮಲೇರಿಯಾದಿಂದ ಬಳಲುತ್ತಾರೆ. ಮೃತರಾದವರ ಸಂಖ್ಯೆ ಕೇವಲ ೩೦೦ಕ್ಕೆ ಇಳಿದಿದೆ.

ಪ್ರಪಂಚಾದ್ಯಂತ ಮಲೇರಿಯಾ ಮತ್ತೆ ಕಾಣಿಸಿಕೊಂಡಿರುವುದಕ್ಕೆ ಅನೇಕ ಕಾರಣಗಳುಂಟು. ಸೊಳ್ಳೆ ಹಾಗೂ ಅದರ ಪರೋಪ ಜೀವಿಗಳ ನಿರೋಧಕ ಶಕ್ತಿ, ಬೃಹತ್ ಪ್ರಮಾಣದ ನೀರಾವರಿ ಯೋಜನೆಗಳು, ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಹೋಗುವುದು (ಇವು ಭಾರತಕ್ಕೂ ಅನ್ವಯಿಸುತ್ತವೆ). ಒಂದು ಕಾಲದಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ದಾಳಿ ಮಾಡುತ್ತಿದ್ದ ಮಲೇರಿಯಾ, ತೀವ್ರಗತಿಯಲ್ಲಿ ನಗರೀಕರಣವಾದಂತೆಲ್ಲ, ಪಟ್ಟಣಗಳಲ್ಲಿ ಹರಡಹತ್ತಿತು. ೧೯೯೦ರಲ್ಲಿ ತಮಿಳುನಾಡಿನಲ್ಲಿ ಮಲೇರಿಯಾದಿಂದ ಬಳಲಿದವರ ಸಂಖ್ಯೆಯ ಶೇ. ೫೦ರಷ್ಟು ರೋಗಿಗಳು ಮದ್ರಾಸಿನವರೇ ಆಗಿದ್ದರು. ಈ ರೋಗದ ಸೋಂಕಿಗೆ ಕಾರಣವಾಗಿರುವ ಮಾರಕ ಪ್ಲಾಸ್ಮೋಡಿಯಂ ಫಾಲ್ಸಿಪ್ಯಾರಂ ಪರೋಪಜೀವಿಯ ಮೇಲೆ, ಮೊದಲಿನಿಂದಲೂ ಬಳಸಲಾಗುತ್ತಿರುವ ಗುಳಿಗೆಗಳು ಪರಿಣಾಮ ಮಾಡುತ್ತಿಲ್ಲವೆಂಬುದೇ ಕಳವಳವುಂಟುಮಾಡಿದೆ.

೧೯೯೪ರ ಫೆಬ್ರುವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಯಲ್ಲಿ ಪ್ರಕಟವಾದ ಜೆಫ್ರಿ ಕೌಲಿ ಅವರ "ಎ ಕಿಲ್ಲರ್ ರಿಟರ್ನ್ಸ್" ಎಂಬ ಲೇಖನದ ಅನುವಾದ.

ವಿಜ್ಞಾನಿಗಳೇನೋ ಹೊಸ ಲಸಿಕೆಯ ಮೂಲಕ ಮಲೇರಿಯಾವನ್ನು ಸೆದೆಬಡಿಯಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರು ಮಾತ್ರ ಕೆಲವೊಂದು ಕ್ರಮಗಳಿಂದ ಇದರ ದಾಳಿಯನ್ನು ತಡೆಯಬಹುದು. ಜನರು ಸಾಯಂಕಾಲ ಮತ್ತು ರಾತ್ರಿಯೆಲ್ಲ ತೋಳುಳ್ಳ ಅಂಗಿಗಳನ್ನು ಧರಿಸಬೇಕು. ಸೊಳ್ಳೆಪರದೆ ಮತ್ತು ಸೊಳ್ಳೆಗಳನ್ನು ದೂರವಿಡುವ ಇತರ ವಿಧಾನ (ಕಾಯಿಲ್ಸ್, ಮ್ಯಾಟ್ಸ್ ಕ್ರೀಮ್ಸ್ ಮುಂತಾದವು) ಗಳನ್ನು ಬಳಸಿಕೊಳ್ಳಬೇಕು. ನಿಮ್ಮ ಕಟ್ಟಡದ ಮೇಲೆ ನೀರಿನ ಟ್ಯಾಂಕ್ ಇದ್ದರೆ ಔಷಧಿ (ಕ್ರಿಮಿನಾಶಕ) ಹಾಕಬೇಕು. ಯಾರಾದರೂ ಜ್ವರದಿಂದ ಬಳಲುತ್ತಿದ್ದರೆ, ಅದು ಮಲೇರಿಯಾ ಜ್ವರವೆಂಬುದನ್ನು ಪರೀಕ್ಷಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು.

ಡಾ॥ ಆರ್. ಎಮ್. ರೇಣಾಪುರಕರ

ಔಷಧ ನಿರೋಧಕ ಶಕ್ತಿ ಪಡೆದ ಈ ಸೂಕ್ಷ್ಮ ಜೀವಿ, ಸಂತಾನ ಬೆಳೆಸುತ್ತಿದ್ದಂತೆ, ಚಳಿಜ್ವರದ ದಾಳಿ ಹೆಚ್ಚುತ್ತಲಿದೆ.

ಪಶ್ಚಿಮ ಕೆನ್ಯಾದ ಮಾರ್ಗರೇಟ್ ಆನ್ಯಾಂಗೊ ಒತಹಿಂಗ್ ಎಂಬ ಮಹಿಳೆಯ ಮೊದಲ ಮಗು ಸತ್ತು ನಾಲ್ಕು ವರ್ಷಗಳು ಕಳೆದಿವೆ. ಆದರೂ ಆ ಮಹಿಳೆ ತನ್ನ ದುಃಖ ಮರೆತಿಲ್ಲ. ಟಿಟೊ ಒಧಿಯಾಂಬೊ ಎಂಬ ಹೆಸರಿದ್ದ ತನ್ನ ಮಗುವಿನ ಬಗ್ಗೆ "ಅವನು ಬಹಳ ಸುಂದರನಾಗಿದ್ದ. ಸರಿಯಾಗಿ ಬೆಳೆದು ದೊಡ್ಡವನಾಗುವಂತೆ ಕಂಡಿದ್ದ" ನೆಂದು ಹೇಳುತ್ತಾಳೆ.

ಟಿಟೊ ಚಳಿಜ್ವರದಿಂದ ಬಳಲುತ್ತಿದ್ದಾನೆಂಬುದು ತಿಳಿದ ಕೂಡಲೆ ಒತಹಿಂಗ್, ಆಗ ಸೊಳ್ಳೆ ಪೀಡೆಯಿಂದ ಬರುವ ಜ್ವರಕ್ಕೆ ತೀವ್ರ ಗುಣಕಾರಿಯೆಂದು ಪರಿಗಣಿಸಲಾಗಿದ್ದ ಕ್ಲೊರೊಕ್ವಿನ್ ಜೊತೆಗೆ ಬೆಂಬಲ ನೀಡಬಲ್ಲ ಮತ್ತೆರಡು ಗುಳಿಗೆಗಳನ್ನು ಕೊಟ್ಟಳು. ಆದರೆ ಜ್ವರ ಆಗಾಗ ಕಾಣಿಸಿಕೊಳ್ಳುವುದು ನಿಲ್ಲಲಿಲ್ಲ. ಜೊತೆಗೆ ಅತಿ ಭೇದಿ ಮತ್ತು ವಾಂತಿ ಕೂಡಾ ಆಯಿತು. ಒಂಬತ್ತು ತಿಂಗಳಿನ ಆ ಮಗು ಸತ್ತು ಹೋಯಿತು. ಚಳಿಜ್ವರ ಸೋಂಕಿಸುವ ಅನೊಫಿಲೆಸ್ ಗ್ಯಾಂಬಿಯೊ ಹೆಣ್ಣು ಸೊಳ್ಳೆಗಳು ವಿಶ್ವದ ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಯಾಗುತ್ತಲಿವೆ. ಆದರೆ ಮಕ್ಕಳ ಸಂಖ್ಯೆ ಮಾತ್ರ ವೃದ್ಧಿಯಾಗುತ್ತಿಲ್ಲ. ಆಫ್ರಿಕಾದ ಮಕ್ಕಳಲ್ಲಿ ಶೇ. ೫ ರಷ್ಟು ಮಕ್ಕಳು ಶಾಲೆಗೆ ಹೋಗುವ ಹಂತಕ್ಕೆ ತಲಪುವ ಮೊದಲೇ ಸಾವನ್ನಪ್ಪುತ್ತಾರೆ. ಚಳಿಜ್ವರದ ವಿರುದ್ಧ ನಡೆಸುತ್ತಿದ್ದ ಹೋರಾಟ ಗೆಲ್ಲುವಂತೆಸಿಸಿದ್ದ ಕಾಲ ಇನ್ನೂ ಜನರು

ಮರೆತಿಲ್ಲ. ಹೊಸ ಔಷಧ ಮತ್ತು ವಿಷಯುಕ್ತ ಕ್ರಿಮಿನಾಶಕಗಳನ್ನು ಹೊಂದಿದ್ದ ವಿಶ್ವ ಆರೋಗ್ಯ ಸಂಸ್ಥೆ ೧೯೫೫ ರಲ್ಲಿ, ಈ ರೋಗವನ್ನು ನಿರ್ನಾಮ ಮಾಡಲಾಗುವುದೆಂದು ಘೋಷಿಸಿತು. ಆದರೆ ಇಂದು ವಿಶ್ವದ ಅನೇಕ ಭಾಗಗಳಲ್ಲಿ, ಈ ಜ್ವರದಿಂದ ಪೀಡಿತರಾದವರ ಸಂಖ್ಯೆ ಹೆಚ್ಚುತ್ತಲಿದೆ. ಈ ರೋಗವನ್ನು ಸೋಂಕಿಸುವ ಪರೋಪಜೀವಿಗಳಿಂದಾಗಿ ಪ್ರತಿವರ್ಷ ೫೦೦ ದಶಲಕ್ಷ ಜನರು ಈ ರೋಗದಿಂದ ಬಳಲುತ್ತಾರೆ; ೨೦೦ ದಶಲಕ್ಷ ರೋಗಿಗಳಂತೂ ಸಾವನ್ನಪ್ಪುತ್ತಿದ್ದಾರೆ. ಗುಣಕಾರಿ ಔಷಧಿಗಳನ್ನು ನಿರೋಧಿಸುವ ಶಕ್ತಿ ಈ ಪರೋಪ ಜೀವಿಗಳಿಗೆ ಬರುತ್ತಿದ್ದಂತೆ, ಈ ರೋಗ ಎಲ್ಲೆಡೆ ಹರಡುತ್ತಲಿದೆ. ಅಮೆರಿಕೆಯ ಮೇರಿಲ್ಯಾಂಡಿನ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ, ಮಲೇರಿಯಾ ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ|| ಲುಯಿಸ್ ಮಿಲ್ಲರ್ "೧೯೫೦ ರಲ್ಲಿದ್ದಕ್ಕಿಂತಲೂ, ಇಂದಿನ ಸ್ಥಿತಿ ವಿಷಮಗೊಂಡಿದೆ" ಎಂದು ಹೇಳಿದ್ದಾನೆ.

ಪರೋಪ ಜೀವಿಗಳ ಪ್ರಭೇದ

ಅಭಿವೃದ್ಧಿ ಹೊಂದಿದ ದೇಶಗಳು ಮಲೇರಿಯಾ (ಚಳಿಜ್ವರ)ದಿಂದ ಹೆಚ್ಚು ಕಡಿಮೆ ಮುಕ್ತವಾಗಿವೆ. ಆದರೆ ಉಷ್ಣವಲಯಗಳಲ್ಲಿ ಈ ರೋಗ ಚೆನ್ನಾಗಿ ಬೇರೂರಿದೆ. ಆಫ್ರಿಕಾದಲ್ಲಿ ಶೇ. ೮೦ ರಷ್ಟು ಪ್ರಮಾಣದಲ್ಲಿ ಈ ರೋಗ ಆವರಿಸಿದೆಯಾದರೂ, ವಿಶ್ವದ ಎಲ್ಲ ಭಾಗ—ಮಳೆ ಬರುವ ಅರಣ್ಯಗಳು, ಹುಲ್ಲುಗಾವಲಿನ ಪ್ರದೇಶಗಳು ಮತ್ತು ನಗರ—ಗಳಲ್ಲಿ ವೃದ್ಧಿಯಾಗುತ್ತಲಿದೆ.

ಈ ರೋಗ ಪ್ರಾರಂಭವಾಗುತ್ತಿರುವಂತೆ ನಿಶ್ಯಕ್ತಿಕಾಣಿಸಿಕೊಳ್ಳುತ್ತದೆ. ಅನಂತರ ನೋವು, ಅತಿಭೇದಿ, ಉಬ್ಬಳಿಕೆ ಮತ್ತು ಛಳಿ ಬಂದು ಜ್ವರದಿಂದ ಬಳಲುವುದೇ ಇದರ ಲಕ್ಷಣ. ಇಂಥ ಸಾಂಕ್ರಾಮಿಕ ಸೆಳೆತಕ್ಕೆ ಸಿಕ್ಕಿ ಒಂದು ಮಗು ಮಲೇರಿಯಾದ ಲಕ್ಷಣ ಕಂಡ ಕೆಲವು ಗಂಟೆಗಳಲ್ಲಿ ಸಾಯಬಹುದು. ಸಾಂಕ್ರಾಮಿಕ ಪರೋಪ ಜೀವಿಗಳು ಕೆಂಪು ರಕ್ತಕೋಶಗಳನ್ನು ಪ್ರವೇಶಿಸಿ ಲೋಮನಾಳಗಳಿಗೆ ಅಡಚಣೆಯುಂಟುಮಾಡಿದರೆ, ಮೆದುಳಿಗೆ ಬೇಕಾದ ಆಮ್ಲಜನಕದ ಕೊರತೆಯುಂಟಾಗಿಬಿಡುತ್ತದೆ. ಇಂಥ ರೋಗಿಗಳು ರಕ್ತಹೀನತೆಯಿಂದ ಅಥವಾ ಆಗಾಗ ಬರುವ ಚಳಿಜ್ವರದಿಂದ ತಿಂಗಳು ಅಥವಾ ವರ್ಷಗಳವರೆಗೆ ಬಳಲಬೇಕಾಗುತ್ತದೆ.

ಮಲೇರಿಯಾ ಸೋಂಕಿಸುವ ಸೂಕ್ಷ್ಮ ಜೀವಿಗಳಲ್ಲಿ ನಾಲ್ಕು ತೆರನಾದ ಪರೋಪಜೀವಿಗಳುಂಟು. (ಪ್ಲಾಸಮೊಡಿಯುವ್ ವೈವ್ಯಾಕ್ಸ್ ಎಂಬುದು

ಸಾಮಾನ್ಯವಾದದ್ದು. ಪ್ಲಾಸ್ಮೊಡಿಯಮ್ ಫಾಲ್ಸಿಪ್ಯಾರಮ್ ಎಂಬುದು ಮಾರಕವಾದದ್ದು). ಈ ನಾಲ್ಕೂ ತೆರನಾದ ಸೂಕ್ಷ್ಮ ಜೀವಿಗಳ ಮೂಲಕ, ಹೆಣ್ಣು ಅನೊಫಿಲಿಸ್ ಸೊಳ್ಳೆಗಳು ಮಲೇರಿಯಾ ರೋಗ ಸೋಂಕುವಂತೆ ಮಾಡುತ್ತವೆ. ಒಂದು ಸೊಳ್ಳೆ ಮನುಷ್ಯನನ್ನು ಕಡಿಯುತ್ತಿದ್ದಂತೆ, ದಾರದಂತಿರುವ ಪರೋಪ ಜೀವಿಯೊಂದನ್ನು ದೇಹದ ಆ ಭಾಗದಲ್ಲಿನ ರಕ್ತಧಾರೆಯಲ್ಲಿ ಸೇರಿಕೊಳ್ಳುವಂತೆ ಮಾಡುತ್ತದೆ. ಈ ಪರೋಪಜೀವಿ ಕರುಳಿನ ಕಡೆ ಸಾಗುತ್ತದಲ್ಲದೆ, ಅಲ್ಲಿಂದ ಹೊರಬರುತ್ತಿದ್ದಂತೆ ದುಂಡುಕಣದಳ ಆಕಾರ ಹೊಂದಿ ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಂಡಿರುತ್ತದೆ. ರಕ್ತದ ಕೆಂಪು ಕೋಶಗಳಲ್ಲಿ ರಂಧ್ರ ಮಾಡಿ ಹೆಮೊಗ್ಲೊಬಿನ್ ಸೇವಿಸಹತ್ತುತ್ತದೆ. ಜೊತೆಯಲ್ಲಿ ಈ ಪರೋಪಜೀವಿಗಳ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಪ್ರತಿ ಸಲ ಕೆಂಪು ರಕ್ತಕೋಶಗಳು ಛಿದ್ರಗೊಂಡಾಗ ಮತ್ತಷ್ಟು ಪರೋಪಜೀವಿಗಳು ಕಕ್ತದ ಧಾರೆಯಲ್ಲಿ ಸೇರಿಕೊಳ್ಳುತ್ತವೆ.

ಈ ಪರೋಪಜೀವಿಗಳ ಸೋಂಕಿನಿಂದ ಎಲ್ಲರೂ ರೋಗಗ್ರಸ್ಥರಾಗುವುದಿಲ್ಲ. ಕೆಲವರು ಹುಟ್ಟಿನಿಂದಲೇ ಇಂಥ ಸೋಂಕನ್ನು ಎದುರಿಸುವಷ್ಟು ಬಲಿಷ್ಠರಾಗಿರುತ್ತಾರೆ. ಮತ್ತೆ ಕೆಲವರು ಅನೇಕ ಬಾರಿ ಇದರ ಸೋಂಕಿನಿಂದ ತಕ್ಕಮಟ್ಟಿಗೆ ರಕ್ಷಣೆ ಪಡೆದಿರುತ್ತಾರೆ. ಇವರ ಸೋಂಕು ಸಾಮಾನ್ಯವಾಗಿರುವ ಪಶ್ಚಿಮ ಕೆನ್ಯಾದಲ್ಲಿ, ವಯಸ್ಸಿಗೆ ಬಂದಂಥ ವ್ಯಕ್ತಿಗಳಿಗೆ ಇದೊಂದು ಬಾಧೆಯೆನಿಸುವುದಿಲ್ಲ, ಆದರೆ ಯಾವಾಗಲೋ ಒಮ್ಮೆ ಈ ರೋಗ ಕಾಣಿಸಿಕೊಳ್ಳುವ ಪ್ರದೇಶಗಳಲ್ಲಿ, ಪ್ರತಿ ವ್ಯಕ್ತಿ ಇವರ ದಾಳಿಯಿಂದ ಬಳಲುವ ಸಾಧ್ಯತೆ ಇರುತ್ತದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಬಂದ ಪ್ರವಾಸಿಗರು ಕೂಡಾ ಇವರ ದಾಳಿಯಿಂದ ತಪ್ಪಿಸಿಕೊಳ್ಳಲಾರರು.

ಔಷಧಿಗಳ ಸಂಗ್ರಹಾಲಯ

ದಕ್ಷಿಣ ಅಮೆರಿಕೆಯ ಸಿಂಕೋನಾಗಿಡದ ತೊಗಟೆಯಲ್ಲಿನ 'ಕ್ವಿನೈನ್' ಎಂಬುದೇ ಮಲೇರಿಯಾಕ್ಕೆ ಉತ್ತಮ ಮದ್ದೆಂಬುದು ಜೆಸುಯಿಟ್ ಧರ್ಮ ಪ್ರಚಾರಕರಿಗೆ ೧೭ನೇ ಶತಮಾನದಲ್ಲಿಯೇ ತಿಳಿದಿತ್ತೆಂಬುದು ಲಿಖಿತ ದಾಖಲೆಗಳಿಂದ ಗೊತ್ತಾಗುತ್ತದೆ. ೧೯೪೩ ರಲ್ಲಿ ಸಂಯುಕ್ತ ಅಮೆರಿಕೆಯ ಸೈನ್ಯದವರು ತಯಾರಿಸಿದ ಕ್ಲೊರೊಕ್ವಿನ್ ಕ್ವಿನೈನಿನಷ್ಟೇ ಪರಿಣಾಮಕಾರಿಯಾಗಿತ್ತು. ಇದರ ಪ್ರಭಾವ ಹೆಚ್ಚು ಕಾಲದವರೆಗಿರುತ್ತದಲ್ಲದೆ, ಇದನ್ನು ಕಡಿಮೆ ಖರ್ಚಿನಲ್ಲಿ

ತಯಾರಿಸಬಹುದೆಂದು ಗಮನಕ್ಕೆ ಬಂತು. ಇದು ಸಹ್ಯವಾಗಿದ್ದರಿಂದ, ಜನರು ಮಲೇರಿಯಾದ ದಾಳಿಯಾಗುವವರೆಗೆ ಕಾಯುತ್ತಿರಲಿಲ್ಲ. ನಿಗದಿತ ಪ್ರಮಾಣದಲ್ಲಿ ತೆಗೆದುಕೊಂಡರೆ ಈ ರೋಗದ ಸೋಂಕನ್ನು ತಡೆಯಬಹುದೆಂಬುದು ಖಚಿತ ವಾಯಿತು.

ಕ್ವಿನೈನ್ ಮತ್ತು ಕ್ಲೊರೊಕ್ವಿನ್‌ಗಳ ಜೊತೆಗೆ ಇಂದು ಮೆಫ್ಲೋಕ್ವಿನ್, ಹ್ಯಾಲೊಫ್ಯಾಂಟ್ರೈನ್ ಮತ್ತು ಫ್ಯಾನ್ಸಿಡಾರ ಎಂಬಂಥ ಔಷಧಿಗಳ ಸಂಗ್ರಹ ವಿರುವುದರಿಂದಾಗಿ, ಮಲೇರಿಯಾದ ದಾಳಿಯನ್ನು (ಈ ಅಸ್ತ್ರಗಳ ಮೂಲಕ) ಎದುರಿಸಬಹುದಾಗಿದೆ. ರಕ್ತಕೋಶಗಳನ್ನು ದುರ್ಬಲಗೊಳಿಸುವ ಕಿಣ್ವಕಾರಕ ಜೀವಾಣುವಿನ ಪ್ರಯತ್ನವನ್ನು ತಡೆಯುವ ಸಾಮರ್ಥ್ಯ ಈ ಔಷಧಿಗಳಿಗಿದೆ. ಮೆಫ್ಲೊಕ್ವಿನ್ ಮತ್ತು ಹ್ಯಾಲೊಫ್ಯಾಂಟ್ರೈನ್‌ಗಳ ಮೂಲಕ ರೋಗದ ಚಿಕಿತ್ಸೆ ಮಾಡಬಹುದಲ್ಲದೆ ಮಲೇರಿಯಾದ ದಾಳಿಯನ್ನು ತಡೆಯಲು ಸಾಧ್ಯವಿದೆ. ಆದರೆ ಕೇವಲ ಔಷಧಿ ಚಿಕಿತ್ಸೆಯಿಂದ ಮಾತ್ರ ಮಲೇರಿಯಾದ ದಾಳಿಯನ್ನು ತಪ್ಪಿಸಲು ಸಾಧ್ಯವಿಲ್ಲ. ಅಭಿವೃದ್ಧಿ ರಾಷ್ಟ್ರಗಳಲ್ಲಿ, ೧೦ ವರ್ಷ ಗಳಷ್ಟು ಹಿಂದೆಯೇ, ಕೊಳಚೆ ಪ್ರದೇಶ ಮತ್ತು ಇತರೆಡೆ ಮಲಿತ ನೀರು ನಿಲ್ಲದೆ, ಹರಿದು ಹೋಗುವಂತೆ ನಾಲೆ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಕ್ರಿಮಿಗಳ ಸಂಖ್ಯೆಯನ್ನು ನಿಯಂತ್ರಿಸಲು ಸಾಧ್ಯವಾಯಿತು. ೧೯೪೦ ರ ಸಮಯಕ್ಕೆ, ಡಿ.ಡಿ.ಟಿ ಎಂಬ ನವೀನ ಕ್ರಿಮಿನಾಶಕದ ಮೂಲಕ ಈ ಕೆಲಸ ಇನ್ನಷ್ಟು ಸುಲಭವಾಯಿತು. ಆದರೆ ಮಲೇರಿಯಾ ಸೊಳ್ಳೆಗಳು ಮನೆಗಳಲ್ಲಿನ ಆಹಾರ ತಿಂದು ಗೋಡೆಗಳ ಮೇಲೆ ತಂಗುವುದನ್ನರಿತ, ಆರೋಗ್ಯ ವಿಭಾಗದ ಅಧಿಕಾರಿಗಳು—ಬೃಹತ್ ಪ್ರಮಾಣದ ಮೇಲೆ ಡಿ.ಡಿ.ಟಿ. ಯನ್ನು ಮನೆ ಯೊಳಗೂ ಸಿಂಪಡಿಸಿ, ಈ ಕ್ರಿಮಿಗಳನ್ನು ನಾಶ ಮಾಡಬಹುದೆಂದು ಯೋಚಿಸಿದರು.

೧೯೫೫ ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ರೋಗ ಸೋಂಕಿಸುವ ಈ ಕ್ರಿಮಿ ಗಳನ್ನು (ಡಿ.ಡಿ.ಟಿ ಸಿಂಪಡಿಸುವ ಮೂಲಕ) ನಿರ್ನಾಮ ಮಾಡುವ ೫ ವರ್ಷದ ಒಂದು ಕಾರ್ಯಕ್ರಮ ಹಮ್ಮಿಕೊಂಡರು. ಅದರ ಜೊತೆಯಲ್ಲಿ, ಈಗಾಗಲೇ ಈ ರೋಗದಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ನೀಡುವುದೂ ಅದರ ಕಾರ್ಯಕ್ರಮ ದಲ್ಲಿತ್ತು. ಡಿ.ಡಿ.ಟಿಯ ಸಿಂಪಡಿಕೆ ಬಹಳ ಪರಿಣಾಮಕಾರಿಯಾಗುತ್ತಿದ್ದಂತೆ, ಹಲವು ಸೊಳ್ಳೆಗಳು ರೋಗ ನಿರೋಧಕ ಶಕ್ತಿ ಹೊಂದಿದ್ದು ಕಂಡು ಬಂತು. ಮನೆಯೊಳಗೆ ಸಿಂಪಡಿಸುವ ಕಾರ್ಯ ಪ್ರಾರಂಭವಾಗುತ್ತಿದ್ದಂತೆ, ಸೊಳ್ಳೆಗಳು

ಹೊರಗೆ ಹಾರಿ ಹೋಗಿ ಆಹಾರ ಹುಡುಕಿಕೊಳ್ಳಹತ್ತಿದವು. ಪಾಶ್ಚಾತ್ಯ ಪರಿಸರ ವಾದಿಗಳ ವಿರೋಧದಿಂದಾಗಿ, ಈ ಕಾರ್ಯಕ್ರಮಕ್ಕೆ ದೊರೆಯಬೇಕಿದ್ದ ರಾಜಕೀಯ ಬೆಂಬಲ ಕುಗ್ಗಿತು.

ರೋಗಿಗಳ ಉಪಚಾರ ಕೂಡಾ ಈ ಸೊಳ್ಳೆಗಳನ್ನು ಕೊಲ್ಲುವಷ್ಟೇ ಜಟಿಲ ವೆನಿಸಿತು. ಮಲೇರಿಯಾದ ಈ ಔಷಧ ಕೂಡಾ, ದುರ್ಬಲ ಸೂಕ್ಷ್ಮ ಜೀವಿ ರೋಗಾಣುಗಳನ್ನು ಮಾತ್ರ ನಾಶಮಾಡುತ್ತದೆ. ಈ ಔಷಧಿಯನ್ನು ರೋಗಿಗೆ ಕಡಿಮೆ ಪ್ರಮಾಣದಲ್ಲಿ, ಒಂದು ಅವಧಿಯವರೆಗೆ–ನೀಡಿ, ರೋಗದ ಸೋಂಕು ತಗಲದಂತೆ ವೈದ್ಯರು ನೋಡಿಕೊಳ್ಳಬಹುದು. ಆದರೆ ರೋಗದ ಲಕ್ಷಣಗಳು ಕಂಡಾಗ ಮಾತ್ರ ಸ್ವಲ್ಪ ಪ್ರಮಾಣದಲ್ಲಿ ಔಷಧಿ ಕೊಟ್ಟರೆ ಅದು ಚಿಕಿತ್ಸೆ ಯೆನಿಸುವುದಿಲ್ಲ. ಇದರಿಂದ ಔಷಧಿಯ ಪರಿಣಾಮ ತಡೆಯಬಲ್ಲ ಶಕ್ತಿ ಹೆಚ್ಚೆಚ್ಚು ರೋಗಾಣುಗಳಿಗೆ ಬರುವಂತಾಗುತ್ತದೆ. ೬೦ರ ದಶಕದ ಕೊನೆವರೆಗೆ, ಕ್ಲೋರೊ ಕ್ವಿನ್ನಿನ ಪರಿಣಾಮಕಾರಿ ಶಕ್ತಿ ಕುಂದಹತ್ತಿತ್ತು. ೧೯೬೨ ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯವರು ತಾವು ಹಾಕಿಕೊಂಡಿದ್ದ, ನಿರ್ದಿಷ್ಟ ಕಾಲಾವಧಿಯ 'ಮಲೇರಿಯಾ ನಿರ್ನಾಮ' ಕಾರ್ಯಕ್ರಮವನ್ನು ಬಿಟ್ಟುಕೊಟ್ಟು ಅದಕ್ಕಿಂತಲೂ ಸುಲಭವಾದ 'ರೋಗ ನಿಯಂತ್ರಣ' ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಅಂದಿನಿಂದ ಕೆಲವು ದೇಶಗಳಾದರೂ ಈ ಉಪದ್ರವವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿವೆ. ಆದರೆ ಆಫ್ರಿಕಾ, ಏಷಿಯಾ ಮತ್ತು ಲ್ಯಾಟಿನ್ ಅಮೆರಿಕಾ ದಲ್ಲಿ ಮಾತ್ರ ಹೆಚ್ಚೆಚ್ಚು ಜನರು ಈ ರೋಗದಿಂದ ಬಳಲುತ್ತಿದ್ದಾರೆ; ಯಾವ ಔಷಧಿಯೂ ಪರಿಣಾಮಕಾರಿ ಕೆಲಸ ಮಾಡುತ್ತಿಲ್ಲ. ಆಫ್ರಿಕಾದಲ್ಲಂತೂ ಪ್ರತಿ ವರ್ಷ ಫ್ಯಾಲ್ಸಿಪ್ಯಾರಮ್ ಪರೋಪಜೀವಿಯಿಂದಾಗಿ ಸುಮಾರು ೪೮೦ ದಶಲಕ್ಷ ಜನರು ರೋಗ ಪೀಡಿತರಾಗುತ್ತಾರೆ. ಔಷಧಿಯ ಪರಿಣಾಮ ತಡೆಯಬಲ್ಲ ಶಕ್ತಿ, ಜನರ ಓಡಾಟ, ಜೀವಿ ಪರಿಸ್ಥಿತಿಯಲ್ಲಿನ ಏರುಪೇರುಗಳು ಮತ್ತು ಗುಂಪು ಘರ್ಷಣೆಗಳಿಂದಾಗಿ ಈ ರೋಗ ಹರಡುವುದು ಸುಲಭವಾಗಿದೆ. ಅಲ್ಲಿನ ಜನರ ಕಡುಬಡತನದಿಂದಾಗಿ, ರೋಗಿಗೆ ಅವಶ್ಯಕವೆನಿಸುವ ಚಿಕಿತ್ಸೆ ದೊರೆಯುತ್ತಿಲ್ಲ.

ಲ್ಯಾಟಿನ್ ಅಮೆರಿಕಾ ಮತ್ತು ದಕ್ಷಿಣ ಏಷಿಯಾದಲ್ಲಿ ಇಂಥ ಚಿಂತಾಜನಕ ಪರಿಸ್ಥಿತಿಯಿರದಿದ್ದರೂ, ಅಲ್ಲಿ ಕೂಡಾ ಲಕ್ಷಣಗಳು ಆಶಾದಾಯಕವಾಗಿ ಕಾಣುತ್ತಿಲ್ಲ. ಈ ಪಿಡುಗಿನ ವಿರುದ್ಧ ಹೋರಾಡಿ ಯಶಸ್ವಿಯಾದ ಕೆಲವೇ ದೇಶ ಗಳಲ್ಲಿ ಬ್ರಾಜಿಲ್ ಕೂಡಾ ಒಂದಾಗಿದೆ. ೧೯೪೦ ರಲ್ಲಿ ಆ ದೇಶದ ೫೦ ದಶಲಕ್ಷ ಜನರಲ್ಲಿ ಸುಮಾರು ೫ ದಶಲಕ್ಷ ಜನರಿಗೆ ಮಲೇರಿಯಾದ ಸೋಂಕು ತಾಕಿತು.

ಬಹಳ ತುರ್ತಾದ ಚಿಕಿತ್ಸೆ ಮತ್ತು ಸೊಳ್ಳೆಗಳ ನಿಯಂತ್ರಣ ಕಾರ್ಯದಿಂದಾಗಿ, ೧೯೫೦ರ ಸಮಯಕ್ಕೆ ರೋಗಿಗಳ ಸಂಖ್ಯೆ ೫೦,೦೦೦ ಕ್ಕಿಳಿಯಿತು. ಆದರೆ ೭೦ರ ದಶಕದಲ್ಲಿ ಅಮೆಝಾನ ಗಡಿಭಾಗದಲ್ಲಾದ ಅತಿಯಾದ ಜನ ಪ್ರವೇಶದಿಂದ ಅಭಿವೃದ್ಧಿ ಕಾರ್ಯ ಹಠಾತ್ತನೆ ಸ್ಥಗಿತಗೊಂಡಿತು. ದನಗಳ ಒಡೆಯರಿಗೆ ಮತ್ತು ಕೃಷಿ ವ್ಯಾಪಾರಿಗಳಿಗೆ, ವಿಸ್ತಾರವಾದ ಹುಲ್ಲುಗಾವಲು ಪ್ರದೇಶಗಳನ್ನು ಬಿಟ್ಟುಕೊಡಲು ಸಾಕಷ್ಟು ಪ್ರಮಾಣದಲ್ಲಿ ಸಾಲ ಮತ್ತು ಕರ ವಿನಾಯಿತಿ ದೊರಕಿತು. "ವಸತಿ ಕಾರ್ಯಕ್ರಮಗಳಿಂದಾಗಿ ಈ ಭಾಗದಲ್ಲಿ ಪ್ರವೇಶ ಪಡೆದ ಅನೇಕ ಹೊರಗಿನ ಜನರಿಗೆ ಮಲೇರಿಯಾದ ಅನುಭವ ಅಥವಾ ಅದರ ನಿರೋಧಕ ಶಕ್ತಿಯಿರಲಿಲ್ಲ"ವೆಂದು ರಿಯೊ-ಡಿಜನೆರಿಯೋದ ಸೋಂಕು ರಕ್ಷಾ ಶಾಸ್ತ್ರಜ್ಞ ಫರ್ನ್ಯಾಂಡೊ ಸಿಯಾನ್ ಹೇಳಿದ.

ಆಗಾದ ಪ್ರಮಾದಕ್ಕೆ ಅವರು ಈಗಲೂ ದೊಡ್ಡ ಬೆಲೆ ತೆರಬೇಕಾಗಿದೆ. ಹೋದ ವರ್ಷ ಬ್ರಾಜಿಲ್ಲಿನ ಅಮೆಝಾನ್ ಪ್ರದೇಶದಲ್ಲಿ ಈ ರೋಗದಿಂದ ಬಳಲಿದವರ ಸಂಖ್ಯೆ ೬ ಲಕ್ಷ (ಸುಮಾರು ೯೮% ಜನರು)ಕ್ಕೆ ತಲುಪಿತ್ತು. ಇದರಲ್ಲಿ ($\frac{1}{3}$ ರೋಗಿಗಳು) ಭೀಕರ ಸ್ವರೂಪದ ಸೋಂಕು ತಗುಲಿದ್ದು ಗಡಿ ಪ್ರಾಂತವಾದ ರೊಂಡೊನಿಯಾದಲ್ಲಿನ ಜನರಿಗೆ, ರೈತರು, ಜ್ಯೋತಿಷಿಗಳು ಮತ್ತು ತಾತ್ಕಾಲಿಕ (Seasonal Laboures) ಕೆಲಸದಾಳುಗಳ ಓಡಾಟದಿಂದಾಗಿ ಈ ರೋಗ ಹರಡುವುದು ಅನಿವಾರ್ಯವಾಗುತ್ತಲಿದೆ ಎಂದು ತಜ್ಞರು ಅಭಿಪ್ರಾಯಪಡುತ್ತಿದ್ದಾರೆ.

ಪ್ಯಾಸಿಫಿಕ್ಕಿನ ಇನ್ನೊಂದು ಭಾಗದಲ್ಲಿ ಕೂಡಾ ಪರಿಸ್ಥಿತಿ ಅಷ್ಟೇನೂ ಸುಧಾರಿಸಿದೆನ್ನುವಂತಿಲ್ಲ. ಥೈಲ್ಯಾಂಡಿನ ಆರೋಗ್ಯ ವಿಭಾಗದ ಅಧಿಕಾರಿಗಳು ಅನೇಕ ದಶಕಗಳವರೆಗೆ ಮಲೇರಿಯಾ ರೋಗವನ್ನು ಯಶಸ್ವಿಯಾಗಿ ನಿಯಂತ್ರಿಸಿದ್ದರು. ಆದರೆ ಈಗ ಅಲ್ಲಿನ ೫೮ ದಶಲಕ್ಷ ಜನರು ಈ ರೋಗದ ಎರಡು ಭೀಕರ ತಾಣಗಳ ಮಧ್ಯೆ ವಾಸಿಸುತ್ತಿದ್ದಾರೆ. ಒಂದು ಕಡೆ ಬರ್ಮಾ ಮತ್ತೊಂದು ಕಡೆ ಕಾಂಬೋಡಿಯಾದ ಮಧ್ಯವಿರುವ, ಅರಣ್ಯಗಳಿಂದ ಆವೃತವಾದ ಪರ್ವತವುಳ್ಳ ದೇಶದಲ್ಲಿನ, ಫಾಲ್ಸಿಪ್ಯಾರುಮ್ ಪರೋಪಜೀವಿಯ ನಿರೋಧಕಶಕ್ತಿ ಹೆಚ್ಚೆಚ್ಚು ಪ್ರಬಲವಾಗುತ್ತಲಿದೆ.

ಇತ್ತೀಚಿನ ದಶಕಗಳಲ್ಲಿ, ಬರ್ಮಾದ ರಾಜಕೀಯ ಏರುಪೇರುಗಳಿಂದಾಗಿ ಸಾವಿರಾರು ನಿರಾಶ್ರಿತರು ಥೈಲ್ಯಾಂಡಿನ ಗಡಿಪ್ರದೇಶಗಳಿಗೆ ಹೋಗಿ ನೆಲೆಸಿದ್ದಾರೆ. ಇವರುಗಳ ಸತತ ಓಡಾಟದಿಂದಾಗಿ ಮಲೇರಿಯಾ ರೋಗವನ್ನು

ನಿಯಂತ್ರಿಸುವುದು ಅಸಾಧ್ಯವಾಗಿದೆ. ಗಡಿ ಪ್ರದೇಶದಲ್ಲಿರುವ ಕರೆನ್ ಜನಾಂಗದ ಸುಮಾರು ೫೦,೦೦೦ ಜನರಲ್ಲಿ ಪ್ರತಿವರ್ಷ ಕೆಲವು ಸಾವಿರ ಜನರಾದರೂ ಈ ರೋಗದಿಂದ ಬಳಲುತ್ತಾರೆ. ಥುಯೋನ್ ಎಂಬ ೨೫ ವರ್ಷದ ವಿದ್ಯಾರ್ಥಿ (ಹಾಗೂ ಅರೆಮರೆ ಕಾಳಗದಲ್ಲಿ ತೊಡಗಿದ ಸೈನಿಕ) ೩೦ ಸಲವಾದರೂ ಈ ರೋಗದಿಂದ ಬಳಲಿದ್ದಾನೆ. "ನಾನು ಗುಣ ಹೊಂದಿದ್ದಕ್ಕಿಂತಲೂ ಹೆಚ್ಚು ಕಾಲ ರೋಗಿಯಾಗಿ ಬಳಲಿದ್ದೇನೆ" ಎಂದು ಆ ಯುವಕನೇ ಹೇಳಿದ್ದಾನೆ.

ಆದರೆ ಕಾಂಬೋಡಿಯಾದ ಗಡಿಭಾಗದಲ್ಲಿ ಈ ಪಿಡುಗು ಹರಡುತ್ತಿರುವ ಗತಿಯ ಜೊತೆ ಹೋಲಿಸಿದಾಗ, ಬರ್ಮಾದಲ್ಲಿನ ಸ್ಥಿತಿ ಅಗಣ್ಯವೆನಿಸುತ್ತದೆ. ತನ್ನ ಮಾಣಿಕ್ಯ ಹಾಗೂ ಸಾಂಕ್ರಾಮಿಕ ಮಲೇರಿಯಾಕ್ಕೆ ಹೆಸರಾದ ಕಾಂಬೋಡಿಯಾದ ಪೈಲಿನ್ ಪ್ರದೇಶಕ್ಕೆ ಥೈಲ್ಯಾಂಡ್ ಮತ್ತು ಇತರ ದೇಶಗಳಿಂದ ಮಾಣಿಕ್ಯದಾಳಿಯುಳ್ಳ (Gemhunter) ವರು ಬರುತ್ತಾರೆ. ೧೯೯೨ರಲ್ಲಿ ಸಹಸ್ರಾರು ಗಣಿ ಕಾರ್ಮಿಕರು ಥೈಲ್ಯಾಂಡಿನ ಟ್ರಾಟ್ ಪ್ರಾಂತದ ಮೂಲಕ ಕಾಂಬೋಡಿಯಾ ಪ್ರವೇಶಿಸಿದರು. ಇವರಲ್ಲಿ ಅನೇಕರಿಗೆ ಔಷಧ ನಿರೋಧಕ ಶಕ್ತಿಯುಳ್ಳ ಪಾಲ್ಸಿಪ್ಯಾರಮ್ಮಿನ ಸೋಂಕು ತಗುಲಿತು. ಇಂಥ ಗಣಿ ಕಾರ್ಮಿಕ ರೋಗಿಗಳ ಶುಶ್ರೂಷೆಯ ಜೊತೆಗೆ, ಆ ರೋಗ ದೇಶದ ಇತರ ಭಾಗದಲ್ಲಿ ಹರಡದಂತೆಯೂ, ಥೈಲ್ಯಾಂಡಿನ ಆರೋಗ್ಯ ಇಲಾಖೆಯವರು ನೋಡಿಕೊಳ್ಳುತ್ತಿದ್ದಾರೆ. ಈ ದಿಶೆಯಲ್ಲಿ ಸಾಕಷ್ಟು ಯಶಸ್ಸು ಪಡೆದಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಥೈಲ್ಯಾಂಡಿನ ರೋಗಿಗಳ ಸಂಖ್ಯೆ ಹೆಚ್ಚಾಗಿಲ್ಲ. ಮೃತರಾದವರ ಸಂಖ್ಯೆಯೂ ಕಡಿಮೆಯಾಗಿದೆ. ಸಂಚಾರಿ ಗಣಿ ಕಾರ್ಮಿಕರ ಚಿಕಿತ್ಸೆಗಾಗಿ ಥೈಲ್ಯಾಂಡ್ ಮತ್ತು ಕಾಂಬೋಡಿಯಾದ ಗಡಿ ಭಾಗದಲ್ಲಿ ತೆರೆಯಲಾದ ಚಿಕಿತ್ಸಾಲಯಗಳಿಂದಾಗಿ ಈ ಯಶಸ್ಸು ಸಾಧ್ಯವಾಗಿದೆ. ಬಾಗಿಲು, ಗೋಡೆಗಳಿರದ, ತಗಡಿನ ಮೇಲ್ಛಾವಣಿಯ, ಒಂದು ಕೊಟ್ಟಿಗೆಯಂತಿರುವ ಈ ಚಿಕಿತ್ಸಾಲಯದ ಮುಂದೆ ಒಂದು ಎಚ್ಚರಿಕೆಯ ಸಂಕೇತವಿದೆ. "ಮಲೇರಿಯ ಕೊಲ್ಲುತ್ತದೆ. ನಿಮಗೆ ಜ್ವರ, ತಲೆಶೂಲೆ, ಛಳಿ ಇದ್ದರೆ ಇಲ್ಲಿ ನಿಮ್ಮ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ" ಎಂದು ದಪ್ಪಕ್ಷರಗಳಲ್ಲಿ ಬರೆಯಲಾಗಿದೆ. ಒಂದು ದಿನ ತಮ್ಮ ರಕ್ತ ಪರೀಕ್ಷೆ ಮಾಡಿಸಿಕೊಳ್ಳಲು ಬಂದಿದ್ದ ೬೩ ಗಣಿ ಕಾರ್ಮಿಕರಲ್ಲಿ, ೧೦ ಜನರಿಗೆ ಫಾಲ್ಸಿಪ್ಯಾರಮ್ಮಿನ ಸೋಂಕು ತಗಲಿದ್ದು ಗೊತ್ತಾಯಿತಲ್ಲದೆ, ಅವರಿಗೆ ಚಿಕಿತ್ಸೆ ಕೂಡಾ ನೀಡಲಾಯಿತು.

ಆದರೆ ದುರ್ದೈವದ ಸಂಗತಿಯೆಂದರೆ, ಮಲೇರಿಯಾ ಪೀಡಿತರಿಗೆ ಔಷಧ ಹಾಗೂ ರೋಗ ನಿಯಂತ್ರಿಸುವ, ಥೈಲ್ಯಾಂಡಿನ ಉದಾರ ಕ್ರಮದಿಂದಾಗಿ, ಆ ದೇಶ ವಿಶ್ವದಲ್ಲಿಯೇ ಔಷಧ ನಿರೋಧಕ ಶಕ್ತಿಯ ತೌರಾಗಿದೆ. ವಿಶ್ವದ ಇತರ ಭಾಗಗಳಲ್ಲಿ ತಕ್ಕಮಟ್ಟಿಗೆ ಪರಿಣಾಮಕಾರಿಯೆನಿಸಿರುವ ಕ್ಲೋರೊಕ್ವಿನ್ ಮತ್ತು ಫಾನ್ಸಿಡಾರ, ಥೈಲ್ಯಾಂಡಿನ ಫ್ಯಾಲ್ಸಿಪ್ಯಾರಮ್ ಪರೋಪ ಜೀವಿಯ ಮೇಲೆ ನಿರರ್ಥಕವೆನಿಸಿವೆ. ಮೆಲ್ಫ್ಲೊಕ್ವಿನ್ ಮತ್ತು ಹ್ಯಾಲೊ ಫ್ಯಾಂಟ್ರೈನ್ ಎಂಬ ಬೆಂಬಲಕಾರಿ ಮಾತ್ರೆಗಳ ಪರಿಣಾಮ ಕೂಡಾ ಕಡಿಮೆಯಾಗುತ್ತಲಿದೆ. ಕ್ವಿನೈನ್ ಪರಿಣಾಮ ಕೂಡಾ ಕಡಿಮೆಯಾಗುತ್ತಲಿದೆ. ಔಷಧೋಪಚಾರದಲ್ಲಿ ಹೊಸ ಪದ್ಧತಿ ಕಂಡುಕೊಳ್ಳದಿದ್ದಲ್ಲಿ, ಈ ದಶಕದ ಕೊನೆಯವರೆಗೆ, ಏಷಿಯಾದಲ್ಲೆಲ್ಲಾ ಮಲೇರಿಯಾ ರೋಗ ಹರಡಿ, ಚಿಕಿತ್ಸೆಯಾಗದಂಥ ಪರಿಸ್ಥಿತಿ ಉಂಟಾಗಬಹುದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮಲೇರಿಯಾ ರೋಗಿಯನ್ನು ಈಗಲೂ ಔಷಧೋಪಚಾರದಿಂದ ಗುಣಪಡಿಸಬಹುದೆಂಬುದು ಥೈಲ್ಯಾಂಡಿನ ಅನುಭವದಿಂದ ತಿಳಿದುಬಂದಿದೆ. ಔಷಧಿಯ ಪರಿಣಾಮವನ್ನೇ ತೀವ್ರವಾಗಿ ತಡೆಯುವಂಥ ಪ್ರದೇಶದಲ್ಲಿಯೇ, ದಾರಿಬದಿಯ ಚಿಕಿತ್ಸಾಲಯಗಳು ಮಲೇರಿಯಾವನ್ನು ನಿಯಂತ್ರಿಸಲಿಕ್ಕೆ ಸಾಧ್ಯವೆಂದ ಮೇಲೆ ಇಂಥ ಚಿಕಿತ್ಸಾಲಯಗಳು ಆಫ್ರಿಕಾದಂಥ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಪರಿಣಾಮಕಾರಿ ಕೆಲಸ ಮಾಡಲಿಕ್ಕಿಲ್ಲವೆ ? ಚಿಕಿತ್ಸೆಗಾಗಿ ಈಗ ಬಳಸಲಾಗುತ್ತಿರುವ ಕ್ಲೊರೊಕ್ವಿನ್ ಮತ್ತು ಫ್ಯಾನ್ಸಿಡಾರದಂಥ ಔಷಧಿಗಳ ಜೊತೆ ಇನ್ನಷ್ಟು ಪರಿಣಾಮಕಾರಿ ಹಾಗೂ ಸುಲಭ ಬೆಲೆಯ ಔಷಧಿಗಳ ಸಂಶೋಧನೆಯೂ ಅಷ್ಟೇ ಅವಶ್ಯಕವಾಗಿದೆ. ೪ನೇ ಶತಮಾನದ ಚೀನಿ ವೈದ್ಯ ಗ್ರಂಥಗಳಲ್ಲಿ ಇಂಥ ಜ್ವರಕ್ಕೆ ಗಿಡ ಮೂಲಿಕೆಯ ಔಷಧಿ ಬಳಸಲಾಗುತ್ತಿತ್ತೆಂಬ ಉಲ್ಲೇಖವಿದೆ. ಅದನ್ನೇ ಇಂದು ವಿಶ್ವ ಆರೋಗ್ಯ ಸಂಸ್ಥೆ (WHO) ಯವರು ಮಲೇರಿಯಾದ ಚಿಕಿತ್ಸೆಗೆ ಬಳಸುವಂತೆ ಬೆಂಬಲ ನೀಡುತ್ತಿದ್ದಾರೆ. ಕಿಂಘೌಸೊ ಅಥವಾ ಆರ್ಟೆಮಿಸ್ಸಿನ್‌ಗಳ ಉತ್ಪನ್ನಗಳು, ಕ್ವಿನೈನ್ ಮತ್ತು ಕ್ಲೊರೊಕ್ವಿನ್‌ಗಳಿಗಿಂತಲೂ ಪರಿಣಾಮಕಾರಿ ಕೆಲಸ ಮಾಡಬಲ್ಲವೆಂದು ಪರೀಕ್ಷೆಗಳಿಂದ ತಿಳಿದು ಬಂದಿದೆ. ಆರ್ಟೆಮಿಸ್ಸಿನ್ ನಿರೀಕ್ಷಿಸಿದಷ್ಟು ಪರಿಣಾಮ ಬೀರಿತೆಂದರೆ, ಚಿಕಿತ್ಸೆಗಳಲ್ಲಿ ಹೊಸ ಅಧ್ಯಾಯ ಪ್ರಾರಂಭವಾದಂತಾಗುತ್ತದೆ.

ಇದರ ಒಂದು ಲಸಿಕೆಯನ್ನು ತಯಾರಿಸಬಹುದೆಂಬುದಕ್ಕೆ ಸಾಕಷ್ಟು ಕಾರಣಗಳಿವೆ. ಮಲೇರಿಯಾ ಸೋಂಕಿನಿಂದ ಮತ್ತೆ ಮತ್ತೆ ಬಳಲಿದವರು ಕೊನೆಗೆ

ಸೋಂಕಿನಿಂದ ರಕ್ಷಣೆ ಪಡೆದಿರುತ್ತಾರೆ. ಯಾವ ಪರೋಪಜೀವಿಯಲ್ಲಿನ ಅಣುವಿನ ತಂತ್ರದಿಂದಾಗಿ [molecular mechanisms] ಈ ನಿರೋಧಕ ಶಕ್ತಿ ತ್ವರಿತಗೊಳ್ಳುತ್ತದೆಂಬುದು ಯಾರಿಗೂ ತಿಳಿದಿಲ್ಲ. ಆದರೆ ಈ ಪರೋಪಜೀವಿಯ 'ಸಣ್ಣ ಘಟಕ' (subunits) ಗಳನ್ನು ಉತ್ಪಾದಿಸುವ ಮತ್ತು ಪರೀಕ್ಷಿಸ ಬಹುದಾದ ಸಾಧನಗಳು ಇಂದು ವಿಜ್ಞಾನಿಗಳ ಬತ್ತಳಿಕೆಯಲ್ಲಿವೆ.

ಆದರೆ ಒಂದು ಪರಿಣಾಮಕಾರಿ ಲಸಿಕೆಯನ್ನು ತಯಾರಿಸಲು ವರ್ಷಗಳೇ ಬೇಕಾಗಬಹುದು. ಒಂದು ಲಸಿಕೆ ಕೆಲವು ತೆರನಾದ ಪರೋಪ ಜೀವಿಗಳಿಂದ ಜನರನ್ನು ರಕ್ಷಿಸಬಹುದು. ಆದರೆ ಅದೇ ಲಸಿಕೆ ಬೇರೆ ತೆರನಾದ ಪರೋಪಜೀವಿ ಗಳಿಂದ ರಕ್ಷಿಸಲಸಾಧ್ಯ. ಇದೇ ರೀತಿಯಾಗಿ, ಈ ಪರೋಪ ಜೀವಿಗಳ ವಿವಿಧ ಅವಸ್ಥೆಗಳು, ದೇಹದ ನಾನಾ ಭಾಗಗಳಲ್ಲಿ ಕಾಣಿಸಿಕೊಂಡು ಅವೆಲ್ಲವುಗಳಿಂದ ದೇಹವನ್ನು ರಕ್ಷಿಸುವುದು ಒಂದೇ ಲಸಿಕೆಯಿಂದ ಸಾಧ್ಯವಾಗದು. ಒಂದು ಲಸಿಕೆ, ದೇಹ ಸೇರಿದ ಪ್ರತಿಯೊಂದು ಪರೋಪ ಜೀವಿಯ ಅವಸ್ಥೆಯಿಂದ, ರಕ್ಷಿಸುವ ಸಾಧ್ಯತೆ ಉಂಟು. ಮುಂದೆಂದಾದರೂ ಇಂಥ ಸಮಿಶ್ರ ಲಸಿಕೆಯೊಂದನ್ನು ತಯಾರಿಸಲೂಬಹುದು. ಅಲ್ಲಿಯವರೆಗೆ, ಸೊಳ್ಳೆ ಪರದೆ ಮತ್ತು ಚೀನೀ ಗಿಡ ಮೂಲಿಕೆಗಳೇ ೩.೩ ಶತಕೋಟಿ (ವಿಶ್ವದ ಜನಸಂಖ್ಯೆಯ ಶೇ. ೪೦ ರಷ್ಟು) ಜನರನ್ನು ಅಪಾಯದಡಿಯಿಂದ ರಕ್ಷಿಸಬೇಕಾಗಿದೆ.

ಗೋಪಾಲ ಆಶ್ರಿತ

ಇತರರ ಕರ್ತವ್ಯವೇನೆಂದು ವಾದ ಮಾಡುತ್ತ ಕೂಡಬೇಡ. ನಿನ್ನ ಕರ್ತವ್ಯವನ್ನು ಮೊದಲು ಈಡೇರಿಸು. ಆಗ ಇತರರು ತಾವಾಗಿಯೇ ತಮ್ಮ ಕರ್ತವ್ಯ ಮಾಡತೊಡಗುವರು. ಇತರರು ಮಾಡುವುದನ್ನು ಕಾಯುತ್ತ ಕೂಡಬೇಡ. ಮೊದಲು ನೀನು ಮಾಡುವುದನ್ನು ಮಾಡಿ ಮುಗಿಸು.

—ಥಾಮಸ್ ಕಾರ್ಲೈಲ್

ಉಪ್ಪು : ಸೇವಿಸಿದರೆ ತಪ್ಪೇನು ?

ಉಪ್ಪು ಜಗತ್ತಿನಲ್ಲಿಯೇ ಹೆಚ್ಚು ಉಪಯುಕ್ತವೂ ವಿಸ್ಮಯಜನಕವೂ ಆಗಿರುವ ಖನಿಜಗಳಲ್ಲಿ ಒಂದು. ಸಾವಿರಾರು ವರ್ಷಗಳಿಂದಲೂ ಅದು ನಮ್ಮ ಇತಿಹಾಸ, ಭಾಷೆ ಹಾಗೂ ಆಹಾರಗಳಿಗೆ ಒಗ್ಗಿಹೋಗಿದೆ. ಧರ್ಮೋಪದೇಶ ಕಾಲದಲ್ಲಿ ಏಸುಕ್ರಿಸ್ತ ತನ್ನ ವಿಧೇಯ ಶಿಷ್ಯರನ್ನು ಉಪ್ಪಿಗೆ ಹೋಲಿಸಿದ್ದಾನೆ. ಪ್ರಾಚೀನ ರೋಮ್‌ನಲ್ಲಿ ಉಪ್ಪು ಎಷ್ಟು ಅಮೂಲ್ಯವೆನಿಸಿತ್ತೆಂದರೆ ಸೀಜರನ ಸೈನಿಕರಿಗೆ ವೇತನದ ಒಂದು ಭಾಗವಾಗಿ ಉಪ್ಪನ್ನು ನೀಡಲಾಗುತ್ತಿತ್ತು. ಉಪ್ಪು ಎಂಬ ಅರ್ಥವುಳ್ಳ 'ಸ್ಯಾಲರಿಯಮ್' ಎಂಬ ರೋಮನ್ ಶಬ್ದದಿಂದಲೇ ಮುಂದೆ ವೇತನ ಎಂಬ ಅರ್ಥದ 'ಸ್ಯಾಲರಿ' ಶಬ್ದ ನಿಷ್ಪನ್ನವಾಯಿತು. ಉಪ್ಪನ್ನು ಖಾಸಗಿಯಾಗಿ ತಯಾರಿಸುವುದನ್ನು ನಿಷೇಧಿಸುವಂತಹ ಕಾನೂನನ್ನು ಉಲ್ಲಂಘಿಸುವುದರೊಂದಿಗೆಯೇ ಮಹಾತ್ಮಾಗಾಂಧಿ ತಮ್ಮ ಎರಡನೆಯ ಸತ್ಯಾಗ್ರಹ ಚಳವಳಿ ಪ್ರಾರಂಭಿಸಿದರು. ಉಪ್ಪಿಗಾಗಿ ಗುಲಾಮರ ವಿನಿಮಯಮಾಡುವ ಪದ್ಧತಿ ಕೂಡ ಪ್ರಾಚೀನ ಗ್ರೀಸ್‌ನಲ್ಲಿ ಸಾಮಾನ್ಯವಾಗಿತ್ತು. ಇದರಿಂದಲೇ ಕ್ರಮೇಣ 'ಉಪ್ಪಿನಷ್ಟೂ ಬೆಲೆಯಿಲ್ಲದವ' ಎಂಬ ನುಡಿಗಟ್ಟು ಬಳಕೆಗೆ ಬಂದಿರಬೇಕು.

ಈ ಖನಿಜ ಅಮೂಲ್ಯ, ನಿಜ. ಆದರೂ ವಾಸ್ತವವಾಗಿ ಹೇಳುವುದಾದರೆ, ಇದರ ಸೇವನೆಯಿಂದ ಅಂತಹ ಅಧಿಕ ಪ್ರಯೋಜನವೇನೂ ಇಲ್ಲ. ಉಪ್ಪು ಪೋಷಕಾಹಾರವನ್ನು ಹೆಚ್ಚು ರುಚಿಕರವಾಗಿ ಮಾಡುತ್ತದೆ, ಅಷ್ಟೆ. ಎಲ್ಲ ಬೇಕರಿ ಉತ್ಪಾದನೆಗಳಲ್ಲಿಯೂ ಉಪ್ಪನ್ನು ಬಳಸಲಾಗುತ್ತದೆ. ಅಂತೆಯೆ, ಡಬ್ಬಗಳಲ್ಲಿ ಮತ್ತು ಶೀತಕಗಳಲ್ಲಿ ಆಹಾರ ಪದಾರ್ಥಗಳನ್ನು ಕೆಡದಂತೆ ಇಡಬೇಕಾದ ಸಂದರ್ಭಗಳಲ್ಲಿ ಉಪ್ಪನ್ನು ಬಳಸುತ್ತಾರೆ. ಬಹಳಕಾಲ ಉಳಿಯುವಂತಹ ಎಲ್ಲ ಆಹಾರವಸ್ತುಗಳ ತಯಾರಿಯಲ್ಲಿ ಮತ್ತು ಹೈನು, ಮತ್ಸ್ಯ ಹಾಗೂ ಮಾಂಸ ಉದ್ಯಮಗಳಲ್ಲಿಯೂ ಉಪ್ಪನ್ನು ಬಳಸುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ, ಉಪ್ಪನ್ನು ಬಳಸದೆ ಬೇರಾವ ವಿಧಾನದಲ್ಲಿಯೂ ಆಹಾರಪದಾರ್ಥಗಳನ್ನು ಕೆಡದಂತೆ ಇಡುವುದು ಅಸಾಧ್ಯ. ಆಹಾರವಸ್ತುಗಳನ್ನು ಕೆಡಿಸುವ ಸೂಕ್ಷ್ಮಾಣು ಜೀವಿಗಳ ಬೆಳವಣಿಗೆಯನ್ನು ವಿಳಂಬಗೊಳಿಸುವ ಅಸಾಮಾನ್ಯವಾದ ಗುಣ

೧೯೮೩ರ ಮೇ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಲೆಟ್ ಅಸ್ ಗಿವ್ ಸಾಲ್ಟ್ ಎ ಫೇರ್ ಶೇಕ್' ಎಂಬ ಲೇಖನದ ಸಂಗ್ರಹಾನುವಾದ.

ಉಪ್ಪಿನಲ್ಲಿರುವುದೇ ಇದಕ್ಕೆ ಕಾರಣ. ರೋಮನ್ ಸಂತ ಪ್ಲೈನಿ ಉದ್ಗರಿಸಿದಂತೆ "ಉಪ್ಪನ್ನು ಬಳಸದಿರುವ ನಾಗರಿಕ ಜೀವನವನ್ನು ಊಹಿಸಿಕೊಳ್ಳುವುದೇ ಸಾಧ್ಯವಿಲ್ಲ."

ಆದರೂ ಈಚಿನ ದಿನಗಳಲ್ಲಿ 'ಉಪ್ಪನ್ನು ಬಳಸುವುದರಿಂದ ಆರೋಗ್ಯಕ್ಕೆ ಹಾನಿ' ಎಂಬ ಮಾತು ಮತ್ತೆಮತ್ತೆ ಕೇಳಿಬರುತ್ತಿದೆ. 'ಉಪ್ಪನ್ನು ಹೆಚ್ಚು ಬಳಸುವುದು ಒಳ್ಳೆಯದಲ್ಲ' ಎಂಬ ವಾದವನ್ನು ಪ್ರಾರಂಭಿಸಿದವರಲ್ಲಿ, ಅಮೆರಿಕದ ಆಹಾರ ಹಾಗೂ ಔಷಧವಸ್ತುಗಳ ಆಡಳಿತ ವಿಭಾಗದ ಮಾಜಿ ಕಮಿಷನರ್ ಡಾ|| ಆರ್ಥರ್ ಹಲ್ ಹಯೆಸ್ ಪ್ರಮುಖರಾಗಿದ್ದಾರೆ. ಉಪ್ಪಿನ ಸೇವನೆಯನ್ನು ಕಡಮೆಮಾಡುತ್ತ ಬರುವುದರಿಂದ, ನಾವೆಲ್ಲರೂ ಪ್ರಯೋಜನ ಪಡೆಯಬಹುದೆಂದು ಇವರು ೧೯೭೦ರಲ್ಲಿ ಮೊತ್ತಮೊದಲು ಪ್ರಕಟಿಸಿದರು. ಅಮೆರಿಕನ್ ಹಾರ್ಟ್ ಅಸೋಸಿಯೇಷನ್ ಮತ್ತು ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಸಂಸ್ಥೆಗಳೂ ಅಮೆರಿಕದ ಸರ್ಜನ್ ಜನರಲ್ ಅವರೂ ಹಯೆಸ್ ಅವರ ವಾದವನ್ನು ಕ್ರಮೇಣ ಬೆಂಬಲಿಸತೊಡಗಿದರು. ರಾಜಕಾರಣಿಗಳೂ ಉಪ್ಪಿನ ವಿರುದ್ಧ ಪ್ರಚಾರಕಾರ್ಯವನ್ನು ಪ್ರಾರಂಭಿಸಿದರು. ಅಮೆರಿಕದ ಕಾಂಗ್ರೆಸ್ ಸದಸ್ಯರಲ್ಲೊಬ್ಬರಾದ ನೀಲ್‌ಸ್ಮಿಥ್ ಅವರು ಹೀಗೆಂದಿದ್ದಾರೆ. "ವ್ಯಕ್ತಿ ಸೇವಿಸುವ ಸೋಡಿಯಮ್‌ನ ಪ್ರಮಾಣ ಹಾಗೂ ಹೃದ್ರೋಗ, ರಕ್ತಪರಿಚಲನ ಅವ್ಯವಸ್ಥೆ, ಪಾರ್ಶ್ವವಾಯು ಮತ್ತು ಕ್ಷಿಪ್ರಮರಣ—ಇವುಗಳ ನಡುವೆ ನೇರವಾದ ಸಂಬಂಧವಿದೆ."

ಇದು ಒಂದೊಮ್ಮೆ ನಿಜವೇ ಆಗಿದ್ದರೆ, ನಿಸ್ಸಂದೇಹವಾಗಿ ಹೆದರಿಸುವಂತಹ ವಿಚಾರ. ಆದರೆ ಅನೇಕ ಡಾಕ್ಟರರು ಹಾಗೂ ವೈದ್ಯಕೀಯ ಸಂಶೋಧಕರು, ಉಪ್ಪಿನ ವಿರುದ್ಧವಾದ ಪ್ರಚಾರ ಅತಿಯಾಯಿತು ಎಂಬ ಅಭಿಪ್ರಾಯಕ್ಕೆ ಈಗೀಗ ಬರತೊಡಗಿದ್ದಾರೆ. ಇವರಲ್ಲೊಬ್ಬರೂ ಅಲಬಾಮ ವಿಶ್ವವಿದ್ಯಾನಿಲಯದ ಕಾರ್ಡಿಯೋವಸ್ಕ್ಯುಲರ್ ಸಂಶೋಧನ ಹಾಗೂ ತರಬೇತಿ ಕೇಂದ್ರದ ನಿವೃತ್ತ ನಿರ್ದೇಶಕಿಯೂ ಆಗಿರುವ ಡಾ. ಹರ್ರಿಯೆಟ್ ಮಸ್ತನ್ ಅವರು ಹೀಗೆನ್ನುತ್ತಾರೆ, "ಉಪ್ಪಿನ ಸೇವನೆಯ ವಿರುದ್ಧ ಇಂಥ ಬೊಬ್ಬೆ—ಗದ್ದಲಗಳನ್ನು ನಡೆಸಬೇಕಾದ ಅಗತ್ಯವೇ ಇಲ್ಲ. ನಮ್ಮಲ್ಲಿ ಹೆಚ್ಚಿನವರ ವಿಚಾರದಲ್ಲಿ ಹೇಳುವುದಾದರೆ, ನಾವೆಷ್ಟು ಉಪ್ಪು ಸೇವಿಸುತ್ತೇವೆ ಎನ್ನುವುದರಿಂದ ನಮ್ಮ ಆರೋಗ್ಯದ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ. "ಮಸ್ತನ್ ಅವರು ಇತ್ತೀಚೆಗೆ ನಡೆಸಿದ ಹಾಗೂ ೧೫೦ ಜನರನ್ನೊಳಗೊಂಡ ಅಲ್ಪಾವಧಿ ಅಧ್ಯಯನವೊಂದರಿಂದ

ತಿಳಿದುಬಂದಂತೆ, ಸಾಮಾನ್ಯ ರಕ್ತದೊತ್ತಡವುಳ ಯಾವನೇ ವ್ಯಕ್ತಿಯ ಆರೋಗ್ಯ ದಲ್ಲಿ, ಮೊದಲು ಕೆಲಕಾಲ ಕಡಮೆ ಉಪ್ಪು ಸೇವಿಸಿದುದರಿಂದಾಗಲಿ ಅಥವಾ ಅನಂತರ ಹೆಚ್ಚು ಉಪ್ಪು ಬಳಸತೊಡಗಿದುದರಿಂದಾಗಲಿ, ಯಾವುದೇ ಬದಲಾವಣೆ ಯುಂಟಾಗಿಲ್ಲ. ಆದರೆ ಅಧಿಕ ರಕ್ತದೊತ್ತಡವುಳ್ಳ ವ್ಯಕ್ತಿಗಳ ವಿಷಯದಲ್ಲಿ, ಸುಮಾರು ಶೇ. ೫೦ರಷ್ಟು ಜನರ ರಕ್ತದೊತ್ತಡ, ಕಡಮೆ ಉಪ್ಪು ಸೇವಿಸಿದಾಗ ಕೊಂಚ ಕಮ್ಮಿಯಾದುದೂ ಹೆಚ್ಚು ಉಪ್ಪು ಬಳಸತೊಡಗಿದಾಗ ಸ್ವಲ್ಪ ಹೆಚ್ಚಾಗಿ ಹಿಂದಿನ ಹಂತಕ್ಕೆ ಏರಿದುದೂ ಇದೇ ಅಧ್ಯಯನದಿಂದ ತಿಳಿದುಬಂದಿದೆ.

ಇತರ ಕೆಲವು ಸಂಶೋಧನೆಗಳೂ ದುಸ್ತನ್ ಅವರ ಸಂಶೋಧನೆಯನ್ನು ಸಮರ್ಥಿಸಿವೆ. ಉದಾಹರಣೆಗೆ, ಸಾಮಾನ್ಯ ಆರೋಗ್ಯವುಳ್ಳವರನ್ನು ಅಧಿಕ ಉಪ್ಪಿನ ಸೇವನೆಗೆ ಒಳಪಡಿಸಿದಾಗ, ಅವರ ರಕ್ತದೊತ್ತಡವು ಅಧಿಕರಕ್ತದೊತ್ತಡ ವೆನ್ನಬಹುದಾದ ಹಂತಕ್ಕೆ ಏರದೆ ಇರುವುದು ಇಂಡಿಯಾನ ಅಧ್ಯಯನವೊಂದ ರಿಂದ ಖಚಿತವಾಗಿದೆ. ಅಷ್ಟೇ ಅಲ್ಲ, ರಕ್ತದೊತ್ತಡವು ಅತ್ಯಧಿಕವೆನ್ನಬಹುದಾದ ಹಂತಕ್ಕೆ ಏರಿರುವಂತಹ ವ್ಯಕ್ತಿಗಳು ಸಾಮಾನ್ಯವಾಗಿ ಸೇವಿಸುವ ಉಪ್ಪಿನ ಪ್ರಮಾಣವನ್ನು ಸ್ವಲ್ಪವೂ ಕಡಮೆ ಮಾಡದೆಯೇ, ಕಡಮೆ ಕ್ಯಾಲರಿ ಆಹಾರ ಪದಾರ್ಥಸೇವನೆಯ ವಿಧಾನದಿಂದ, ತಮ್ಮ ರಕ್ತದೊತ್ತಡವನ್ನು ಇಳಿಸಿಕೊಳ್ಳಲು ಸಾಧ್ಯವೆಂದೂ ಇಸ್ರೇಲಿನಲ್ಲಿ ನಡೆದ ಕೆಲವು ಅಧ್ಯಯನಗಳು ಸಾಬೀತುಗೊಳಿಸಿವೆ.

"ಸಾಕಷ್ಟು ಉತ್ತಮ ಆರೋಗ್ಯ ಹೊಂದಿರುವ ಬಹುತೇಕ ಸಾಮಾನ್ಯ ಜನರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಸಮರ್ಪಕ ಪ್ರಮಾಣದ ಉಪ್ಪನ್ನು ಆಹಾರವಾಗಿ ಸೇವಿಸುವುದೇ ಹೆಚ್ಚು ಒಳ್ಳೆಯದು, ಆದ್ದರಿಂದ ಉಪ್ಪಿನ ಸೇವನೆ ಯನ್ನು ಎಲ್ಲರೂ ಬಿಟ್ಟುಬಿಡಬೇಕೆಂಬ ವಾದದಲ್ಲಿ ಯಾವುದೇ ಹುರುಳಿಲ್ಲ" ಎನ್ನುತ್ತಾರೆ ನ್ಯೂಯಾರ್ಕ್ ಹಾಸ್ಪಿಟಲ್-ಕಾರ್ನೆಲ್ ವೈದ್ಯಕೀಯ ಕೇಂದ್ರದ ಅಧಿಕ ರಕ್ತದೊತ್ತಡ ವಿಭಾಗದ ಮುಖ್ಯಸ್ಥರೂ ಅಮೆರಿಕದ ವಿಖ್ಯಾತ ರಕ್ತ ದೊತ್ತಡ ತಜ್ಞರೂ ಆಗಿರುವ ಡಾ. ಜಾನ್ ಲರಾಗ್.

ಉಪ್ಪನ್ನು ಇಷ್ಟಪಡುವ ನಮ್ಮೆಲ್ಲರಿಗೂ ಇದು ಶುಭ ಸಮಾಚಾರವಾಗಿದೆ. ನಿಜವಾಗಿ ಹೇಳುವುದಾದರೆ, ಉಪ್ಪನ್ನು ಬಳಸದೆಯೇ ಜೀವಿಸಲು ಸಾಧ್ಯವಿಲ್ಲ. ಮಾನವ ಶರೀರಕ್ಕೆ ಯಾವಾಗಲೂ ಉಪ್ಪಿನ ಅಗತ್ಯವಿದೆ. ಉಪ್ಪು ಅಥವಾ ಸೋಡಿಯಮ್ ಕ್ಲೋರೈಡ್‌ನಲ್ಲಿ ಸೋಡಿಯಮ್‌ನ ಪ್ರಮಾಣ ಶೇ. ೩೯ ಆದರೆ ಕ್ಲೋರೈಡ್‌ನ ಪ್ರಮಾಣ ಶೇ. ೬೧. ಶರೀರದೊಳಗೊಂದು ದ್ರಾವಣ ವನ್ನುಂಟುಮಾಡುವ ಈ ಎರಡು ಘಟಕಗಳು ಸೋಡಿಯಮ್ ಹಾಗೂ

ಕ್ಲೋರೈಡ್ ಅಯಾನುಗಳಾಗಿ ವಿಭಜನಗೊಳ್ಳುತ್ತವೆ. ಇವೆರಡಕ್ಕೂ ತಮ್ಮದೇ ಆದ ಪ್ರತ್ಯೇಕ ಕಾರ್ಯಚಟುವಟಿಕೆಗಳಿವೆ. ಕ್ಲೋರೈಡ್ ಜೀವಕೋಶ ಮತ್ತು ಅದರ ಪರಿಸರದ ನಡುವಿನ ಜಲಾಂಶ ಸಮತೋಲವನ್ನು ಕಾಪಾಡುತ್ತದೆ; ಆಹಾರ ವಸ್ತುಗಳು ಜೀರ್ಣವಾಗಲು ನೆರವಾಗುತ್ತದೆ ಹಾಗೂ ಸೋಡಿಯಮ್ ಜೊತೆ ಸೇರಿ, ಪ್ರಾಣಾಧಾರವೆನಿಸಿದ ರಕ್ತಾಮ್ಲದ ಸಮತೋಲನವನ್ನು ಕಾಪಾಡುತ್ತದೆ. ಸೋಡಿಯಂ ರಕ್ತದ ಪ್ರಮಾಣ ಹಾಗೂ ರಕ್ತದೊತ್ತಡಗಳನ್ನು, ಮಾನವ ಶರೀರದ ಆವಶ್ಯಕತೆಗೆ ತಕ್ಕಂತೆ, ನಿಯಂತ್ರಿಸುವುದರಲ್ಲಿ ನೆರವಾಗುತ್ತದೆ. ನರ ಆವೇಗಗಳ ವಹನವನ್ನು ಸುಲಭಗೊಳಿಸುತ್ತದೆ ಹಾಗೂ ಹೃದಯ ಮತ್ತು ಸ್ನಾಯು ಸಂಕೋಚಗಳಿಗೂ ಇದು ಆವಶ್ಯಕವಾಗಿದೆ.

ಲವಣಾಂಶದ ಕೊರತೆ ಅಥವಾ ಆಧಿಕ್ಯದಿಂದ ನಮ್ಮನ್ನು ರಕ್ಷಿಸಲು ತನ್ನದೇ ಆದ ವ್ಯವಸ್ಥೆಯೊಂದಿದೆ. ಶರೀರದಲ್ಲಿ ಲವಣಾಂಶ ಅಧಿಕವಾಗಿದ್ದಾಗೂ ಅವನ್ನು ಮೂತ್ರದೊಂದಿಗೆ ವಿಸರ್ಜಿಸುವ ಮೂತ್ರಜನಕಾಂಗಗಳೂ ಲವಣಾಂಶ ಕಡಮೆಯಾಗಿದ್ದಾಗ, ಜಲಾಂಶವನ್ನಷ್ಟೇ ವಿಸರ್ಜಿಸುತ್ತವೆಯಲ್ಲದೆ ಲವಣಾಂಶವನ್ನಲ್ಲ.

ಈ ಆವಶ್ಯಕ ಖನಿಜವಿಲ್ಲದೆ ಮಾನವ ಶರೀರಗಳು ಕಾರ್ಯನಿರ್ವಹಿಸಲಾರವು. ಆಸ್ಪತ್ರೆಯ ತುರ್ತು ಹಾಗೂ ವಿಶೇಷ ಚಿಕಿತ್ಸೆಯ ಅಗತ್ಯವಿರುವ ವಿಭಾಗಗಳಲ್ಲಿ ರೋಗಿಯ ಅಭಿಧಮನಿಗಳ ಒಳಗೆ ಲವಣಯುಕ್ತ ದ್ರಾವಣವನ್ನು ಸೇರಿಸಲಾಗುತ್ತದೆ. ಶಸ್ತ್ರಚಿಕಿತ್ಸೆಯ ಸಂದರ್ಭಗಳಲ್ಲಿ ರೋಗಿಗಳು ಆಘಾತಕ್ಕೀಡಾಗದಂತೆಯೂ ಇದು ತಡೆಯುತ್ತದೆ. ಉಪ್ಪಿನ ಸೇವನ ಅತ್ಯಲ್ಪವಾದಾಗ, ಸ್ನಾಯುಸೆಡೆತ ಮತ್ತು ಪಿತ್ತೋದ್ರೇಕಗಳು ಉಂಟಾಗುತ್ತವೆ. ಇವರಿಂದ ಶರೀರದ ನಿರೋಧಕ ಶಕ್ತಿ ಕುಗ್ಗುತ್ತದೆ. ವಾಸ್ತವವಾಗಿ ಹೇಳುವುದಾದರೆ, ೧೮೧೨ರಲ್ಲಿ ನೆಪೋಲಿಯನ್ ರಷ್ಯಾದಿಂದ ಹಿಮ್ಮೆಟ್ಟಲು, ಅವನ ಸೈನಿಕರಿಗೂ ಕುದುರೆಗಳಿಗೂ ಉಪ್ಪಿನ ಸರಬರಾಜಿನಲ್ಲಿ ಕೊರತೆಯುಂಟಾದ್ದೇ ಕಾರಣ. ಲವಣಾಂಶಯುಕ್ತ ಆಹಾರದಿಂದ ವಂಚಿತರಾದ್ದರಿಂದ, ರೋಗಗಳು ಹಾಗೂ ಸೋಂಕನ್ನು ನಿರೋಧಿಸುವ ಸಾಮರ್ಥ್ಯ ಬಹುಕಾಲ ಉಳಿಯದೆ ನೆಪೋಲಿಯನ್ನಿನ ಸಾವಿರಾರು ಸೈನಿಕರು ಸಾವನ್ನಪ್ಪಿದರು.

ಅದೃಷ್ಟವಶಾತ್ ಇಂದು ಅಂಥ ಪರಿಸ್ಥಿತಿಯೇನೂ ಇಲ್ಲ. ನಮ್ಮಲ್ಲಿ ಈ ಖನಿಜದ ಸಮೃದ್ಧ ನಿಕ್ಷೇಪಗಳಿವೆ. ಸಮುದ್ರಜಲದ ಪ್ರತಿ ಲೀಟರಿನಲ್ಲಿಯೂ ೩೦ ಗ್ರಾಮ್‌ಗಳಷ್ಟು ಲವಣಾಂಶವಿರುತ್ತದೆ. ಸಾಗರಗಳಿಗೂ ನಮ್ಮಲ್ಲಿ ಕೊರತೆಯಿಲ್ಲ. ಹೀಗಾಗಿ ಅಗತ್ಯ ಎಷ್ಟೇ ಹೆಚ್ಚಿದರೂ, ಅದನ್ನು ಪೂರೈಸುವಷ್ಟು

ಉಪ್ಪನ್ನು ನಮ್ಮ ಸಾಗರಗಳಿಂದಲೇ ತಯಾರಿಸುವುದು ಸಾಧ್ಯ. ಇಷ್ಟೇ ಅಲ್ಲ. ಪ್ರಾಚೀನ ಕಾಲದಲ್ಲಿ ಸಾಗರವಾಗಿದ್ದು ಅನಂತರ ಕ್ರಮೇಣ ಭೂಮಿಯಾದಂತಹ ಎಲ್ಲ ಖಂಡಗಳ ಕೆಲವು ಭೂಭಾಗಗಳಲ್ಲಿಯೂ ಲವಣ ಖನಿಜದ ನಿಕ್ಷೇಪಗಳಿವೆ. ಈ ಮಾತಿಗೆ ಅಂಟಾರ್ಕ್‌ಟಿಕವೂ ಹೊರತಲ್ಲ.

ಗಾಜು, ಸಾಬೂನು, ಪ್ಲಾಸ್ಟಿಕ್, ಕಾಗದ, ಬಣ್ಣ, ಕೃತಕ ರಬ್ಬರ್, ಪ್ರಸಾದನ ವಸ್ತುಗಳು, ಔಷಧಗಳು ಹಾಗೂ ಬ್ಯಾಟರಿಗಳ ತಯಾರಿಯಲ್ಲಿಯೂ ಉಪ್ಪನ್ನು ಬಳಸುತ್ತಾರೆ. ನಿಜವಾಗಿ ಹೇಳುವುದಾದರೆ, ಲವಣವಿಲ್ಲದೆಹೋದಲ್ಲಿ ಯಾವುದೇ ರಾಸಾಯನಿಕ ಉದ್ಯಮ ಸಾಧ್ಯವೇ ಇಲ್ಲ.

ಯಾವ ಪ್ರಮಾಣದ ಉಪ್ಪನ್ನು ಬಳಸುವುದು ನಮ್ಮ ಆಹಾರ ಸೇವನೆಯಲ್ಲಿ ಅತಿಯೆನಿಸುತ್ತದೆ? ಪ್ರತಿಯೊಬ್ಬನೂ ಉಪ್ಪನ್ನು ಮಿತವಾಗಿ ಬಳಸಬೇಕು ಎಂಬುದನ್ನು ಎಲ್ಲ ವೈದ್ಯಕೀಯ ತಜ್ಞರೂ ಒಪ್ಪುತ್ತಾರೆ. ಸಾಮಾನ್ಯ ವ್ಯಕ್ತಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಮಿತಪ್ರಮಾಣ ದಿನಕ್ಕೆ ೪ ರಿಂದ ೧೦ ಗ್ರಾಮ್‌ಗಳಷ್ಟಾಗಿರುತ್ತದೆ; ಅಥವಾ ಸುಮಾರು ¾ ದಿಂದ ೧¾ ಚಮಚಗಳಷ್ಟಾಗಿರುತ್ತದೆ. ಈ ಪ್ರಮಾಣದಲ್ಲಿ ೧ ರಿಂದ ೨ ಗ್ರಾಮ್‌ಗಳಷ್ಟು ಲವಣಾಂಶ, ಆಹಾರ ಪದಾರ್ಥಗಳಲ್ಲಿ ಸಹಜವಾಗಿರುವಂತಹ ಸೋಡಿಯಮ್‌ನಿಂದ ಸಿಗುತ್ತದೆ. ಉಳಿದ ಪ್ರಮಾಣವನ್ನು ಅಡಿಗೆ ಮಾಡುವಾಗ ಸೇರಿಸಲಾಗುತ್ತದೆ ಅಥವಾ ಊಟದ ಜೊತೆ ಸೇವಿಸಲಾಗುತ್ತದೆ.

ಕಿಡ್ನಿ, ಯಕೃತ್ ಹಾಗೂ ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳಿರುವವರು, ಅವರ ಡಾಕ್ಟರರು ಸಲಹೆ ಕೊಟ್ಟಿದ್ದೇ ಆದಪಕ್ಷದಲ್ಲಿ, ಉಪ್ಪಿನ ಸೇವನೆಯನ್ನು ಮಿತಿಗೊಳಿಸಬೇಕು. ಆದರೆ "ಕಡಮೆ ಉಪ್ಪು" ಪ್ರತಿಪಾದಕರೆಂದೇ ಹೆಚ್ಚು ಚಿರಪರಿಚಿತರಾಗಿರುವ ಡಾ॥ ಆರ್ಥರ್ ಹಲ್ ಹಯೆಸ್ ಜೂನಿಯರ್ ಅವರು ಕೂಡ "ಅಧಿಕ ಉಪ್ಪಿನ ಸೇವನೆಯಿಂದ ಅಧಿಕ ರಕ್ತದೊತ್ತಡ ಉಂಟಾಗುತ್ತದೆಯೇ ಎಂಬುವನ್ನು ನಾವಿನ್ನೂ ಖಚಿತವಾಗಿ ತಿಳಿದಿಲ್ಲ" ಎಂದು ಒಪ್ಪುತ್ತಾರೆ. ವಾಸ್ತವವಾಗಿ ಹೇಳುವುದಾದರೆ, ಈ ಕೆಳಗೆ ಹೆಸರಿಸಿದ ಇತರ ಕೆಲವು ಅಂಶಗಳೂ ಅಧಿಕ ರಕ್ತದೊತ್ತಡಕ್ಕೆ ಕಾರಣವಾಗಬಹುದೆಂಬುದಕ್ಕೆ ಹೆಚ್ಚುತ್ತಿರುವ ವೈಜ್ಞಾನಿಕ ಸಾಕ್ಷ್ಯಾಧಾರಗಳಿವೆ. ಉದಾಹರಣೆಗೆ–ಕ್ಯಾಲ್ಸಿಯಂ, ಪೊಟ್ಯಾಸಿಯಂ ಹಾಗೂ ಪ್ರಾಯಃ ಮ್ಯಾಗ್ನೀಸಿಯಮ್‌ನ ಕೊರತೆ, ಸ್ಥೂಲಕಾಯತ್ವ (ಇದು ಸೋಡಿಯಮ್‌ಗಿಂತಲೂ ಹೆಚ್ಚು ಅಪಾಯಕರ), ತಳಿಶಾಸ್ತ್ರ ಸಂಬಂಧವಾದ ಕೆಲವು ಕಾರಣಗಳು, ಮಾನಸಿಕ ಒತ್ತಡ ಅಥವಾ ಉದ್ವೇಗ ಇತ್ಯಾದಿ.

ಒರೆಗಾನ್ ಹೆಲ್ತ್ ಸೈನ್ಸಸ್ ವಿಶ್ವವಿದ್ಯಾನಿಲಯದ ನೆಫ್ರಾಲಜಿ ಹಾಗೂ ಹೈಪರ್‌ಟೆನ್ಷನ್ ವಿಭಾಗದ ಸಹ ಮುಖ್ಯಸ್ಥರಾಗಿರುವ ಡಾ. ಡೇವಿಡ್ ಮ್ಯಾಕ್ ಕ್ಯಾರೆನ್ ಅವರು 'ಉಪ್ಪಿನ ಸೇವನೆಯನ್ನು ವ್ಯಾಪಕವಾಗಿ ನಿಯಂತ್ರಿಸುವುದರಿಂದ, ಸಹಜವಾಗಿಯೇ, ಜನರು, ಅದರ ಪ್ರಯೋಜನ ಎಷ್ಟಿರುತ್ತದೆಯೋ ಆ ಪ್ರಮಾಣಕ್ಕಿಂತ ಹೆಚ್ಚು ಹಾನಿಗೀಡಾಗುತ್ತಾರೆ" ಎಂಬ ಎಚ್ಚರಿಕೆ ನೀಡಿದ್ದಾರೆ. ಅವರ ಅಭಿಪ್ರಾಯ ಹೀಗಿದೆ: "ಸೋಡಿಯಮ್ ಬಗ್ಗೆ ವಿಸ್ಮಯ ಪಡುವಷ್ಟು ಹೆಚ್ಚು ವಿಷಯಗಳು ನಮಗೆ ತಿಳಿದುಬಂದಿವೆ. ಆದರೆ ಪೊಟ್ಯಾಸಿಯಂ ಹಾಗೂ ಕ್ಯಾಲ್ಸಿಯಂಗಳ ಬಗ್ಗೆ ತಿಳಿದುಬಂದಿರುವುದು ಸ್ವಲ್ಪ ಮಾತ್ರ. ಉಳಿದವುಗಳ ಬಗೆಗಂತೂ ಹೆಚ್ಚೇನೂ ತಿಳಿದುಬಂದಿಲ್ಲ. ಪೋಷಕಾಂಶಗಳಲ್ಲಿ ಒಂದಾದ ಸೋಡಿಯಮ್ ಇತರ ಪೋಷಕಾಂಶಗಳ ಮೇಲೆ ಎಂಥ ಪ್ರಭಾವ ಬೀರುತ್ತದೆ ಎಂಬ ವಿಷಯವೇ ತಿಳಿಯದಿರುವಾಗ, ಸೋಡಿಯಮ್ ಸೇವನೆಯ ಪ್ರಮಾಣವನ್ನು ಬದಲಾಯಿಸುವಂತೆ ಜನರಿಗೆ ಸಲಹೆ ನೀಡುವುದೇ ಅಪಾಯಕರ. ಸಾಮಾನ್ಯ ಆರೋಗ್ಯವುಳ್ಳ ವ್ಯಕ್ತಿಗಳ ಸಂಬಂಧದಲ್ಲಿಯಂತೂ ಉಪ್ಪಿನ ಸೇವನೆಯ ವಿಷಯದಲ್ಲಿ ಅವರ ಮೇಲೆ ಯಾವುದೇ ಒತ್ತಾಯ ಹೇರಬಾರದು. ಹೀಗೆ ಸುಮ್ಮಸುಮ್ಮನೆ, ವಿಶೇಷ ಕಾರಣಗಳಿಲ್ಲದೆ, ಉಪ್ಪಿನ ಸೇವನೆಯನ್ನು ಹೆಚ್ಚು ಅಥವಾ ಕಡಮೆ ಮಾಡುವುದರಿಂದ, ಮುಂದೆ ಅನೇಕ ಸಮಸ್ಯೆಗಳೇ ಉದ್ಭವಿಸಬಹುದು."

ಕ್ಯಾಲ್ಸಿಯಮ್‌ನ ಕೊರತೆ ಕೂಡ ಅಧಿಕ ರಕ್ತದೊತ್ತಡಕ್ಕೆ ಕಾರಣವಾಗಬಹುದೆಂದು ಮ್ಯಾಕ್ ಕ್ಯಾರೆನ್ನರ ಸಂಶೋಧನೆ ಸೂಚಿಸಿದೆ.

ಕೆಲವು ರೋಗಿಗಳನ್ನು 'ಕಡಮೆ ಉಪ್ಪು ಸೇವನೆ' ಅಥವಾ 'ಮೂತ್ರ ಸ್ರಾವ ವಿಸರ್ಜಕಗಳ ಸೇವನೆ'ಗಳಿಗೆ ಒಳಪಡಿಸಿದಾಗ, ಅವರ ರಕ್ತದೊತ್ತಡವು ಏರುವುದರಲ್ಲಿ ಸಂದೇಹವೇ ಇಲ್ಲ ಎಂದು ಇಂಡಿಯಾನಾ ವಿಶ್ವವಿದ್ಯಾನಿಲಯದ ಔಷಧ ಶಾಲೆಯ ಡಾ|| ಮೈರನ್‌ವೀನ್ ಬರ್ಗರ್ ಮತ್ತು ಡಾ|| ಫ್ರೆಡ್ ಲಿಫ್ಟ್— ಇವರು ನಡೆಸಿದ ಸಂಶೋಧನೆಗಳಿಂದ ಖಚಿತವಾಗಿ ತಿಳಿದುಬಂದಿದೆ. ಇಂಥ ಆಹಾರ ಹಾಗೂ ಔಷಧಗಳ ಸೇವನೆಯಿಂದ ಪಾರ್ಶ್ವವಾಯು ಹಾಗೂ ಹೃನ್ನಾಳ ಮತ್ತು ಹೃದಯಗಳಿಗೆ ಸಂಬಂಧಿಸಿದ ರೋಗಗಳು ಹೆಚ್ಚುವ ಅಪಾಯವಿದೆ.

ಹಾಗಾದರೆ ಉಪ್ಪಿನ ಸೇವನೆಯನ್ನು ಕುರಿತಂತೆ ಕೊನೆಯ ಮಾತಾದರೂ ಏನು? ಕಾರ್ನೆಲ್‌ನ ಡಾ|| ಲರಾಗ್ ಹೀಗೆನ್ನುತ್ತಾರೆ: "ಉಪ್ಪು ನಿಮ್ಮ

ತಪ್ಪುವಲ್ಲ. ಮಾನವ ಶರೀರದ ಎಲ್ಲ ಜೀವಕೋಶಗಳಿಗೆ ಸಂಬಂಧಿಸಿದಂತೆ ಹೇಳುವುದೇ ಆದರೆ, ಉಪ್ಪು ಅತ್ಯಂತ ಮಹತ್ವದ ಘಟಕವಾಗಿದೆ. ನಮಗೆ ಉಪ್ಪಿನ ಅವಶ್ಯಕತೆಯಿಲ್ಲವೆನ್ನುವ ಭಾವನೆಯೇ ತಪ್ಪು. ಉಪ್ಪಿನ ಸೇವನೆಯಿಂದ ನಿಮ್ಮ ಆರೋಗ್ಯ ಕೆಟ್ಟು, ಯಾವುದಾದರೂ ತೊಂದರೆಗಳು ಕಾಣಿಸಿಕೊಳ್ಳಬಹುದು ಎಂದು ನಿಮ್ಮ ಕುಟುಂಬ ವೈದ್ಯರು ಸಲಹೆ ನೀಡುವ ತನಕ ಉಪ್ಪನ್ನು ತ್ಯಜಿಸಬೇಕಾದ ಅಗತ್ಯವೇ ಇಲ್ಲ."

ಶಂಸ ಐತಾಳ

ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸ ಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು - 570006

ದೂರವಾಣಿ ಸಂಖ್ಯೆ : 520435

ಹಳ್ಳಿಯ ಮಗಳು

ಅವಳೊಬ್ಬಳು ಅಲೆಮಾರಿ. ಅವಳ ದೇಹದ ಬಣ್ಣ ಪೂರಾ ಕಪ್ಪಾಗಿದ್ದರೂ ಲಕ್ಷಣಗಳು ಎದ್ದು ಕಾಣುತ್ತಿದ್ದವು. ಬ್ಯಾಟರಿಯ ಬೆಳಕಿನಂತೆ ಉರಿವ ಕಣ್ಣುಗಳು. ಆಕೆ ತೊಟ್ಟಿದ್ದ ಕೆಂಪು ಬಣ್ಣದ ಒಳಲಂಗ ಅವಳ ಕಾಲಿನ ಮೀನಖಂಡದವರೆಗಿತ್ತು. ಕಿತ್ತಳೆ ಬಣ್ಣದ ಅಂಗಿಯ ಕಾಲರು ಬಿಳಿ ಮಣಿಗಳಿಂದ ಅಲಂಕೃತಗೊಂಡಿತ್ತು. ಹದಮಾಡಿದ ಚರ್ಮದಿಂದ ತಯಾರಿಸಿದ, ಮುಂತುದಿ ಸ್ವಲ್ಪ ಮೇಲಕ್ಕೆ ಬಾಗಿದಂತಿರುವ ಬೂಟುಗಳನ್ನೂ ತೊಟ್ಟಿದ್ದಳು. ಕಾಲಿಗೆ ಚಿಕ್ಕ ಚಿಕ್ಕ ಗೆಜ್ಜೆಗಳ ಚೈನನ್ನು ಹಾಕಿದ್ದಳು. ಮೂಗಿನ ನತ್ತು ಮತ್ತು ಕಿವಿಯಲ್ಲಿ ಧರಿಸಿದ್ದ ರಿಂಗುಗಳು ಹಿತ್ತಾಳೆಯಿಂದ ಮಾಡಿದುವಾಗಿದ್ದವು. ಚಿಕ್ಕ ಬೆಳ್ಳಿಯ ಪದಕವೊಂದು ಅವಳ ಕೊರಳಿನಲ್ಲಿ ತೂಗುತ್ತಿತ್ತು. ಕೈಬೆರಳುಗಳಲ್ಲಿ ಹಿತ್ತಾಳೆಯ ಹಲವು ಉಂಗುರಗಳನ್ನು ಹಾಕಿದ್ದಳು. ಕೈಗಳಿಗೆ ಬಣ್ಣಬಣ್ಣದ ಪ್ಲಾಸ್ಟಿಕ್ ಬಳೆಗಳನ್ನು, ಹಿತ್ತಾಳೆ ಕಡಗಗಳನ್ನು ತೊಟ್ಟಿದ್ದಳು. ಅವಳ ಬಲಹುಬ್ಬಿನ ಮೇಲೆ ಅರ್ಧ ಚಂದ್ರಾಕಾರದ ಹಚ್ಚೆಯ ಗುರುತಿತ್ತು.

ಸೆಪ್ಟೆಂಬರ್ ತಿಂಗಳ ಒಂದು ಮಧ್ಯಾಹ್ನ. ಬೇಸಗೆಯ ಧಗೆ ಬಹುಪಾಲು ಕಡಿಮೆಯಾಗಿತ್ತು. ನಾನು ವರಾಂಡದ ಗೋಡೆಯ ನೆರಳಿನಲ್ಲಿ ಕೂತು ಏನನ್ನೋ ಓದುತ್ತಲೋ, ಬರೆಯುತ್ತಲೋ ಇದ್ದೆ. ನನ್ನ ಹೆಂಡತಿಯನ್ನೇ ಹಿಂಬಾಲಿಸಿಕೊಂಡು ಅವಳು ವರಾಂಡಕ್ಕೆ ಬಂದಳು. ನಾನು ಕಣ್ಣುಮುಚ್ಚಿಕೊಂಡು ಅವರ ಮಾತುಗಳನ್ನು ಆಲಿಸಿದೆ. ಪಂಜಾಬಿ ಹುಡುಗಿಯೊಬ್ಬಳು ಎಷ್ಟು ಚೆನ್ನಾಗಿ ಪಂಜಾಬಿಯಲ್ಲಿ ಮಾತನಾಡಬಲ್ಲಳೋ ಅಷ್ಟೇ ಚೆನ್ನಾಗಿ ಅವಳು ಪಂಜಾಬಿಯಲ್ಲಿ ಮಾತನಾಡುತ್ತಿದ್ದುದನ್ನು ಕಂಡು ಆಶ್ಚರ್ಯಗೊಂಡೆ; ನಾನವಳ ಕಡೆ ದಿಟ್ಟಿಸಿ ನೋಡಿದೆ, ತಕ್ಷಣ ಅವಳು ಕುಳಿತುಕೊಂಡಳು. ನನ್ನ ಹೆಂಡತಿ ತಳ ಒಡೆದು ನೀರು ಸೋರುತ್ತಿದ್ದ ಎರಡು ಬಕೆಟ್ಟುಗಳನ್ನು ತಂದು ಪರೀಕ್ಷಿಸುತ್ತಿದ್ದಳು.

"ಇವನ್ನ ರಿಪೇರಿ ಮಾಡೋಕೆ ಎಷ್ಟಾಗುತ್ತೆ?" ನನ್ನ ಹೆಂಡತಿ ಅವಳನ್ನು ಕೇಳಿದಳು.

ಇದಕ್ಕೆ ಪ್ರತಿಯಾಗಿ, ಆ ಹುಡುಗಿ ನನ್ನ ಹೆಂಡತಿಯನ್ನು ಮುರುಕಲು ಡಬ್ಬ ಕೇಳಿದಳು. ತಕ್ಷಣ ನನ್ನ ಹೆಂಡತಿ ಹಿಡಿಮುರಿದ, ಸುಮಾರು ಒಂದು ಗ್ಯಾಲನ್

ಮೂಲ: ರಾಮ್ ಸರೂಪ್ ಅನಖಿ ಅವರ ಪಂಜಾಬಿ ಲೇಖನದ ಅನುವಾದ.

ಹಿಡಿಸುವ ಹೊಸ ಡಬ್ಬವೊಂದನ್ನು ತಂದಳು. ನಾವು ಆ ಡಬ್ಬದಿಂದ ತುಂಬಾ ಕಷ್ಟಕಟ್ಟು ಸೀಮೆಯೆಣ್ಣೆಯನ್ನು ಸುರಿದುಕೊಳ್ಳುತ್ತಿದ್ದೆವು. ಒಲೆ ಹತ್ತಿಸಲು ಬಳಸಬಹುದಾದ ವಾಹನಗಳ ಕೊಳಕು ಎಣ್ಣೆಯನ್ನು ಇದರಲ್ಲಿ ತುಂಬಿಸಿದ್ದೆವು. ಕೆಟ್ಟ ಆಲೋಚನೆಗಳು ಮನದಾಳದಲ್ಲಿ ಕೂಡಿರುವಂತೆ ಅದರ ತಳದಲ್ಲಿ ಕೊಳೆ ಗಟ್ಟಿಯಾಗಿ ಕೂಡಿತ್ತು. ಎಷ್ಟೋ ಸಲ ಆ ಕೊಳೆಯನ್ನು ತೆಗೆಯಲು ಪ್ರಯತ್ನ ಪಟ್ಟರೂ ನಮ್ಮಿಂದ ಸಾಧ್ಯವಾಗಿರಲಿಲ್ಲ. ಇದಕ್ಕೆ ಮತ್ತೆ ನಾವೇನಾದರೂ ಸೀಮೆಯೆಣ್ಣೆ ತುಂಬಿಸಿದ್ದಾರೆ ಅದು ಕಲ್ಲಿದ್ದಲಿನಂತೆ ಕಪ್ಪಾಗಿ ಕಣ್ಣುಗಳನ್ನು ಊದಿಸಿಬಿಡುತ್ತಿತ್ತು. ಈ ಕಾರಣಕ್ಕಾಗಿ ಈ ಡಬ್ಬ ಉಪಯೋಗಕ್ಕೆ ಬಾರದೆ ಸ್ಟೋರ್ ರೂಮಿನಲ್ಲಿ ಬಿದ್ದಿತ್ತು.

ಡಬ್ಬವನ್ನು ನೋಡುತ್ತಲೇ ಅವಳು ಹೇಳಿದಳು:

"ಹ; ಇದು ಸಾಕು."

ನನ್ನ ಹೆಂಡತಿ ಸ್ವಲ್ಪ ಒರಟಾಗಿಯೇ "ಮೊದಲು ನನಗೆ ರಿಪೇರಿ ಕೂಲಿ ಹೇಳು" ಎಂದಳು.

"ನೋಡಿ, ಇವೇ ಎರಡು ಬಕೆಟ್ಟು...."

"ಹೌದು." ನಾನು ಈ ಸಂದರ್ಭದ ತಮಾಷೆ ಅನುಭವಿಸೋಣ ಎಂದು ಕೊಂಡೆ. ನನಗೆ ಗೊತ್ತು. ಆ ಹುಡುಗಿ ರಿಪೇರಿಗೆ ಬಹಳ ಹಣ ಕೇಳ್ತಾಳೆ, ನನ್ನ ಹೆಂಡತಿ ಒಪ್ಪದೆ ಬಕೆಟ್ಟುಗಳನ್ನು ವಾಪಸ್ಸು ತೆಗೆದುಕೊಂಡು 'ಈ ಬಕೆಟ್ಟುಗಳಿಗೆ ಅಷ್ಟು ಬೆಲೆ ಆಗೋಲ್ಲ' ಅನ್ನುತ್ತಾಳೆ, ಎಂಬ ಯೋಚನೆಯೇ ನನಗೆ ನಗು ತಂದಿತು. ಕಡೆಗೆ ಆ ಹುಡುಗಿಯೇ ಬೆಲೆಯನ್ನು ಸ್ವಲ್ಪ ಇಳಿಸ್ತಾಳೆ, ಅದಕ್ಕೂ ಒಪ್ಪದ ನನ್ನ ಹೆಂಡತಿ ಇನ್ನೂ ಚೌಕಾಸಿ ಮಾಡ್ತಾಳೆ, ಕಡೆಗೆ ಈ ವ್ಯವಹಾರ ಯಾವುದೋ ಒಂದು ಮಧ್ಯದ ಬೆಲೆಗೆ ನಿಂತುಕೊಳ್ಳುತ್ತದೆ: ನನಗೊತ್ತು, ಇವಳು ಎಲ್ಲ ಬೀದಿ ವ್ಯಾಪಾರಿಗಳ ಹತ್ತಿರವೂ ಹೀಗೆಯೇ ವರ್ತಿಸುವುದು. ಬೀದಿ ವ್ಯಾಪಾರಿಗಳು ಪಾಕಡಾಗಳು; ಅವರಿಗೆ ಹೆಂಗಸರ ಜಾಯಮಾನ ಚೆನ್ನಾಗಿ ಗೊತ್ತು.

ಆ ಹುಡುಗಿ ನನ್ನ ಹೆಂಡತಿಗೆ ಹೇಳಿದಳು: "ರಿಪೇರಿಗೆ ನ್ಯಾಯವಾಗಿ ಹತ್ತು ರೂಪಾಯಿ ಆಗುತ್ತೆ; ಸಾಕು, ನೀವು ಎಂಟು ರೂಪಾಯಿ ಕೊಡಿ."

"ಎಂಟಲ್ಲ, ಹತ್ತು ರೂಪಾಯಿ ತೆಗೋ, ಆದರೆ ರಿಪೇರಿಗೆ ನಿನ್ನ ಡಬ್ಬಾನೆ ಉಪಯೋಗಿಸು" ಎಂದು ಹೇಳುತ್ತ ನನ್ನ ಹೆಂಡತಿ ಆ ಹುಡುಗಿಯ ಹತ್ತಿರ ಇದ್ದ ಖಾಲಿ ಡಬ್ಬವನ್ನು ತೆಗೆದುಕೊಂಡಳು. ಹಾಳಾದ ಡಬ್ಬ ಮತ್ತೆ

ಸ್ಟೋರ್ ರೂಮಿಗೆ ಹೋಗುವುದೇನೋ ಎಂದು ನಾನೊಂದು ಕ್ಷಣ ದಿಗಿಲು ಗೊಂಡೆ.

ಆ ಹುಡುಗಿ ನನ್ನತ್ತಲೇ ನೋಡುತ್ತಿದ್ದಳು. ಬಹುಶಃ ಈ ವ್ಯವಹಾರವನ್ನು ನಾನು ತೀರ್ಮಾನ ಮಾಡಲಿ ಎಂಬುದು ಅವಳ ಭಾವನೆಯಾಗಿರಬೇಕು. "ಹೇಳು, ರಿಪೇರಿಗೆ ಸರಿಯಾಗಿ ಎಷ್ಟು ತಗೋತೀಯಾ" ಎಂದು ನಾನು ಮೃದುವಾಗಿ ಅವಳನ್ನು ಕೇಳಿದೆ.

"ಏಳು ರೂಪಾಯಿ ಕೊಡಿ, ಹೋಗಲಿ ಆರು."

ದೊಡ್ಡ ಬಕೆಟ್ಟಿನೊಳಗೆ ಸಣ್ಣ ಬಕೆಟ್ಟನ್ನು ಇಟ್ಟು ಅದರೊಳಗೆ ಡಬ್ಬವನ್ನು ಇಟ್ಟು ಮೇಲಕ್ಕೆದ್ದು ನಿಂತಳು.

"ಈ ಕೆಲಸ ಆರು ರೂಪಾಯಿ ಬೆಲೆ ಬಾಳೋದಲ್ಲ, ನಾಲ್ಕು ರೂಪಾಯಿ ಮಾತ್ರ ಕೊಡ್ತೀನಿ." ನನ್ನ ಹೆಂಡತಿ ತನ್ನ ನಿರ್ಧಾರದಲ್ಲಿ ಗಟ್ಟಿಯಾಗಿದ್ದಳು. ಆ ಹುಡುಗಿ ಮತ್ತೆ ಕುಳಿತುಕೊಂಡಳು. ಮನೆಯ ಒಳಗಡೆಯಿಂದ ನಮ್ಮ ಚಿಕ್ಕ ಮಗಳು ಅಳುವ ದನಿ ಮತ್ತು ಏನೋ ದಢ್ ಎಂದ ಶಬ್ದ ಕೇಳಿದೆವು. ನನ್ನ ಹೆಂಡತಿ ತಕ್ಷಣ ರೂಮಿನೊಳಗೆ ಓಡಿದಳು. ಆ ಹುಡುಗಿ ನನ್ನನ್ನೇ ತದೇಕ ದೃಷ್ಟಿಯಿಂದ ನೋಡುತ್ತ ಕಡೆಗೆ ನನ್ನನ್ನು ಕೇಳಿದಳು:

"ನೀವೆಲ್ಲಾ ದ್ಪೂರ ಕೆಲ್ಸದಲ್ಲಿದ್ದೀರಾ?"

"ಹೌದು, ಇಲ್ಲೇ ಮೇಷ್ಟ್ರಾಗಿದ್ದೀನಿ."

"ನೀವು ಧೌಲಾದವರಲ್ಲವೆ?"

"ಹೌದು ಅದ್ಹೇಗೊತ್ತು ನಿನಗೆ?" ನಾನು ಆಶ್ಚರ್ಯಗೊಂಡಿದ್ದೆ.

"ನಾವೂ ಆ ಹಳ್ಳಿಯವರೇ."

"ಅದ್ಹೇಗೆ ಸಾಧ್ಯ? ನೀವು ಅಲೆಮಾರಿಗಳು, ರಾಜಾಸ್ಥಾನದಿಂದ ಬಂದಿರೋನು. ಧೌಲಾ ಹಳ್ಳಿಯವರು ಹೇಗಾಗ್ತೀರಿ!"

"ನಾವು ರಾಜಾಸ್ಥಾನಕ್ಕೆ ಹೋಗೇ ಇಲ್ಲ. ಧೌಲಾದಲ್ಲೇ ವಾಸವಾಗಿದ್ದೀವಿ. ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ ವಾಪಸ್ಸು ಧೌಲಾಕ್ಕೇ ಬಂದು ಬಿಡ್ತೀವಿ; ಅದೇ ನಮ್ಮೂರು."

"ನಿನಗೆ ನಾನ್ಹೇಗೊತ್ತು?" ಆ ಹುಡುಗಿಯನ್ನು ಕೇಳಿದೆ.

"ನಮ್ಮ ಗಾಡಿಗಳು ಬಾವಿ ಪಕ್ಕ ನಿಂತಿರ್ತಾವೆ. ನೀವು ಆ ದಾರೀಲಿ ಹೋಗೋವನ್ನ ನಾನು ಎಷ್ಟೊಂದು ಸಲ ನೋಡಿದೀನಿ. ಪಾರಿವಾಳ ಹಾರಿಸ್ತಾನಲ್ಲ ಆ ವ್ಯಕ್ತಿಯ ಸಂಬಂಧವರಲ್ವೇ ನೀವು?"

"ಪರಮಾಶ್ಚರ್ಯ! ನಮ್ಮ ಬಗ್ಗೆ ನಿನಗೆ ಎಲ್ಲಾ ತಿಳಿದಿದೆ." ನನಗೆ ಮತ್ತೂ ಆಶ್ಚರ್ಯವಾಯ್ತು. ಆಕೆ ಸ್ವಲ್ಪ ಹೊತ್ತು ಮೌನವಾಗಿ ಕುಳಿತು ಅನಂತರ ಮೇಲೆದ್ದು ಹೇಳಿದಳು: "ಆಯ್ತು, ಐದು ರೂಪಾಯಿ ಕೊಡಿ."

ನೀನು ನಮ್ಮೂರಿನ ಮಗಳು. ಸ್ವಲ್ಪ ಟೀ ತಗೊ" ನಾನು ಹೇಳಿದೆ.

ನಮ್ಮಿಬ್ಬರ ಮಾತುಕತೆಗಳನ್ನು ಕೇಳಿಸಿಕೊಂಡ ನನ್ನ ಹೆಂಡತಿ ಅವಳ ಬಗ್ಗೆ ಮಮತೆ ತಾಳಿ "ತಿನ್ನೋಕೆ ಸ್ವಲ್ಪ ಚಪಾತೀನೂ ತಗೊಂಡು ಹೋಗು" ಎಂದಳು.

"ನಮ್ಮೂರಿನವಳೇ ಆದ್ದರಿಂದ ಒಂದಿಷ್ಟು ಜಿಲೇಬಿನೂ ಕೊಡು" ಎಂದೆ.

ಆ ಹುಡುಗಿಗೆ ತುಂಬಾ ಖುಷಿಯಾಯ್ತು. "ಅಕ್ಕಾ, ನನ್ನ ಜೊತೆ ಬನ್ನಿ, ನಮ್ಮ ಕ್ಯಾಂಪ್ ನೋಡುವಿರಂತೆ. ನಾವು ಆ ರಸ್ತೆಯ ಆಚೆ ಕಡೆ ಇದೀವಿ. ರಿಪೇರಿ ಮಾಡಿದ ಬಕೆಟ್ಟನ್ನು ನೀವು ಅಲ್ಲಿಂದ ತರಬಹುದು" ಎಂದಳು.

"ಯಾಕೆ? ಅವನ್ನ ನೀನೇ ತಗೊಂಬಾ" ಎಂದು ನಾನು ಹೇಳಿದೆ.

"ಯಾವಾಗ ಬರ್ತೀಯಾ?" ಎಂದು ನನ್ನ ಹೆಂಡತಿ ಕೇಳಿದಳು.

"ಇನ್ನರ್ಧ ಮುಕ್ಕಾಲು ಗಂಟೆ ಒಳಗೆ ಬಂದು ಬಿಡ್ತೀನಿ."

"ಆಯ್ತು, ಆಗಲೇ ತಗೊಂಬಾ. ಅಷ್ಟೊತ್ತಿಗೆ ಮಧ್ಯಾಹ್ನ ಆಗುತ್ತೆ. ನಮ್ಮ ಜೊತೇಲೇ ನೀನೂ ಟೀ ಕುಡಿ" ಎಂದು ನನ್ನ ಹೆಂಡತಿ ಹೇಳಿದಳು. ನಾನು ಯೋಚಿಸತೊಡಗಿದೆ. ಕೆಲವೊಮ್ಮೆ ನಾವು ಪ್ರಯಾಣ ಮಾಡುವಾಗ ಯಾರೊಂದಿಗೋ ಮಾತಾಡ್ತಾ ಮಾತಾಡ್ತಾ ಅವರೊಂದಿಗೆ ಆತ್ಮೀಯತೆ ಬೆಳೆಸಿಕೊಂಡು ಅವರನ್ನ ಹಚ್ಚಿಕೊಂಡುಬಿಡ್ತೀವಿ. ಆ ಹುಡುಗಿ ಬರೀ ನಮ್ಮೂರಿನ ಹೆಸರು ಹೇಳಿ ನನ್ನ ಮನಸ್ಸನ್ನು ಗೆದ್ದುಬಿಟ್ಟಳಲ್ಲಾ! ನಾನು ಹಳ್ಳಿ ಬಿಟ್ಟು ತುಂಬಾ ವರ್ಷಗಳೇ ಆದವು. ಆದರೆ ದಿನಗಳು ಕಳೆದಂತೆ ನನಗೆ ಹಳ್ಳಿಯ ಬಗ್ಗೆ ಪ್ರೀತಿ ಹೆಚ್ಚಾಗ್ತಾ ಬಂತು. ಇಲ್ಲಿ ಈ ನಗರದಲ್ಲಿ ನಾನೊಬ್ಬನೇ ಏಕಾಂಗಿ, ಒಂಟಿ ಅನ್ನಿಸಿದೆ. ಆಳವಾದ ನಿಟ್ಟುಸಿರಿನಲ್ಲಿ ಈ ಪ್ರೇಮ ಕೊನೆಗೊಳ್ಳುವ ಕಾಲ ಬರಬಹುದು. ರಾಜಾಸ್ಥಾನದ ಈ ಅಲೆಮಾರಿ ಜನ ಯಾಕೆ ಧೌಲಾವನ್ನು 'ನಮ್ಮೂರು' ಅಂದುಕೊಳ್ಳುತ್ತಾರೆ. ನನಗನಿಸುತ್ತೆ, ವ್ಯಕ್ತಿ ತನ್ನ ಜೀವಿತದ ಬಹುಪಾಲು ಸಮಯವನ್ನು ಯಾವ ಊರಿನಲ್ಲಿ ಕಳೆಯುತ್ತಾನೋ ಅದನ್ನು ತನ್ನೂರು ಅಂದುಕೊಳ್ಳುತ್ತಾನೆ. ಯಾವ ಊರೂ ಯಾರೊಬ್ಬನ ಸ್ವಂತ ಆಸ್ತಿ ಅಲ್ಲ. ಈ ಭೂಮಿ ಭಗವಂತನಿಗೆ ಸೇರಿದ್ದು. ಮನುಷ್ಯ ಅದರ ಮೇಲೆ

ಜೀವಿಸ್ತಾ ಇದಾನೆ, ಅಷ್ಟೆ. ಒಬ್ಬ ವ್ಯಕ್ತಿ ಈ ಭೂಮಿಯ ಮೇಲೆ ಎಲ್ಲಿ ಬೇಕಾದರೂ ಬದುಕಬಹುದು, ಆಗ ಅದೇ ಅವನ ಊರಾಗುತ್ತದೆ.

ನನ್ನ ಹೆಂಡತಿ ಹಿಟ್ಟು ಮಾಡಿಸಲು ಗೋಧಿಯನ್ನು ಜರಡಿ ಮಾಡುತ್ತಿದ್ದಳು. ನಾನು ಮಧ್ಯಾಹ್ನದ ವಾರ್ತೆಗಾಗಿ ರೇಡಿಯೋ ಆಲಿಸುತ್ತಿದ್ದೆ. ಸ್ವಲ್ಪ ಹೊತ್ತಿನ ಅನಂತರ ತಳಕಟ್ಟಿದ ಬಕೆಟ್ಟುಗಳೊಂದಿಗೆ ಆ ಹುಡುಗಿ ಬಂದಳು. ಅವಳ ಮುಖದಲ್ಲಿ ನಿರ್ಮಲವಾದ ನಗೆಯಿತ್ತು. ಕಣ್ಣುಗಳು ಮಿನುಗುತ್ತಿದ್ದುವು. ಅವಳ ಕಪ್ಪು ಮೈ ಬಣ್ಣದ ಹಿನ್ನೆಲೆಯಲ್ಲಿ ಹಲ್ಲುಗಳು ಬೆಳ್ಳಗೆ ಮುತ್ತುಗಳಂತೆ ಹೊಳೆಯುತ್ತಿದ್ದವು. "ನಿನ್ನ ಹೆಸರೇನು ?" ಎಂದು ನಾನು ಅವಳನ್ನು ಕೇಳಿದೆ.

"ನನ್ನ ಹೆಸರು ತೆಗೊಂಡು ನೀವೇನು ಮಾಡ್ತೀರಿ?" ಎಂದು ನಕ್ಕಳು. ನಕ್ಕಾಗ ಮೇಲಿನ ಅವಳ ಹಲ್ಲುಗಳು ಚಿನ್ನದ ಮುಲಾಮಿನಿಂದ ಲೇಪನ ಗೊಂಡಿರುವುದು ಕಾಣಿಸಿತು.

"ನೀನು ನಮ್ಮೂರ ಮಗಳು, ನಿನ್ನ ಹೆಸರನ್ನು ತಿಳ್ಕೋಬಾರ್ದ ?" ಎಂದು ಪ್ರೀತಿಯಿಂದ ಕೇಳಿದೆ.

ಬಕೆಟ್ಟುಗಳನ್ನು ನೆಲದ ಮೇಲಿಡುತ್ತ, ತನ್ನ ಲಂಗವನ್ನು ಮುದುರಿ ಹಿಡಿದುಕೊಂಡು ನೆಲದ ಮೇಲೆ ಕೂತು,

"ನನ್ನ ಹೆಸರು ಬಿರನ್" ಎಂದಳು.

"ಓಹ್, ಎಂತಹ ಸುಂದರ ಹೆಸರು !"

ಆಕೆ ಮುಗುಳ್ನಕ್ಕಳು. ಅಲೆಮಾರಿ ಹುಡಗಿಯ ಹೆಸರು ಸುಂದರವಾಗಿರಲಿ ಇಲ್ಲದಿರಲಿ ಅದರಿಂದ ಏನು ತಾನೇ ವ್ಯತ್ಯಾಸ.

ನನ್ನ ಹೆಂಡತಿ ಸ್ಟೌವಿನ ಮೇಲೆ ಟೀ ಪಾತ್ರೆಯನ್ನಿಟ್ಟಳು. ಕೆಲದಿನಗಳ ಹಿಂದೆ ಮನೆಯಲ್ಲಿ ಹಬ್ಬ ಮಾಡಿದ್ದಾಗ ಮಾಡಿದ್ದ ಸ್ವಲ್ಪ ಜಿಲೇಬಿಗಳು ಉಳಿದಿದ್ದವು. ನನ್ನ ಹೆಂಡತಿ ಅವುಗಳಲ್ಲಿ ಐದೋ, ಏಳೋ ಜಿಲೇಬಿಗಳನ್ನು ಒಂದು ಪೊಟ್ಟಣ ಕಟ್ಟಿ ತಂದು ಬಿರನಳ ಕೈಗಿತ್ತಳು. ಆ ಹುಡುಗಿ ಪೊಟ್ಟಣ ಬಿಚ್ಚಿ ಅದರಲ್ಲಿದ್ದ ಜಿಲೇಬಿಗಳ ಮೇಲೆ ಒಂದು ಕುತೂಹಲದ ದೃಷ್ಟಿ ಬೀರಿ ಮತ್ತೆ ಅದನ್ನು ಕಟ್ಟಿ ತನ್ನ ತುಪ್ಪಟದ ಸೆರಗಿಗೆ ಕಟ್ಟಿಕೊಂಡಳು. ಆಕೆಗೆ ಖುಷಿ ಯಾಗಿತ್ತು ; ಮೌನವಾಗಿ ಕುಳಿತ್ತಿದ್ದಳು. ಅವಳು ಕುಳಿತಿರುವ ರೀತಿಯನ್ನು ನೋಡಿದರೆ ಏನನ್ನೋ ಯೋಚಿಸುತ್ತಿರುವಂತಿತ್ತು. ನನ್ನ ಹೆಂಡತಿ ಎರಡು ಚಪಾತಿಗಳ ಮೇಲೆ ಮಾವಿನಕಾಯಿಯ ಉಪ್ಪಿನಕಾಯಿ ಹಾಕಿ, ಒಂದು ಲೋಟದ ತುಂಬ ಟೀ ತಂದು ಅವಳಿಗೆ ಕೊಟ್ಟಳು. ಬಿರನ್ ಕುಳಿತುಕೊಂಡು

ಯಾವ ಸಂಕೋಚವೂ ಇಲ್ಲದೆ ಚಪಾತಿಯ ಜೊತೆಗೆ ಟೀ ಕುಡಿಯುತ್ತ ತಿಂದು ಮುಗಿಸಿದಳು.

ಅವಳು ಮೇಲೆದ್ದಾಗ ನನ್ನ ಹೆಂಡತಿ ಅವಳ ಕೈಗೆ ಐದು ರೂಪಾಯಿ ಕೊಡಲು ಹೋದಾಗ ಬಿರನ್ ಹಣವನ್ನು ನಿರಾಗಿರಿಸಿದಳು. "ನೀವು ನಮ್ಮೂರಿನವರಾದುದರಿಂದ ನಿಮ್ಮಿಂದ ನಾನು ಹಣ ತೆಗೆದುಕೊಳ್ಳುವುದಿಲ್ಲ" ಎಂದಳು.

"ಅವಕ್ಕೂ ಇದಕ್ಕೂ ಏನು ಸಂಬಂಧ? ನೀನು ಕೆಲಸ ಮಾಡಿದ್ದೀಯಾ, ಅದಕ್ಕೆ ಪ್ರತಿಫಲ ತೆಗೆದುಕೊಳ್ಳಲೇಬೇಕು, ಹಣ ತಗೋ" ಎಂದು ಹೇಳಿದೆ.

"ಇಲ್ಲ, ನಾನು ದುಡ್ಡು ತಗೊಳಲ್ಲ, ಇನ್ನೇನಾದರೂ ಮಾಡೋ ಕೆಲ್ಸ ಇದ್ರೆ ಹೇಳಿ" ಬಿರನಳ ಮಾತಿನಲ್ಲಿ ದೃಢತೆಯಿತ್ತು.

ನಾನು ಇಕ್ಕಟ್ಟಿನಲ್ಲಿದ್ದೆ. ಎಷ್ಟು ಭಾವುಕಳು ಈ ಹುಡುಗಿ. ಇವಳೇನಾದರೂ ಹಣ ತೆಗೆದುಕೊಳ್ಳದಿದ್ದರೆ ನಾವು ಇವಳ ಋಣದಲ್ಲಿ ಬೀಳ್ತೀವಿ. ಕೂಲಿಯನ್ನು ಇವಳು ತೆಗೆದುಕೊಳ್ಳಲೇಬೇಕು. ನನ್ನ ಹೆಂಡತಿಯಿಂದ ಐದು ರೂಪಾಯಿಯ ನೋಟನ್ನು ತೆಗೆದುಕೊಂಡು ಆ ಹುಡುಗಿಯ ಹತ್ತಿರ ಹೋಗಿ "ಬಿರನ್, ಇದನ್ನ ಬೇಡ ಅನ್ನಬೇಡ, ಇದು ನಿನ್ನ ಶ್ರಮದ ಹಣ" ಎಂದೆ.

ಅವಳು ನನ್ನ ಮಾತುಗಳಿಗೆ ಕಿವಿಗೊಡದೆ ಹೊರಗೆ ಹೊರಡತೊಡಗಿದಳು.

"ಸರಿ, ನನ್ನ ಮಾತು ಕೇಳು" ಎಂದು ನಾನು ಜೋರಾಗಿ ಕೂಗಿ ಅವಳನ್ನು ನಿಲ್ಲಿಸಿದೆ. ಅವಳು ಕತ್ತು ತಿರುಗಿಸಿ ನಿಂತಳು.

"ನಿನಗೆ ಬೇಡ ಅನಿಸಿದ್ರೆ, ಈ ಐದು ರೂಪಾಯಿ ತಗೋಬೇಡ. ಆದರೆ ಧೌಲಾಕ್ಕೆ ಸೇರಿದ ನೀನು ನಮ್ಮೂರ ಮಗಳು. ನಾವು ಎಂದಿಗೂ ನಮ್ಮ ಮಗಳನ್ನು ಮನೆಯಿಂದ ಬರಿಗೈಯಲ್ಲಿ ಕಳಿಸೋದಿಲ್ಲ. ನೀನು ನಮ್ಮೂರಿನ ಮಗಳಾಗಿ ಈ ಐದು ರೂಪಾಯಿ ತಗೋ. ಈಗ ಸರಿ ತಾನೆ?"

ಆಕೆ ಐದು ರೂಪಾಯಿ ನೋಟನ್ನು ತೆಗೆದುಕೊಂಡಳು.

ಬಿ. ಜಿ. ಕನಕೇಶಮೂರ್ತಿ

ಚಂದ್ರನಲ್ಲಿ ಕಳೆಯಿದ್ದರೂ ಆತ ತನ್ನ ಶೀತಲ ಪ್ರಕಾಶವನ್ನು ಮಾತ್ರ ಸುತ್ತಲೂ ಬೀರುತ್ತಾನೆ. ಕಳೆಯನ್ನು ತನ್ನಲ್ಲಿಯೇ ಇರಿಸಿಕೊಳ್ಳುತ್ತಾನೆ.

—ರವೀಂದ್ರನಾಥ

ತಾತನ ಕೊಡೆ

[ಆ ಆಶ್ರಯದಾತನ ದಯಾಮಯ ಮನೋಭಾವ ನಮ್ಮೆಲ್ಲರ ಜೀವನಕ್ಕೆ ಸಂರಕ್ಷಣೆಯನ್ನೊದಗಿಸಿತ್ತು.]

ನಾನೊಮ್ಮೆ ತಾತನನ್ನು (ತಂದೆಯ ತಂದೆ) ಆಸ್ಪತ್ರೆಗೆ ಕರೆದೊಯ್ದೆ. ಅಲ್ಲಿ ಸತ್ತ ರೋಗಿಯನ್ನು ಶವಾಗಾರಕ್ಕೆ ಕೈಗಾಡಿಯಲ್ಲಿ ಸಾಗಿಸುತ್ತಿದ್ದುದನ್ನು ನೋಡಿದೆ. ಥಾಯ್ಲೆಂಡಿನ ಜನ ಆ ಕಟ್ಟಡವನ್ನು 'ಹೃದಯ ಸ್ತಂಭನಾಗಾರ' ಎಂದು ಕರೆಯುತ್ತಿದ್ದರು. ನಾನು ಯೋಚಿಸಿದೆ—ಎಂತಹ ಭಯಂಕರ ಹೆಸರು!

ಮೊದಲ ನೋಟಕ್ಕೆ ಆ ಶವಾಗಾರ ಸಾಮಾನ್ಯ ಕಟ್ಟಡದಂತೆ ತೋರಿತು. ಆದರೆ ವಸ್ತುಸ್ಥಿತಿ ಅರಿತಾಗ, ಕಡುಬೂದಿ ಬಣ್ಣ ಬಳಿದುಕೊಂಡ ದೈತ್ಯಾಕಾರದ ಆ ಕಟ್ಟಡ ಪ್ರಳಯಾಂತಕ ದೃಶ್ಯವನ್ನೊದಗಿಸಿತು. ಅದರ ಇಕ್ಕೆಡೆಯ ಎರಡು ದೊಡ್ಡ ಕಿಟಕಿಗಳು, ಆ ದೈತ್ಯನ ಕೆರಳಿದ ಕಣ್ಣುಗಳಂತೆ ತೋರಿಬಂದುವು. ಮಧ್ಯದ ಹೆಬ್ಬಾಗಿಲು ಯಮರಾಜನ ತೆರೆದ ಬಾಯಂತೆ ಭಾಸವಾಯಿತು.

ಆಸ್ಪತ್ರೆಯ ಕೈಗಾಡಿಯಲ್ಲಿ ಸಾಗಿಸುತ್ತಿದ್ದ ಆ ಶವ, ಹೊಳೆಯುವ ಚೈನಾ ಸಿಲ್ಕ್ ಶಾಲಿನಿಂದ ಆಪಾದಮಸ್ತಕ ಆವೃತವಾಗಿತ್ತು. ಕೈಗಾಡಿಯೊಂದಿಗೆ ನಡೆದು ಹೋಗುತ್ತಿದ್ದ ಮಹಿಳೆ ತನ್ನ ಕೈಯಲ್ಲಿ ತೆರೆದ ಕೊಡೆಯನ್ನು ಹಿಡಿದಿದ್ದಳು. ಕೈಗಾದಿಯ ಹಾಸಿಗೆಯ ಮೇಲಿನ ಹೆಣಕ್ಕೆ ಆ ಮಹಿಳೆ, ಕೊಡೆಯ ರಕ್ಷಣೆ ಕೊಡುತ್ತಿದ್ದಳು. ತಾನು ಕಡುಬಿಸಲಲ್ಲಿ ನಡೆಯುತ್ತ, ಸತ್ತ ಮನುಷ್ಯನಿಗೆ ನೆರಳನ್ನು ಒದಗಿಸುತ್ತಿದ್ದಳು. "ಸತ್ತವನಿಗೆ ಬಿಸಿಲೇನು? ಮಳೆ ಏನು? ಆ ದೃಶ್ಯ ನನಗೊಂದು ತರದ ತಮಾಷೆಯಾಗಿ ತೋರಿಬಂತು.

ಇನ್ನು ಕೆಲವೇ ದಿನಗಳಲ್ಲಿ ತಾತ, ಆರೋಗ್ಯ ಸುಧಾರಿಸಿ ಮನೆಗೆ ಹೋಗಲಿದ್ದಾರೆ—ಎಂದು ತಿಳಿದು ತುಂಬ ಸಂತೋಷವಾಯಿತು. ವೈದ್ಯರು ಹಾಗೆ ಹೇಳಿದ್ದನ್ನು ನಾನೇ ಕೇಳಿದ್ದೆ. ನಮ್ಮ ತಾತ ಯಾವಾಗಲೂ ಸಂತೃಪ್ತರೂ, ಆರೋಗ್ಯವಂತರೂ ಆಗಿದ್ದು ಗಟ್ಟಿಮುಟ್ಟಾಗಿದ್ದರು. ಒಳ್ಳೆಯ ವಿದ್ಯಾವಂತರೂ ಶ್ರೀಮಂತರೂ ಆಗಿದ್ದು, ಎಲ್ಲರ ಗೌರವಾದರಗಳಿಗೆ ಪಾತ್ರರಾದ ಮಹಾಪುರುಷ

೧೯೯೪ನೇ ಏಪ್ರಿಲ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ "ಗ್ರ್ಯಾಂಡ್ ಫಾದರ್ಸ್ ಅಂಬ್ರೆಲ್ಲಾ" ಎಂಬ ಸತ್ಯ ಕಥೆಯ ಅನುವಾದ. ಈ ಸಣ್ಣ ಕಥೆ ೧೯೯೩ನೇ ಯುನೆಸ್ಕೋ ಪೆನ್ ಸಣ್ಣ ಕಥಾ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಗಳಿಸಿದೆ.

ರಾಗಿದ್ದರು. ಬೌದ್ಧ ಧರ್ಮಾನುಯಾಯಿಯಾಗಿದ್ದ ಅವರು ಷಟ್ಕರ್ಮಗಳನ್ನು ಪರಿಪಾಲಿಸುತ್ತಿದ್ದ ಧರ್ಮಾತ್ಮರೆಂದು ಪ್ರಸಿದ್ಧರಾಗಿದ್ದರು. ಒಳ್ಳೆಯ ಮಗ, ಒಳ್ಳೆಯ ವಿದ್ಯಾರ್ಥಿ, ಒಳ್ಳೆಯ ಯಜಮಾನ, ಒಳ್ಳೆಯ ಗೆಳೆಯ, ಒಳ್ಳೆಯ ಪತಿ, ಒಳ್ಳೆಯ ಪಿತ—ಆಗಿದ್ದು ಎಲ್ಲರ ಪ್ರೀತಿಪಾತ್ರರಾಗಿದ್ದರು. ಎಲ್ಲಕ್ಕಿಂತಲೂ ಹೆಚ್ಚಾಗಿ, ಎಲ್ಲ ತರದ ಒಳ್ಳೆಯ ಗುಣಗಳುಳ್ಳ ಈ ತಾತ, ಮಹಾಪುರುಷರಾಗಿಯೂ ಮೆರೆದರು.

ದೊಡ್ಡ ಮನೆ : ನಾವು ನಾಲ್ವರು ಮೊಮ್ಮಕ್ಕಳು ಆ ಮನೆಯ ಆಶ್ರಯದಲ್ಲಿದ್ದೆವು. ಬಹುಮಂದಿ ಮದುವೆಯಾಗದ ಯುವಜನರೂ ಇದ್ದರು. ಕೆಲಸಂಬಂಧಿಕರೂ, ಐದು ಪೀಳಿಗೆಯಿಂದ ಬೆಳೆದುಬಂದ ಮನೆಗೆಲಸಗಾರರೂ ಇದ್ದರು. ನನ್ನ ಅಪ್ಪನ ಕಾಲದಿಂದ—ವಯಸ್ಸಾದ ಕೆಲಸಗಾರರ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು. ಎಳೆಯ ಮಕ್ಕಳನ್ನು ಖರ್ಚು ಕೊಟ್ಟು ಶಾಲೆಗೆ ಕಳಿಸಿ ಓದಿಸಲಾಗುತ್ತಿತ್ತು.

ಒಮ್ಮೆ ಅಜ್ಜಿ ಹೇಳಿದ್ದರು—'ತಾತನಂತಹ ದೊಡ್ಡ ಮನುಷ್ಯರನ್ನು 'ಅಶ್ವತ್ಥ ವೃಕ್ಷ' ಎನ್ನುತ್ತಾರೆ. ಅಜ್ಜಿ ಯಾವ ಅರ್ಥದಲ್ಲಿ ಹೇಳಿದ್ದೆಂಬುದು ನನಗೆ ಗೊತ್ತಾಯಿತು. ನಾನು ನೋಡಿದ ದೇವಾಲಯಗಳಲ್ಲೆಲ್ಲ ದೊಡ್ಡ ಅಶ್ವತ್ಥ ವೃಕ್ಷವನ್ನು ಕಂಡಿದ್ದೆ. ಅವು ದೈತ್ಯಾಕಾರದ ಕೊಡೆಗಳಂತೆ ಕಾಣುತ್ತಿದ್ದುವು. ದಶದಿಕ್ಕುಗಳತ್ತ ಚಾಚಿದ್ದ ಉದ್ದುದ್ದ ಶಾಖೆಗಳು ಕೊಡೆಯ ಕಡ್ಡಿಗಳಂತೆ ತೋರುತ್ತಿದ್ದುವು. ಸುತ್ತ ದಟ್ಟವಾಗಿ ಹಬ್ಬಿದ ಹಸಿರೆಲೆಗಳು ಕೊಡೆಯ ದಪ್ಪ ಅರಿವೆಯಂತೆ ಕಾಣುತ್ತಿದ್ದುವು. ಆ ಅಶ್ವತ್ಥ ವೃಕ್ಷದಡಿಯಲ್ಲಿ ನಿಂತುಕೊಂಡರೆ, ಕಡುಬಿಸಿಲಾಗಲಿ ; ಬಿರುಮಳೆಯಾಗಲಿ ರಕ್ಷಣೆ ಒದಗುತ್ತಿತ್ತು.

[ಕೊಡೆಗೆ ಆತಪತ್ರ ಎಂದೇ ಹೆಸರು—ಆತಪಾತ್ ತ್ರಾಯತೇ ಇತಿ ಆತಪತ್ರಃ]

ಹತ್ತು ದಿನಗಳ ಅನಂತರ ತಾತ ಸತ್ತುಹೋದರು. ಅಜ್ಜಿ ಬಿಕ್ಕಿ ಬಿಕ್ಕಿ ಅಳುತ್ತ ತಾತನನ್ನು ಚೈನಾ ಸಿಲ್ಕ್ ಶಾಲಿನಿಂದ ಆಪಾದಮಸ್ತಕ ಹೊದಿಸಿದಳು. ತಾತನ ಮುಖವನ್ನು ಅಜ್ಜಿ ಮುಚ್ಚದಿರಲಿ—ಎಂದು ಬಯಸಿದ್ದೆ.

ತಾತನನ್ನು 'ಹೃದಯ ಸ್ತಂಭನಾಗಾರ'ಕ್ಕೆ ಒಯ್ಯುವಾಗ ನಾವೆಲ್ಲ ಅಳುತ್ತ ಅವನ ಸುತ್ತುಗಟ್ಟಿದೆವು. ಅಂತಿಮ ಕಾರ್ಯಕ್ಕಾಗಿ ಊರದೇವಾಲಯಕ್ಕೆ ಒಯ್ಯುವವರೆಗೆ ಶವ, ಆ ಕಟ್ಟಡದಲ್ಲಿಯೇ ಇರಬೇಕಾಗುತ್ತಿತ್ತು. ಹಾಗೆ, ತಾತನನ್ನು ಶವಾಗಾರಕ್ಕೆ ಒಯ್ಯುವಾಗ ನಾನು ಅವನ ಕೊಡೆಯನ್ನು ಅರಳಿಸಿ ತಾತನಿಗೆ ಉರಿಬಿಸಿಲು ಕಾಡದಂತೆ ನೋಡಿಕೊಂಡಿದ್ದೆ. ಅಂದು ಉರಿಬಿಸಿಲು

ಸುಡುತ್ತಿತ್ತು. ನನ್ನ ಮೈ ಮತ್ತು ತಲೆ ಬಿಸಿಯಾಗಿ ಬೆವರು ಸುರಿಯುತ್ತಿತ್ತು. ಮಳೆಯ ಸುದ್ದಿಯೇ ಇದ್ದಿಲ್ಲ.

ಸತ್ತವರನ್ನು–ಮಳೆಯಾಗಲಿ, ಬಿಸಿಲಾಗಲಿ ಯಾವುದೂ ಕಾಡುವುದಿಲ್ಲ— ಎಂದು ನನಗೆ ಚೆನ್ನಾಗಿ ಗೊತ್ತಿತ್ತು.

ತಾತನ ಅಧ್ಯಯನ ಪೀಠವಿರುವ ವಿಶಾಲ ಕೋಣೆಯಲ್ಲಿ ನಾನು ದುಃಖದಿಂದ ಬಂದು ಕುಳಿತೆ. ಆಗ, ತಾತನ ನಡುವಯಸ್ಸಿನ ಕಾರ್ಯದರ್ಶಿ, ನಾಡಿನ ಮಹಾರಾಜರಿಗೆ, ತಾತನ ಪರವಾಗಿ, ಸಾಯಲು ಅನುಮತಿ ಕೊಡಬೇಕೆಂದು ಪತ್ರ ಬರೆಯುತ್ತಿದ್ದಳು. ಆ ಕೆಲಸ ಅಸಂಗತವೆಂದು ತೋರಿದರೂ, ಅದು ಅಲ್ಲಿಯ ಸಂಪ್ರದಾಯವೆಂದು ಆಕೆ ನನಗೆ ವಿವರಿಸಿ ಹೇಳಿದಳು. ನಾಡಿನ ದೊಡ್ಡ ಮನುಷ್ಯರು, ದೊಡ್ಡ ಸರ್ಕಾರೀ ಅಧಿಕಾರಿಗಳು ರಾಜರ ಅನುಮತಿ ಪಡೆದು ಸಾಯುತ್ತಾರೆ. ಆಕೆ, ಒಂದು ಪುಟದ ಆ ಪತ್ರಕ್ಕಾಗಿ ತುಂಬ ಸಮಯ ತೆಗೆದು ಕೊಂಡು ಹೋರಾಡುತ್ತಿದ್ದಳು. ಅಂತು, ಹೇಗೋ ಮುಕ್ತಾಯಗೊಳಿಸಿ ಮಹಾರಾಜರಿಗೆ ಅದನ್ನು ತಲುಪಿಸಿದಳು.

ಮಹಾರಾಜರ ಮರಣಾನುಮತಿ—ರಾಜದೂತರು ಹೊತ್ತುಕೊಂಡು ಬಂದ ಪಗೋಡಾಕೃತಿಯ ಶವಪೆಟ್ಟಿಗೆಯೊಂದಿಗೆ ಬಂತು. ಆ ಪೆಟ್ಟಿಗೆ ಥಾಯ್ಲೆಂಡಿನ ಸಾಮಾನ್ಯಜನ ಪದ್ಮಾಸನದಲ್ಲಿ ಕುಳಿತುಕೊಂಡು, ಒಂದರ ಮೇಲೊಂದು ಕೈಗಳನ್ನಿಟ್ಟು ಧ್ಯಾನಮುದ್ರೆಯಲ್ಲಿರಲಾಗುವಷ್ಟು ಗಾತ್ರದ್ದಾಗಿತ್ತು. ಅದರ ಮೇಲ್ಭಾಗದ ಹಲಗೆಯನ್ನು ತೆರೆದು, ಶವವನ್ನು ಪದ್ಮಾಸನ ಭಂಗಿಯಲ್ಲಿಡಲು ಬಲವಾಗಿ ಒತ್ತಿ ತುರುಕಿಸಬೇಕಾಗುತ್ತಿತ್ತು.

ಮಹಾರಾಜರು ಕಳಿಸುವ ಆ ಪವಿತ್ರ ಕೋಶವನ್ನು, ಮಹಾಪುರುಷರಿಗೆ ಮಾತ್ರ ದಯಪಾಲಿಸಲಾಗುತ್ತಿತ್ತು. ಆ ಕೃಪೆ–ದೊಡ್ಡ ಮನುಷ್ಯರಿಗೆ ದೊರಕುವ ಪದಕ ಅಥವಾ ಬಿರುದಿನಂತೆ ಗೌರವ ಸೂಚಕವಾಗಿತ್ತು. ಮಹಾತ್ಮರು ದೇಶ ಕ್ಕಾಗಿ ಸಲ್ಲಿಸಿದ ಅಪಾರ ಸೇವೆಯ ಪ್ರತೀಕವಾಗಿ ಈ ಪವಿತ್ರ ಕೋಶ ದೊರಕು ತ್ತಿತ್ತು. ಮೃತಾತ್ಮರ ದೇಶಸೇವೆಗನುಗುಣವಾಗಿ ಆ ಕೋಶ ಅಲಂಕೃತ ವಾಗಿರುತ್ತಿತ್ತು.

ವಿನೋದಶೀಲ ತಾತ—ಶವವನ್ನು ಇಂತಹ ಕೋಶದೊಳ ಹಾಕುವ ಸಂಪ್ರದಾಯ ನನಗಂತೂ ಬೇಡ ಎನ್ನುತ್ತಿದ್ದರು. ಅದರಂತೆ, ಅವರು ತನ್ನ ಆಜ್ಞಾರೂಪದ 'ವಿಲ್'ನಲ್ಲಿ (ಉಯಿಲು) ತನ್ನ ಶವವನ್ನು ಪೆಟ್ಟಿಗೆಯಲ್ಲಿ ತುರುಕಿಸುವುದು ಬೇಡ—ಎಂದು ಬರೆಸಿದ್ದರು. ನಮ್ಮೊಡನೆ ತಾತ ಹೇಳುತ್ತಿ

ದ್ದರು: 'ಜೀವನ ಪರ್ಯಂತ ನಮ್ಮ ಮಹಾರಾಜರಿಗೆ ಮತ್ತು ದೇಶಕ್ಕೆ ನಿಷ್ಠೆಯಿಂದ ಶಕ್ತಿಮೀರಿ ಸೇವೆ ಸಲ್ಲಿಸಿದ್ದೆ. ತಲೆ ಎತ್ತಿ ನಿಂತು, ಕೂತು, ಬಾಗಿ, ಕೆಲಸ ಮಾಡಿದ್ದೆ. ನಾನು ಸಾಯುವಾಗ ಅಂಗಾತ ಮಲಗಿಕೊಂಡು ನೆಮ್ಮದಿಯಿಂದ ಕೊನೆಯುಸಿರು ಎಳೆಯಬಯಸುತ್ತೇನೆ.'

ತಾತನ ಅಪೇಕ್ಷೆಯಂತೆ ಮಾಮೂಲೀ ಉದ್ದದ ಪೆಟ್ಟಿಗೆಯಲ್ಲಿ ಆತನ ಶವವನ್ನು ಅಂಗಾತ ಮಲಗಿಸಿ ಆ ಪೆಟ್ಟಿಗೆಯನ್ನು ಸರ್ಕಾರೀ ಕೋಶಕ್ಕೆ ಹಿಂದಿನಿಂದ ತಗುಲಿಸಲಾಯಿತು. ಅನಂತರ ಜೋಡುಪೆಟ್ಟಿಗೆಗಳನ್ನು ದೇವಾಲಯಕ್ಕೆ ಒಯ್ದು ಶಾಸ್ತ್ರೋಕ್ತ ಉತ್ತರಕ್ರಿಯೆಗಳನ್ನಾರಂಭಿಸಲಾಯಿತು.

ದಹನಕ್ಕೆ ಮೊದಲು ೧೦೦ ದಿನಗಳ ಶಾಸ್ತ್ರೀಯ ವಿಧಿವಿಧಾನಗಳನ್ನು ನಡೆಸಬೇಕಾಗಿತ್ತು. ಅಲ್ಲಿ ತಾತನ ಸಂಬಂಧಿಕರು, ಗೆಳೆಯರು, ಕೆಲಸಗಾರರು ನಿತ್ಯ ಓಡಾಡುತ್ತಿರುವುದನ್ನು ನಾನು ನೋಡಿದ್ದೆ. ಅವರೆಲ್ಲ ಸೇರಿ ಹೂವಮಾಲೆಗಳ ತಯಾರಿಕೆ, ಸನ್ಯಾಸಿಗಳಿಗೆ ಮತ್ತು ಅತಿಥಿ ಅಭ್ಯಾಗತರಿಗೆ ಊಟೋಪಚಾರಗಳ ವ್ಯವಸ್ಥೆ ಮುಂತಾದ ಕೆಲಸಗಳಲ್ಲಿ ಮಗ್ನರಾಗಿರುತ್ತಿದ್ದರು. ಮೃತಾತ್ಮರ ಗೌರವಾರ್ಥ ಪವಿತ್ರ ಪುಸ್ತಕಗಳನ್ನು ಅಚ್ಚು ಹಾಕಿ, ಹೂತುಂಬಿದ ಸುಗಂಧಮಯ ಕರವಸ್ತ್ರವನ್ನು ಕರಿರಿಬ್ಬನಿಂದ ಸುತ್ತಿ, ಮಹಾತ್ಮರ ಸ್ಮರಣಾರ್ಥ, ಆ ಪುಸ್ತಕ ಮತ್ತು ಪುಷ್ಪಗುಚ್ಛವನ್ನು ಅತಿಥಿ ಅಭ್ಯಾಗತರಿಗೆ ನೀಡುವುದು ಸಂಪ್ರದಾಯವಾಗಿತ್ತು.

ಆದರೆ ಅಂದು ಆಕಾಶದಲ್ಲಿ ಕೆಲಬಿಳಿಮೋಡಗಳು ಸುತ್ತಾಡತೊಡಗಿದುವು. ಸೂರ್ಯದೇವ ನಿರ್ಲಿಪ್ತನಾಗಿ ಹೊಳೆಯುತ್ತಿದ್ದ. ಅಷ್ಟರಲ್ಲಿ ದೂರದಿಂದ ಮಳೆಯ ಸೂಚಕವಾದ ಗುಡುಗಿನ ಸದ್ದು ಕೇಳಿಬರತೊಡಗಿತು.

ಮಹಾರಾಜರ ಸಹೋದರಿ ಶವದಹನಕ್ಕಾಗಿ 'ರಾಜಾಗ್ನಿ'ಯನ್ನು ಹಿಡಿದುಕೊಂಡು ಹೊರಡುವಾಗ ಮಳೆಹನಿ ಉದುರತೊಡಗಿತು. ಸಮವಸ್ತ್ರ ಧರಿಸಿದ ಅಂಗರಕ್ಷಕ ಕೂಡಲೇ ವಿಶಾಲವಾದ ಬೃಹಚ್ಛತ್ರವನ್ನು ಬಿಡಿಸಿ ರಾಜಕುಮಾರಿಗೆ ಮಳೆನೀರು ಸೋಂಕದಂತೆ ಹಿಡಿದುಕೊಂಡು ಹೊರಟ. ಆ ಬೃಹಚ್ಛತ್ರ ಅಶ್ವತ್ಥ ವೃಕ್ಷವನ್ನು ಜ್ಞಾಪಿಸುವಂತಿತ್ತು.

ಅನಂತರ ಪ್ರತಿಯೊಬ್ಬರೂ ಶ್ರೀಗಂಧದ ತೆಳು ಚಕ್ಕೆಯಿಂದ ರಚಿಸಿದ ಹೂಗುಚ್ಛವನ್ನು ಒಂದು ಕೈಯಿಂದಲೂ, ಮೈಮೇಲೆ ಮಳೆ ಬೀಳದಂತೆ ಬಿಡಿಸಿದ ಕೊಡೆಯನ್ನು ಇನ್ನೊಂದು ಕೈಯಿಂದಲೂ ಹಿಡಿದುಕೊಂಡು ಚಿತಾಗ್ನಿಯತ್ತ ನಡೆದು ಹೋಗತೊಡಗಿದರು. ಮೃತಾತ್ಮನಿಗೆ ಅರ್ಪಿಸುವ ತನ್ನ ಕೊನೆಯ

ಗೌರವದ ಪ್ರತೀಕವಾಗಿ ಆ ಪುಷ್ಪಗುಚ್ಛವನ್ನು ಚಿತಾಗ್ನಿಗಾಹುತಿ ಕೊಡುತ್ತಿದ್ದರು.

ನೂರಾರು ಜನ ಹಾಗೆಯೇ ಮಾಡುತ್ತಿದ್ದರು. ರಾಜದೇವಾಲಯದ ವಿಶಾಲ ಅಂಗಣ ಮಹಾಜನರಿಂದ ತುಂಬಿಬಂದಿತ್ತು. ಇಂತಹ ಕೊಡೆಗಳ ಸಾಗರವನ್ನು ನಾನೆಂದೂ ನೋಡಿದ್ದಿಲ್ಲ. ಉದ್ದುದ್ದದ ವಿವಿಧ ರೀತಿಯ ಕೊಡೆಗಳ ಸಾಲುಗಳು ಚಿತೆಯತ್ತ ಸಾಗುತ್ತಿದ್ದ ದೃಶ್ಯ ಅಸದೃಶವಾಗಿತ್ತು. ತಾತನ ತೋಟದಲ್ಲಿ ಕಡಿದು ಹಾಕಿದ ಹಲಸಿನ ದಿಮ್ಮಿಯ ಮೇಲೆ ಮಳೆಗಾಲದಲ್ಲಿ ಮೂಡಿಬಂದ ಅಣಬೆಗಳ ಹಿಂಡಿನಂತೆ, ಒಮ್ಮೆ ತೋರಿತು.

ಅಷ್ಟರಲ್ಲಿ ಚಿತೆಯತ್ತ ಹೋಗಿ ನನ್ನ ಪಾಲಿನ ಪುಷ್ಪಗುಚ್ಛವನ್ನು ಚಿತಾಗ್ನಿಗೆ ಅರ್ಪಿಸಲು ವೇಳೆ ಬಂತು.

ತಾತನ ಆ ಹಳೇ ಕೊಡೆಯನ್ನು ಅರಳಿಸಿಕೊಂಡು ಹೊರಟೆ. ಆಸ್ಪತ್ರೆಯಲ್ಲಿ ತಾತನ ಶವವನ್ನು ಹೃದಯ ಸ್ತಂಭನಾಗಾರಕ್ಕೆ ಕೈಗಾಡಿಯ ಮೂಲಕ ಒಯ್ಯುವಾಗ, ಅವನಿಗೆ ಬಿಸಿಲ ಝಳ ತಾಗದಂತೆ ನಾನು ಬಿಡಿಸಿ ಹಿಡಿದಿದ್ದ ಕೊಡೆ ಅದೇ ಆಗಿತ್ತು. ಬಹಳ ಹಿಂದೆ, ನಾನು ಚಿಕ್ಕವನಾಗಿದ್ದಾಗ, ಒಂದು ಕೈಯಿಂದ ನನ್ನ ಕೈಹಿಡಿದು ನಡೆಸಿಕೊಂಡು ಹೋಗುತ್ತಿದ್ದಾಗ ತಾತ, ನನಗೆ ಬಿಸಿಲು ತಾಗದಂತೆ ಇನ್ನೊಂದು ಕೈಯಲ್ಲಿ ಬಿಡಿಸಿ ಹಿಡಿದುಕೊಂಡು ಹೋಗುತ್ತಿದ್ದ ಹಳೇ ಕೊಡೆ ಅದೇ ಆಗಿತ್ತು. ಆ ಕೊಡೆ ನನಗೂ ತಾತನಿಗೂ ಬಿಸಿಲು ಮಳೆಗಳಿಂದ ರಕ್ಷಣೆ ಒದಗಿಸುತ್ತಿತ್ತು.

ಇಂದು ನಾನೊಬ್ಬನೇ ಆ ಕೊಡೆಯನ್ನು ಹಿಡಿದುಕೊಂಡು ಹೋಗುತ್ತಿದ್ದೇನೆ.

ಪ್ರೊ॥ ಕೆ. ಆರ್. ಉಡುಪ

ಅಧರ್ಮಿಗಳಿಗೆ ಮತ್ತು ಹಿಂಸಾನಿರತರಿಗೆ ಮತ್ತು ಅಸತ್ಯವನ್ನೇ ತನ್ನ ಬಂಡವಾಳವನ್ನಾಗಿರಿಸಿಕೊಂಡಿರುವವರಿಗೆ ಈ ಲೋಕದಲ್ಲಿ ಶಾಶ್ವತ ಸುಖ ದೊರೆಯಲಾರದು.

—ಮನು

ಧೂಮಕೇತುವೊಂದರ ಅವಸಾನ

ಗುರುವಿನ ಗುಲಾಮನಾಗಿ ಶಾಶ್ವತ ಮುಕುತಿ ದೊರಕಿಸಿಕೊಳ್ಳುವ ಈ ಜಾಣ ಪರಾತಿರಿ ಅದ್ವಿತೀಯ ವಿದ್ಯಮಾನ: ಅಧಿಕ ಗುರುತ್ವವಿರುವ ಮಹಾಕಾಯದ ಸನಿಹಕ್ಕೆ ನಿಮ್ನ ಗುರುತ್ವವಿರುವ ಅಲ್ಪ-ಕಾಯ ಸುಳಿದರೆ ಈ ಎರಡನೆಯದರ ಸರ್ವನಾಶ ಹೇಗೆ ಶತಸ್ಸಿದ್ಧ ಎನ್ನುವುದಕ್ಕೆ ಇನ್ನೂ ಒಂದು ನಿದರ್ಶನ.

ಸೌರವ್ಯೂಹದ ಗ್ರಹಗಳ ಪೈಕಿ ಅತ್ಯಂತ ದೊಡ್ಡ ಗಾತ್ರದ ಗ್ರಹ ಗುರುಗ್ರಹ. ಸೂರ್ಯನ ಸುತ್ತಲೂ ಪ್ರದಕ್ಷಿಣೆ ಹಾಕುವ ೯ ಗ್ರಹಗಳ ಪೈಕಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಭಾರತೀಯರು ಈ ಗ್ರಹಕ್ಕೆ ಅಧಿಕ ಮಹತ್ವ ನೀಡಿ ತಮ್ಮ ಜ್ಯೋತಿಶ್ಶಾಸ್ತ್ರದಲ್ಲಿ ವಿಶೇಷ ಸ್ಥಾನ ನೀಡಿದ್ದಾರೆ. ಖಗೋಳ ವಿಜ್ಞಾನಿಗಳಿಗೆ ಇದೊಂದು ಸವಾಲೆಸೆದಿರುವ ಗ್ರಹ ಎಂದೇ ಇದನ್ನು ಕುರಿತ ವಿಚಾರವಾಗಿ ಪದೇ ಪದೇ ಸ್ವಾರಸ್ಯಕರವಾದ ಸುದ್ದಿಗಳು ಹೊರಬರುತ್ತಲೇ ಇವೆ. ತೀರಾ ಇತ್ತೀಚಿನ ಸುದ್ದಿ ಎಂದರೆ ಗುರುಗ್ರಹ ಧೂಮಕೇತುವೊಂದನ್ನು ಕಬಳಿಸುವ ಕೌತುಕ ಸಂದರ್ಭ.

ಈ ಸಂದರ್ಭ ಒದಗುವುದು ಇದೇ ೧೯೯೪ರ ಜುಲೈ ತಿಂಗಳಿನ ೧೬ನೆಯ ದಿನಾಂಕದಿಂದ. ಅಂದಿನಿಂದ ಆರು ದಿವಸ ಪರ್ಯಂತ ಗುರುವಿನ ಈ ಸ್ವಾಹಾಕಾರದ ಜಾಕರಿ ನಡೆಯುತ್ತಲೇ ಇರುತ್ತದೆ. ಏನಿದು ಕೌತುಕ! ಆಶ್ಚರ್ಯವಾಗಿ ಕಾಣುತ್ತಿದೆಯಲ್ಲವೆ? ಆದರೂ ನಿಜ. ಇದೊಂದು ವಾಸ್ತವ ಆಕಾಶವಿದ್ಯಮಾನ. ಸೂರ್ಯನಿಂದ ೭೭೮ ದಶಲಕ್ಷ ಕಿಲೊಮೀಟರುಗಳ ದೂರದಲ್ಲಿರುವ, ಬಹುಪಾಲು ಹೈಡ್ರೊಜನ್ (ಜಲಜನಕ) ಮತ್ತು ಹೀಲಿಯಮ್ ಅನಿಲಗಳಿಂದ ಕೂಡಿರುವ ಮತ್ತು ಗ್ರಹಗಳ ಪೈಕಿ ಅತ್ಯಂತ ಹೆಚ್ಚಿನ ಗುರುತ್ವಾಕರ್ಷಣ ಬಲವನ್ನು ಹೊಂದಿರುವ ಗುರುಗ್ರಹ ತನ್ನ ಸುತ್ತ ಸುತ್ತುತ್ತಿರುವ ಧೂಮಕೇತುವೊಂದನ್ನು ಕಬಳಿಸುವ ಘಟನೆ ಆ ದಿವಸಗಳಲ್ಲಿ ಜರಗಲಿದೆ. ಈ ಕಾರಣಕ್ಕಾಗಿಯೇ ಗುರುವಿಗೆ ಮತ್ತೊಮ್ಮೆ ಮಹತ್ವ ಒದಗಿಬಂದಿರುವುದು. ಗುರುಗ್ರಹದ ಸುತ್ತಲ ತನ್ನ ಪ್ರದಕ್ಷಿಣೆಯಲ್ಲಿ ಆ ಧೂಮಕೇತು ಗುರುವಿನ ಪ್ರಬಲ ಗುರುತ್ವಸೆಳೆತದಿಂದಾಗಿ ಚೂರುಗಳಾಗಿ ಒಡೆದು ಹೋಗಿ ಒಂದರ ಹಿಂದೆ ಒಂದರಂತೆ ಆ ಚೂರುಗಳು ಗುರುಗ್ರಹದ ಮೇಲ್ಮೈಯನ್ನು ಅಪ್ಪಳಿಸುವಾಗ


ಸರ್ವನಾಶಹೊಂದುವ ಸನ್ನಿವೇಶವನ್ನು ಖಗೋಳವಿಜ್ಞಾನಿಗಳು ಎದುರು ನೋಡುತ್ತಿದ್ದಾರೆ.

ಯಾವುದು ಆ ಧೂಮಕೇತು?

ಆ ಧೂಮಕೇತು ಮೊದಲು ಗೋಚರವಾದದ್ದು ೧೯೯೩ರ ಮಾರ್ಚ್ ತಿಂಗಳ ೨೪ರಂದು. ಜೀನ್ ಷೂಮೇಕರ್ ಮತ್ತು ಅವರ ಪತ್ನಿ ಕ್ಯಾರೊಲಿನ್ ಷೂಮೇಕರ್ ಎಂಬ ಭೂ ಹಾಗೂ ಖಗೋಳವಿಜ್ಞಾನಿಗಳು ಅಮೆರಿಕದ ಕ್ಯಾಲಿಫೋರ್ನಿಯದಲ್ಲಿಯ ಮೌಂಟ್ ಪಾಲೊಮಾರ್ ವೇಧಶಾಲೆಯಲ್ಲಿ ತಮ್ಮ ಮಾಮೂಲಿ ವೀಕ್ಷಣೆಯಲ್ಲಿ ನಿರತರಾಗಿದ್ದ ಸಮಯ. ನಾಲ್ಕುವರೆ ತಿಂಗಳ ಪರ್ಯಂತ ಕೆಲಸಮಾಡಿ, ಛಾಯಾಚಿತ್ರ ತೆಗೆಯುವ ಕ್ಯಾಮರವನ್ನು ಅಳವಡಿಸಿದ್ದ ತಮ್ಮ ದೂರದರ್ಶಕದ ಮೂಲಕ ಸೆರೆಹಿಡಿದಿದ್ದ ಹಳೆಯ ಫಿಲ್ಮನ್ನು ಮತ್ತೆ ಪರೀಕ್ಷಿಸಿದಾಗ ಸ್ವಾರಸ್ಯಪೂರ್ಣ ಬಿಂಬ ಅವರನ್ನು ಚಕಿತಗೊಳಿಸಿತ್ತು. ಇವರೊಂದಿಗೆ ಭುಜಕ್ಕೆ ಭುಜ ಕೊಟ್ಟು ಸಹಕಾರವಿತ್ತ ಮತ್ತೊಬ್ಬರೆಂದರೆ ಕಿರಿಯ ಹವ್ಯಾಸಿ ಖಗೋಳವಿಜ್ಞಾನಿ ಡೇವಿಡ್ ಲೆವಿ. ಷೂಮೇಕರ್ ದಂಪತಿಗಳು ಹಾಗೂ ಲೆವಿ ವೀಕ್ಷಿಸಿದ ಕೌತುಕಮಯ ದೃಶ್ಯಾವಳಿ ಅವರಿಗೆ ಪ್ರಪಂಚ ಖ್ಯಾತಿಯನ್ನು ತಂದುಕೊಟ್ಟಿದೆ. ಸರ್ವೇಸಾಮಾನ್ಯವಾಗಿ ಧೂಮಕೇತುಗಳೆಲ್ಲ ಸೂರ್ಯನನ್ನು ನಿಗದಿತ ಅವಧಿಗಳಲ್ಲಿ, ದೀರ್ಘವೃತ್ತಾಕಾರ ಕಕ್ಷೆಗಳಲ್ಲಿ ಸುತ್ತುವುದು ಅಥವಾ ಇನ್ನೊಂದು ವಿಶೇಷ ಬಗೆಯ ಪರವಲಯ ಎಂದೆನ್ನುವ ಕಕ್ಷೆಗಳಲ್ಲಿ ಸಂಚರಿಸುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿತ್ತು. ಆದರೆ ಈ ವಿಶೇಷ ಧೂಮಕೇತು ಈ ಮಾಮೂಲಿನಂತಲ್ಲದೆ ಗುರುಗ್ರಹವನ್ನೇ ದೀರ್ಘವೃತ್ತ ಕಕ್ಷೆಯಲ್ಲಿ ಸುತ್ತುವುದು ಷೂಮೇಕರ್–ಲೆವಿ ಖಗೋಳವಿಜ್ಞಾನಿಗಳ ಗಮನಕ್ಕೆ ಬಂತು. ಕುತೂಹಲ ಹೆಚ್ಚಿತು. ಪ್ರತಿ ದಿವಸ ರಾತ್ರಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ದೂರದರ್ಶನದ ಮೂಲಕ ತಮ್ಮ ವೀಕ್ಷಣೆ ಮುಂದುವರಿಸಿದರು. ಧೂಮಕೇತುವಿನ ಇರವು ಸ್ಥಿರಪಟ್ಟಿತು. ಪ್ರಪಂಚದ ಇತರ ಖಗೋಳವಿಜ್ಞಾನಿಗಳೊಂದಿಗೆ ಪರಸ್ಪರ ವಿನಿಮಯ ಮಾಡಿಕೊಂಡರು. ಧೂಮಕೇತುಗಳಿಗೆ ನಾಮಕರಣ ಮಾಡುವ ಸಂಪ್ರದಾಯದಂತೆ ಪತ್ತೆಯಾದ ಹೊಸ ಧೂಮಕೇತುವಿಗೆ ಅದನ್ನು ಆವಿಷ್ಕರಿಸಿದವರ ಹೆಸರೇ ಅನ್ವರ್ಥವಾಯಿತು. ಹೀಗಾಗಿ ಷೂಮೇಕರ್–ಲೆವಿ ಧೂಮಕೇತುವಿನ ವಿಚಾರ ಪ್ರಪಂಚವಲ್ಲೆಲ್ಲ ಹರಡಿತು.

ಈ ಪರಿಯ ಸೊಬಗು

ದೂರದರ್ಶಕದ ಮೂಲಕ ಫಿಲ್ಮಿನಮೇಲೆ ಮೂಡಿ ಬಂದ ಆ ಹೊಸಕಾಯದ ಆಕಾರ ಮತ್ತಿತರ ವೈಚಿತ್ರ್ಯಗಳನ್ನು ಪರಿಶೀಲಿಸಿದ ಷೂಮೇಕರ್-ಲೆವಿ ಅದು ಬಹಳಷ್ಟು ಚೂರುಗಳಾಗಿ ಒಡೆದು ಹೋಗಿರುವುದನ್ನು ಕಂಡು ಚಕಿತರಾದರು. ಆ ಚೂರುಗಳೆಲ್ಲ ದಾರಕ್ಕೆ ಪೋಣಿಸಿದ ಮುತ್ತಿನಮಣಿಗಳಂತೆ ಅವರಿಗೆ ಕಂಡವು. 'ಮಣಿ ಮಣಿರಾಜಾ ಮಣಿ ಶೃಂಗಾರಾ ಎಲ್ಲಿಂದ ಬಂದ್ಯೊ ರಾಜಕುಮಾರ' ಎಂಬ ಪರಿಯಲ್ಲಿ ಒಂದರ ಹಿಂದೆ ಒಂದು ಪಥಸಂಚಲನ ಕ್ರಮದಲ್ಲಿ ಗುರುಗ್ರಹದ



ಚಿತ್ರ ೧. ಚೂರುಗಳಾಗಿ ಒಡೆದ ಧೂಮಕೇತು ಹುಂಡುಗಳ ಛಾಯಾಚಿತ್ರ. ಬೇರೆ ಬೇರೆ ದಿನಾಂಕಗಳಲ್ಲಿ ಹುಂಡುಗಳ ವ್ಯಾಪ್ತಿಯನ್ನು ಈ ಚಿತ್ರ ತೋರಿಸುತ್ತದೆ.

ಕೃಪೆ: ದಿ ಹಿಂದೂ ದಿನಪತ್ರಿಕೆ

ಮೇಲ್ಮೈ ಬಳಿಗೆ ಬರುತ್ತಿರುವ ಸೊಬಗನ್ನು ಕಂಡರು. ಖಗೋಳವಿಜ್ಞಾನದಲ್ಲಿ ಈ ಕ್ಷೇತ್ರದಲ್ಲಿ ನುರಿತ ಸಹಗೋಳವಿಜ್ಞಾನಿಗಳೊಂದಿಗೆ ಈ ವಿಚಿತ್ರ ದೃಗ್ಗೋಚರ ವಿದ್ಯಮಾನದ ಬಗ್ಗೆ ಚರ್ಚಿಸಿ ಒಡೆದು ಛಿದ್ರಗೊಂಡ ಧೂಮಕೇತುವಿನ ಬಗ್ಗೆ ಖಚಿತ ಅಭಿಪ್ರಾಯಕ್ಕೆ ಬರಲಾಯಿತು. ಗುರುಗ್ರಹವನ್ನು ಕಕ್ಷಿಸುತ್ತಿದ್ದ ಈ ಧೂಮಕೇತು ತನ್ನ ಪ್ರಯಾಣಕಾಲದಲ್ಲಿ ಗುರುವಿನ ಅತ್ಯಂತ ಪ್ರಬಲ ಗುರುತ್ವಾಕರ್ಷಣ ವಲಯದೊಳಗೆ ನುಸುಳಿಕೊಂಡು ಬಂದು ಹಲವು ಚೂರುಗಳಾಗಿ ಒಡೆದಿರಬೇಕು ಎಂಬ ನಿಲವಿಗೆ ಬಂದರು. ಸುಮಾರು ಇಪ್ಪತ್ತೆರಡು ಚೂರುಗಳಿರುವ ಚಿತ್ರವೊಂದನ್ನು ಷೂಮೇಕರ್–ಲೆವಿ ಗಮನಿಸಿದಾಗ ಅವುಗಳ ಪಥನೆರವಣಿಗೆ ಕ್ರಮೇಣ ಕುಗ್ಗುತ್ತಿರುವುದನ್ನು ಅವರು ೧೯೯೨ರ ಜುಲೈ ೭ರಂದು ವೀಕ್ಷಿಸಿದರು. ಧೂಮಕೇತು ಚೂರುಗಳಾಗಿ ಒಡೆದುಹೋದದ್ದರ ಸಲುವಾಗಿ ಪ್ರತಿಯೊಂದು ಚೂರಿನ ಪ್ರತಿಫಲನ ಸಾಮರ್ಥ್ಯ ಹೆಚ್ಚಾಗತೊಡಗಿತು. ವೀಕ್ಷಣೆ, ಲೆಕ್ಕಾಚಾರ, ಚರ್ಚೆ, ತೀರ್ಮಾನಗಳ ಸುರಿಮಳೆಯಾದ ಬಳಿಕ ಸುಮಾರು ೦.೭೫ ಕಿಲೊಮೀಟರ್ ಅಗಲದಿಂದ ಹಿಡಿದು ೨.೫ ಕಿಲೊಮೀಟರ್ ಅಗಲದವರೆಗಿನ ಸುಮಾರು ೨೨ ಚೂರುಗಳು ಗುರುಗ್ರಹದ ಮೇಲ್ಮೈಯನ್ನು ಅಪ್ಪಳಿಸುವ ವಿಚಾರ ಖಚಿತವಾಯಿತು.

ಅಪ್ಪಳಿಸುವ ಪರಿ

ಗುರುಗ್ರಹದ ಸುತ್ತಲಿನ ಕಕ್ಷೆಯಲ್ಲಿ ವಿರಾಜಮಾನವಾಗಿದ್ದ ಈ ನೂತನ ಧೂಮಕೇತು ಗುರುವಿನ ಗುರುತ್ವಾಕರ್ಷಣಕ್ಷೇತ್ರದ ಪ್ರಭಾವಕ್ಕೆ ಈಡಾಗಿ ತನ್ನತನ ಕಳೆದುಕೊಂಡು ಛಿದ್ರಗೊಂಡು ಪತನವಾಗುತ್ತಿದ್ದುದು ಒಂದು ವಿಧದಲ್ಲಿ ವಿಧಿ ವಿಪರ್ಯಾಸವೇ ಸರಿ. ೧೯೯೪ರ ಜುಲೈ ೨೦ರಂದು, ಸುಮಾರು ೭೫,೦೦೦ ಕಿಲೊಮೀಟರ್‌ಗಳ ಆಚೆಯಿಂದ ಗುರುಗ್ರಹದ ಮೇಲ್ಮೈ ಮೇಲೆ ಬಂದು ಅಪ್ಪಳಿಸುವ ಈ ಧೂಮಕೇತು ಚೂರುಗಳ ದೃಶ್ಯಾವಳಿಗಳನ್ನು ವೀಕ್ಷಿಸುವ ಸಲುವಾಗಿ ಪ್ರಪಂಚಾದ್ಯಂತ ಇರುವ ಖಗೋಳವಿಜ್ಞಾನಿಗಳ ಗಡಣ ತಮ್ಮ ಉಪಕರಣಗಳ ಸಮೇತ ಸನ್ನದ್ಧವಾಗಿದೆ. ಇಲ್ಲಿಯ ದುರದೃಷ್ಟ ಸಂಗತಿ ಎಂದರೆ ಧೂಮಕೇತು ಚೂರುಗಳು ಬಂದು ಅಪ್ಪಳಿಸುವುದು ಗುರುಗ್ರಹದ ಅಗೋಚರ ಭಾಗದ ಮೇಲೆ. ಅದೂ ಗುರುವಿನ ಅಗ್ನೇಯ ದಿಕ್ಕಿನೆಡೆಗಿನ ಮತ್ತಷ್ಟು ದಕ್ಷಿಣಭಾಗಕ್ಕೆ. ಹೀಗಾಗಿ ಚೂರುಗಳು ಬಂದು ಅಪ್ಪಳಿಸುವ ವಿದ್ಯಮಾನವನ್ನು ಪರಿಪೂರ್ಣವಾಗಿ ವೀಕ್ಷಿಸುವುದು ಭೂಮಿಯ ಮೇಲಿರುವ

ವಿಜ್ಞಾನಿಗಳಿಗೆ ಸಾಧ್ಯವಾಗುವುದಿಲ್ಲ. ಆದರೂ ಆ ಚೂರುಗಳು ಗುರುಗ್ರಹದ ವಾತಾವರಣದ ಮೂಲಕ ಸಾಗುವ ದೃಶ್ಯವನ್ನು ಪ್ರಪಂಚದ ಹಲವಾರು ವಿಜ್ಞಾನಿಗಳು ವಿವಿಧ ಪ್ರಕಾರದ ದೃಗುಪಕರಣಗಳ ಸಹಾಯದಿಂದ ವೀಕ್ಷಿಸಲು ಸಿದ್ಧಮಾಡಿಕೊಳ್ಳುತ್ತಿದ್ದಾರೆ. ಅಂತರಿಕ್ಷಶೋಧನೆಯ ಸಲುವಾಗಿ ಅಮೆರಿಕ



ಚಿತ್ರ ೨. ಒಂದಾದ ಮೇಲೆ ಒಂದರಂತೆ ಗುರುಗ್ರಹದ ಇರುಳು ಭಾಗದ ಮೇಲೆ ಧಾಳಿಯಿಡುವ ಧೂಮಕೇತುವಿನ ಹುಂಡುಗಳು—ಕಲಾವಿದನ ಕಲ್ಪನೆ.

ಕೃಪೆ: ದಿ ಹಿಂದೂ ಪತ್ರಿಕೆ

ಉಡಾಯಿಸಿರುವ ಗೆಲಿಲಿಯೋ ಎಂಬ ಹೆಸರಿನ ಶೋಧನೌಕೆ ಮಾತ್ರ ಧೂಮಕೇತು ಬಡಿತದ ಮುಹೂರ್ತದ ಸಮಯಕ್ಕೆ ಗ್ರಹದಿಂದ ೨೨೫ ದಶಲಕ್ಷ ಕಿಲೊಮೀಟರುಗಳ ದೂರದಲ್ಲಿರುತ್ತದೆ. ಗ್ರಹದ ಮೇಲ್ಮೈ ಮೇಲೆ ನಡೆಯುವ ಘಟನಾವಳಿಗಳನ್ನು ನೇರವಾಗಿ ತನ್ನ ಕ್ಯಾಮರ ಕಣ್ಣಿನಿಂದ ನೋಡುವಂಥ ಸೌಭಾಗ್ಯ ಇರುವುದು ಗೆಲಿಲಿಯೋ ನೌಕೆಗೆ ಮಾತ್ರ. ಆಗ ಇದು ತಾನು ಹಿಡಿದಿಟ್ಟ ಚಿತ್ರಮಾಹಿತಿಗಳನ್ನು ಎಷ್ಟರಮಟ್ಟಿಗೆ ಕರಾರುವಾಕ್ಕಾಗಿ ರವಾನಿಸುತ್ತದೆ ಎಂಬುದನ್ನು ಕಾದುನೋಡಬೇಕು.

ಚೂರುಗಳಾಗಿ ಒಡೆದುಹೋಗಿರುವ ತಾಯಿ ಧೂಮಕೇತು ಹಾಗೂ ಅದರ ೨೧ 'ಪುತ್ರಿ'ಯರು ಗ್ರಹವನ್ನು ಅಪ್ಪಳಿಸುವ ಪರಿಯಾದರೂ ಯಾವ ಬಗೆಯದು? ಖಗೋಳವಿಜ್ಞಾನಿಗಳ ಒಂದು ಲೆಖ್ಖಾಚಾರದ ರೀತ್ಯ ಮಾತೃಧೂಮಕೇತು ಸುಮಾರು ೯.೫ ಕಿಲೊಮೀಟರುಗಳ ಅಗಲದಷ್ಟಿದ್ದು ಪುತ್ರಿಯರ ಪೈಕಿ ಬಹಳ ದೊಡ್ಡ ಗಾತ್ರದಾಕೆ ಸುಮಾರು ೩ ಕಿಲೊಮೀಟರು ಅಗಲದವಳಿರುತ್ತಾಳೆ. ಇಷ್ಟಾದರೂ ಪುತ್ರಿಯರನ್ನು ಸುತ್ತುವರಿದಿರುವ ಧೂಳಿನಿಂದಾಗಿ ಯಾರಾರು ಎಷ್ಟೆಷ್ಟು ಅಗಲದವರಿರುತ್ತಾರೆ ಎಂಬುದನ್ನು ಖಚಿತವಾಗಿ ಹೇಳಲಾಗದು ಎಂಬುದು ವಿಜ್ಞಾನಿಗಳ ಅಂಬೋಣ. ಏನೇ ಆದರೂ ಧೂಮಕೇತು ಚೂರುಗಳ ಬಡಿತಗಳಿಂದಾಗಿ ಗುರುಗ್ರಹದ ವಾತಾವರಣಕ್ಕೆ ಬಂದು ಸೇರುವ ಶಕ್ತಿಯ ಮೊತ್ತ ಎಷ್ಟು ಗೊತ್ತೆ? ಸುಮಾರು ೬೫ ದಶಲಕ್ಷ ವರ್ಷಗಳ ಹಿಂದೆ ದೈತ್ಯೋರಗಗಳ ಸಾಮೂಹಿಕ ಮಾರಣಹೋಮಕ್ಕೆ ಕಾರಣವಾದ ಉಲ್ಕಾಪಾತದ ಕಾರಣ ಭೂಮಿಯ ಮೇಲೆ ಬಿದ್ದ ಉಲ್ಕಾಪಿಂಡ ಉಂಟುಮಾಡಿದ ಶಕ್ತಿಗಿಂಗಿತಲೂ ಹಲವಾರು ಸಾವಿರ ಪಟ್ಟು ಅಧಿಕವಾಗಿರುತ್ತದೆ ಎಂದು ಊಹಿಸಿದ್ದಾರೆ.

ಮೋಕ್ಷಕೆ ದಾರಿ ಯಾವುದಯ್ಯ !

ಒಂದಾದ ಬಳಿಕ ಒಂದರಂತೆ ಧೂಮಕೇತು—ಚೂರುಗಳು ಗುರುವನ್ನು ಅಪ್ಪಳಿಸುವಾಗ ಉಂಟಾಗುವ ಸ್ಫೋಟದಿಂದಾಗಿ ಧಕ್ಕಾತರಂಗಗಳು ಏರ್ಪಡುತ್ತವೆ. ಇದರಿಂದ ಇಡೀ ಗ್ರಹವೇ ಗಂಟೆಯಂತೆ ಓಲಾಡುತ್ತದೆ ಎಂಬುದು ಕೆಲವು ಖಗೋಳವಿಜ್ಞಾನಿಗಳ ಅಭಿಪ್ರಾಯ. ಧೂಮಕೇತುವಿನ ಈ ತಾಡನವಾದರೋ ೨೧ ಸೂಜಿಗಳನ್ನು ಸೇಬಿನ ಹಣ್ಣಿನ ಮೇಲೆ ಚುಚ್ಚಿದಂತೆ ಇರುತ್ತದೆ ಎಂಬುದಾಗಿ ಮತ್ತೊರ್ವ ವಿಜ್ಞಾನಿಯ ಅಭಿಪ್ರಾಯ. ಪ್ರತಿಯೊಂದು ಸೂಜಿಯೂ ಸಾಕಷ್ಟು

ಆಘಾತವನ್ನು ಉಂಟುಮಾಡಿದರೂ ಸೇಬಿನ ಹಣ್ಣಿಗೇನೂ ಅಷ್ಟೊಂದು ಬಾಧೆ ತಟ್ಟದು ಎಂಬುದು ಮತ್ತೊಬ್ಬ ವಿಜ್ಞಾನಿ ತಿಳಿಸಿದ್ದಾರೆ. ಹಾಗಾದರೆ ತಾಡನೆಯ ಪರಿಯದಾದರೂ ಏನು ಎಂಬುದರ ಬಗ್ಗೆ ವಿವಿಧ ಅಭಿಪ್ರಾಯಗಳು ವ್ಯಕ್ತಪಟ್ಟವೆ. ಬೃಹದಾಗ್ರತ್ರದ ಅಣಬೆರೂಪದ ಮೋಡ ಉದ್ಭವಿಸುವುದೆ? ಚಿತ್ತಾಕರ್ಷಕ ಉಲ್ಕಾವೃಷ್ಟಿ ಆಗುತ್ತದೆಯೆ? ವಜ್ರವನ್ನು ಹೋಲುವ ಮಿಂಚು ಏರ್ಪಡುತ್ತದೆಯೆ? ಅಥವಾ ಏನೂ ಇಲ್ಲವೆ? ಇತ್ಯಾದಿ, ಇತ್ಯಾದಿ ಊಹಾಪೋಹಾತ್ಮಕ ಪ್ರಶ್ನೆಗಳು ಉದ್ಭವಿಸಿವೆ. ಬೇರೆ ಬೇರೆ ವಿಧಾನಗಳನ್ನು ಅನುಸರಿಸಿ ವಿಜ್ಞಾನಿಗಳು ವಿವಿಧ ಮುನ್ನುಡಿಗಳನ್ನು ಮಂಡಿಸಿದ್ದಾರೆ. ಸೆಕೆಂಡಿಗೆ ಸುಮಾರು ೬೪ ಕಿಲೊ ಮೀಟರುಗಳ ವೇಗದಲ್ಲಿ ಈ ಧೂಮಕೇತುಚೂರುಗಳು ಸುಮಾರು ೨೨೫ ಕಿಲೊ ಮೀಟರುಗಳ ಎತ್ತರದಿಂದ ಗ್ರಹದ ವಾಯುಮಂಡಲವನ್ನು ಪ್ರವೇಶಿಸಿದೊಡನೆಯೇ ಮತ್ತೆ ಚಿಕ್ಕ ಚಿಕ್ಕ ಚೂರುಗಳಾಗಿ ಒಡೆದು ಹೋಗುತ್ತವೆ. ಇದರಿಂದ ಉಂಟಾದ ವೃಷ್ಟಿಯಾದರೋ ಕೋವಿಯ ಕೊಳವೆಯಿಂದ ಹೊರಬರುವ ಗುಂಡುಗಳೋಪಾದಿಯಲ್ಲಿದ್ದು ಗ್ರಹದ ಒಳಗೇ ಬಿದ್ದು ಬಿಡುವ ಸಾಧ್ಯತೆ ಇದೆ. ಬರ್ಫದ ಉಂಡೆಗಳಂತಿರುವ ಧೂಮಕೇತುಚೂರುಗಳು ಗ್ರಹದ ವಾತಾವರಣವನ್ನು ಪ್ರವೇಶಿಸಿ, ಗ್ರಹದ ಅನಿಲ ಇಲ್ಲವೆ ದ್ರವಕಾಯದ ಸುಮಾರು ೩೦೦ ಕಿಲೊ ಮೀಟರುಗಳಷ್ಟು ಆಳಕ್ಕೆ ಬಿದ್ದು ಬಿಡುತ್ತವೆ. ಇದರಿಂದ ಗ್ರಹದ ಮೇಲೆ ಒಂದು ಬೃಹತ್ ಕುಳಿಯೋಪಾದಿಯಲ್ಲಿ ರಚನೆ ಮೂಡಿ ಅಲ್ಲಿಂದ ಸುಮಾರು ೨೨೫೦ ಕಿಲೊಮೀಟರುಗಳ ಎತ್ತರಕ್ಕೆ ಅಣಬೆ ಮೋಡ ಏರ್ಪಡುತ್ತದೆ. ಇದರ ಪರಿಣಾಮ ಗುರುಗ್ರಹದ ಕಾಂತಿ ಅದರ ಸಾಮಾನ್ಯಕಾಂತಿಯ ಎರಡುಪಟ್ಟು ವೃದ್ಧಿಸುತ್ತದೆ. ಈ ಕ್ರಿಯೆಯಿಂದ ಉಂಟಾದ ವಾತಾವರಣದಲ್ಲಿಯ ಸುಳಿ ಸುಮಾರು ೧೦೦ ವರ್ಷಗಳ ತನಕ ಇರುವ ಸಾಧ್ಯತೆ ಇದೆ.

ಸಾಧ್ಯತೆಗಳು

ಮತ್ತೊಂದು ಊಹೆ ಈ ಪರಿಯಲ್ಲಿದೆ. ಒಂದಾದ ಮೇಲೆ ಒಂದರಂತೆ ಬಂದು ಅಪ್ಪಳಿಸುವ ಈ ಧೂಮಕೇತುಚೂರುಗಳು ಗುರುಗ್ರಹದ ವಾತಾವರಣವನ್ನು ಪ್ರವೇಶಿಸುತ್ತಿದ್ದಂತೆಯೇ ಮತ್ತೆ ಹಲವಾರು ಚೂರುಗಳಾಗಿ ಒಡೆದು ಹೋಗುತ್ತವೆ. ಅಮೆರಿಕ ೧೯೭೯ರಲ್ಲಿ ಹಾರಿಬಿಟ್ಟ ವಾಯೇಜರ್ ೧ ಎಂಬ ಗ್ರಹಶೋಧನ ನೌಕೆ ಈಗಾಗಲೆ ಗುರುವಿಗೆ ಒಂದು ತೆಳು ಬಳೆ ಇರುವುದನ್ನು ಪತ್ತೆಮಾಡಿದೆ. ಒಡೆದುಹೋದ ಸಹಸ್ರಾರು ಸಂಖ್ಯೆಯ ಈ ಧೂಮಕೇತುಚೂರುಗಳು ಈ

ಬಳೆಯನ್ನು ಮತ್ತಷ್ಟು ದಟ್ಟೈಸಿ ಸಾಕಷ್ಟು ದಪ್ಪಗಾಗುವಂತೆ ಮಾಡಬಹುದು ಎನ್ನುವುದು ವಿಜ್ಞಾನಿಗಳ ಊಹೆ. ಮತ್ತೊಂದು ಸಾಧ್ಯತೆ ಹೀಗಿದೆ. ಈ ಚೂರುಗಳ ಬಡಿತದಿಂದಾಗಿ, ಈಗಾಗಲೇ ಗುರುಗ್ರಹದ ಮೇಲೆ ಕಾಣುತ್ತಿರುವ ಮಹಾ ಕೆಂಪುಮಚ್ಚೆ ಮಾತ್ರವಲ್ಲದೆ ಹೆಚ್ಚುಕಡಿಮೆ ಇದೇ ಪ್ರಮಾಣದ ಮತ್ತೊಂದು ಮಚ್ಚೆ ಏರ್ಪಡಬಹುದು. "ಮಹಾ ಏಕಾಕ್ಷಿ" ಎಂಬ ಬಿರುದಿಗೆ ಪಾತ್ರವಾಗಿರುವ ಗುರುಗ್ರಹಕ್ಕೆ ಮತ್ತೊಂದು ನೇತ್ರ ಒದಗಿಬಂದು ಅದು ತನ್ನ ಖ್ಯಾತಿಯನ್ನು ವೃದ್ಧಿಸಿಕೊಳ್ಳಬಹುದು.

ಆಗುಹೋಗುಗಳು ಹೇಗೇ ಇರಲಿ ಊಹಾಪೋಹಗಳು ಏನೇ ಇರಲಿ ಇದೇ ಜುಲೈ ತಿಂಗಳ ೧೬ರಿಂದ ೨೦ರ ತನಕದ ಅವಧಿಯಲ್ಲಿ (೧೯೯೪ಳ) ಇದುತನಕವೂ ನಮ್ಮ ಲಕ್ಷ್ಯಕ್ಕೆ ಬರದಿದ್ದ ಆಕಾಶಘಟನೆ ಜರಗಲಿದೆ. ಸಾಧಾರಣ ಗಾತ್ರದ ದೂರದರ್ಶಕಗಳ ಮೂಲಕ ಸಾಮಾನ್ಯರು ಈ ಘಟನಾವಳಿಗಳನ್ನು ವೀಕ್ಷಿಸುವುದು ಸಾಧ್ಯವಾಗದಿದ್ದರೂ ಬಲು ನಾಜೂಕಿನ ಹಾಗೂ ಪ್ರಬಲ ದೂರದರ್ಶಕಗಳನ್ನು ಬಳಸಿ ವೀಕ್ಷಣೆನಡೆಸಲು ಪ್ರಪಂಚದ ವಿಜ್ಞಾನಿಗಳು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಗುರುವಿಗೆ ಪ್ರದಕ್ಷಿಣೆ ಹಾಕುತ್ತಲಿದ್ದರೂ ನಿಸರ್ಗ ನಿಯಮದ ಎದುರು ತನ್ನ ಯಾವುದೇ ಶೌರ್ಯ ಸಾಮರ್ಥ್ಯಗಳನ್ನು ಪ್ರದರ್ಶಿಸದೆ ಗುರುವಿನ ಒಡಲಿಗೆ ಬಿದ್ದು ತನ್ನನ್ನೇ ನಾಶಪಡಿಸಿಕೊಳ್ಳುವಂಥ ಷೂಮೇಕರ್—ಲೆವಿ ಧೂಮಕೇತುವನ್ನು ಒಂದು ವಿಧದಲ್ಲಿ ಮುಮುಕ್ಷು ಎಂದೇ ಹೇಳಬೇಕು.

ಇದು ಎಂಥಾ ಲೋಕವಯ್ಯ !

ಸೌರವ್ಯೂಹದ ಒಂಬತ್ತು ಗ್ರಹಗಳ ಪೈಕಿ ಗುರುವಿಗೇ ಮೊದಲ ಮಣೆ. ಏಕೆ ಹೀಗೆ? ಇದೊಂದು ದೈತ್ಯಗಾತ್ರದ ಗ್ರಹ. ಈ ಗ್ರಹದ ಸರಾಸರಿ ವ್ಯಾಸ ೧,೩೭,೨೦೦ ಕಿಲೊಮೀಟರುಗಳು. ಭೂಮಿಯ ೩೦೦ ಪಟ್ಟು ದೊಡ್ಡದಾಗಿರುವ ಈ ಗ್ರಹದ ಒಳಗೆ, ವ್ಯಾಸದ ಉದ್ದಕ್ಕೂ ೧೧ ಭೂಮಿಗಳನ್ನು ಒಂದರ ಪಕ್ಕದಲ್ಲೊಂದು ಬರುವಂತೆ ಇಡಬಹುದು, ಇಲ್ಲವೆ ಗುರುವಿನ ಒಳಗೆ ೧೨೦೦ಕ್ಕಿಂತಲೂ ಹೆಚ್ಚು ಭೂಮಿಗಳನ್ನು ತುಂಬಬಹುದು. ಈ ಗ್ರಹ ಸೂರ್ಯನನ್ನು ಒಂದು ಸಲ ಪ್ರದಕ್ಷಿಣೆ ಹಾಕಲು ಸರಿಸುಮಾರು ೧೨ ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಗುರುಗ್ರಹದ ಮೇಲೆ ದಿವಸದ ಸರಾಸರಿ ಅವಧಿ ೯ ಗಂಟೆ ೫೦ ಮಿ ೩೫ ಸೆ. ಇದಕ್ಕೆ ೧೬ ಉಪಗ್ರಹಗಳಿವೆ. ಮೊದಲನೆಯ ನಾಲ್ಕನ್ನು (ಲಿಯೋ, ಯುರೋಪಾ, ಗನಿಮೀಡ್ ಮತ್ತು ಕಲಿಸ್ಟೊ) ಇಟಲಿಯ

ಖಗೋಳಶಾಸ್ತ್ರಜ್ಞ ಗೆಲಿಲಿಯೋ ತನ್ನ ದೂರದರ್ಶಕದ ಮೂಲಕ ೧೬೧೦ರಲ್ಲಿ ವೀಕ್ಷಿಸಿದ್ದ. ಎಂತಲೇ ಈ ನಾಲ್ಕಕ್ಕೆ ಗೆಲಿಲಿಯೋ ಉಪಗ್ರಹಗಳು ಎಂದು ಹೆಸರಾಗಿದೆ. ಗುರುಗ್ರಹದ ಮೈಮೇಲಿನ ಗುರುತ್ವ ಭೂಮೇಲ್ಮೈಯ ಗುರುತ್ವದ ೨.೬೪ ಪಟ್ಟು ಹೆಚ್ಚಿಗೆ ಇದೆ. ಇದರಿಂದಾಗಿ ಭೂಮಿಯ ಮೇಲೆ ಸಾಧಾರಣವಾಗಿ ೬೦ ಕೆಜಿ ತೂಗುವ ಒಬ್ಬ ವ್ಯಕ್ತಿ ಗುರುಗ್ರಹದ ಮೇಲೆ ೧೮೫ ಕೆಜಿಯಷ್ಟು ತೂಗುತ್ತಾನೆ. ಗುರುವಿನ ಮೇಲೆ ಇಳಿಯಬಹುದಾದ ಮನುಷ್ಯನ ಕಾಲುಗಳು ದೇಹದ ಆಗಿನ ತೂಕವನ್ನು ಹೊರಲಾರದೆ ಆ ವ್ಯಕ್ತಿ ಕುಸಿದುಬಿದ್ದರೂ ಆಶ್ಚರ್ಯವಿಲ್ಲ. ಗುರುಗ್ರಹದ ತಲದಲ್ಲಿ, ಅದರ ಗುರುತ್ವಾಕರ್ಷಣ ಬಲದಿಂದ ತಪ್ಪಿಸಿಕೊಂಡು ಬಿಡುಗಡೆ ಹೊಂದಿ ಆಕಾಶಯಾನ ಮಾಡಲು ಬೇಕಾಗುವ ಪ್ರಾರಂಭಿಕ ವೇಗ (ಇದಕ್ಕೆ ವಿಮೋಚನ ವೇಗ ಎಂದು ಹೆಸರು) ಸೆಕೆಂಡಿಗೆ ೫೯ ಕಿಮೀ. ಭೂಮಿಯ ವಿಚಾರದಲ್ಲಿ ೧೨ ಕಿಮೀ. ಈ ಗ್ರಹದ ಮೇಲೆ ಇತರ ಅನಿಲಗಳೊಂದಿಗೆ ಪ್ರಧಾನವಾಗಿ ಹೈಡ್ರೋಜನ್ ಹಾಗೂ ಹೀಲಿಯಮ್ ಅನಿಲಗಳಿವೆ. ಅಧಿಕ ವಿಮೋಚನವೇಗ ಹಾಗೂ ಗುರುತ್ವಾಕರ್ಷಣ ಬಲದಿಂದ ಇರುವ ಈ ಗ್ರಹ ತನ್ನ ಪರಿಸರದಲ್ಲಿ ಸುತ್ತುವರಿದಿರುವ ಈ ಅನಿಲ ಗಳನ್ನು ಹಿಡಿದಿಟ್ಟುಕೊಂಡಿದೆ. ಅಮೋನಿಯ ಹಾಗೂ ಮಿಥೇನ್ ಅನಿಲಗಳಿರುವುದು ಪ್ರಯೋಗಗಳಿಂದ ತಿಳಿದುಬಂದಿದೆ. ಗ್ರಹದ ಮೇಲೆ ಗೋಚರಿಸುವ ಮಹಾಕೆಂಪು ಮಚ್ಚೆಯ ಸರಾಸರಿ ಉದ್ದ ೨೫,೦೦೦ ಕಿಮೀ, ಅಗಲ ೧೦,೦೦೦ ಕಿಮೀ. ಇದನ್ನು ಹಿಂದೆ ದ್ರವ ಇಲ್ಲವೆ ಘನಕಣಗಳಿಂದ ಕೂಡಿದ ಮಹಾತೇಲುದ್ವೀಪ ಎಂದು ಭಾವಿಸಲಾಗಿತ್ತು. ಅದೊಂದು ಸುಂಟರಗಾಳಿಯ ಮಹಾಕೇಂದ್ರಸ್ಥಾನ ಎಂದು ಈಗ ಪರಿಭಾವಿಸಲಾಗಿದೆ. ಈ ಗ್ರಹದ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ವಾಯೇಜರ್ ಮತ್ತು ಗೆಲಿಲಿಯೋ ಎಂಬ ಶೋಧನಾನೌಕೆಗಳನ್ನು ಹಾರಿಬಿಡಲಾಗಿದೆ. ಇದರಿಂದ ಗ್ರಹದ ನಿಜಸ್ವರೂಪದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿದೆ. ಗ್ರಹವನ್ನು ಅಪ್ಪಳಿಸುವ ಧೂಮಕೇತು ಚೂರುಗಳು ಉಂಟುಮಾಡುವ ಆಲ್ಲೋಲಕಲ್ಲೋಲ ಪರಿಣಾಮವನ್ನು ಅಧ್ಯಯನ ಮಾಡಿ ಒದಗಿ ಬರುವ ಮಾಹಿತಿಯ ವಿಶ್ಲೇಷಣೆ ನಡೆಯಲಿದೆ.

ಎಸ್. ರಾಮಪ್ರಸಾದ್

ನಿಮ್ಮ ಜೀವನ ಸಂಗಾತಿ ನಾಗ್ವಾದಕ್ಕಿಳಿದಾಗ

ಈ ಸೂತ್ರಗಳು ಗೃಹಶಾಂತಿಗೆ ಸಹಾಯಕ

ಮನೆಯೊಳಗಿನ ಜಗಳವೆಂದೂ ಮನೆಯೊಡೆಯಲು ಮತ್ತು ಮನ ಬಿರಿಯಲು ಕಾರಣವಾಗಬಾರದು. ಕೊಡು-ಕೊಳು ನೀತಿಯೇ ಸರ್ವಶ್ರೇಷ್ಠ. ಒಡಂಬಡಿಕೆ ಸುಖೀ ಜೀವನದ ಅಡಿಪಾಯ. ವಾದ-ವಿವಾದ ಸೋಲು-ಗೆಲುವು ಮುಖ್ಯವಲ್ಲ, ಜೀವನ ಸುಸೂತ್ರತೆಯೇ ಗಮ್ಯ.

ಪತಿ ಪತ್ನಿಯರು ಒಬ್ಬರು ಇನ್ನೊಬ್ಬರ ಪ್ರತಿರೂಪವಲ್ಲ. ಈ ವ್ಯತ್ಯಾಸವೇ ಆಗಾಗ ನಡೆಯುವ ಅವರ ಜಗಳಕ್ಕೆ ಕಾರಣವಾಗುತ್ತದೆ.
ಹೇಗೆಂದರೆ ;

ಸ್ಟೈಲಿ : ಟಾಮ್ ಮತ್ತು ನಾನು ಪ್ರತಿಯೊಂದು ವಿಷಯಕ್ಕೂ ಜಗಳಾಡುತ್ತೇವೆ. ನಿನ್ನೆ ರಾತ್ರಿ ಕೊಠಡಿಯ ಕಿಟಕಿ ಬಾಗಿಲು ತೆರೆಯುವ ವಿಷಯದಲ್ಲಿ ನಾವಿಬ್ಬರೂ ಬಹಳ ಜಗಳ ಆಡಿದೆವು.

ಟಾಮ್ : ಈಕೆ ಕಿಟಕಿ ಬಾಗಿಲು ತೆರೆಯುತ್ತಿದ್ದಳು. ನಾನು ಮುಚ್ಚುತ್ತಿದ್ದೆ. ಆಕೆ ಪುನಃ ತೆರೆಯುತ್ತಿದ್ದಳು. ಉಬ್ಬಸದ ಕಾರಣ ನನಗೆ ತಣ್ಣನೆ ಗಾಳಿ ಸಹಿಸಲಾಗುವುದಿಲ್ಲ.

ಸ್ಟೈಲಿ : ಆತ ತನ್ನನ್ನು ಮಕ್ಕಳಂತೆ ಬಹಳ ಸೂಕ್ಷ್ಮ ಎಂದು ಕೊಂಡಿದ್ದಾನೆ ಸ್ಟೈಲಿ ಕಿಟಕಿಯ ಬಾಗಿಲನ್ನು ತೆರೆಯಲು ಏಕೆ ಅಪೇಕ್ಷಿಸುತ್ತಾಳೆಂದು ನಾನು ಟಾಮ್‌ನನ್ನು ಕೇಳಿದೆ.

ಟಾಮ್ : ಅವಳಿಗೆ ಸ್ವಚ್ಛ ಗಾಳಿ ಬಹಳ ಇಷ್ಟ.

ಸ್ಟೈಲಿ : ಉಸಿರು ಕಟ್ಟುವ ವಾತಾವರಣ ನನ್ನಿಂದ ಸಹಿಸಲಾಗುವುದಿಲ್ಲ.

ಒಮ್ಮತಕ್ಕೆ ಬರಲಾಗದಂತಹ ಪರಿಸ್ಥಿತಿಯಲ್ಲಿರುವ ಸ್ಟೈಲಿ ಮತ್ತು ಟಾಮ್‌ರಂಥ ಅನೇಕ ಜೋಡಿಗಳೂ ಇದ್ದಾರೆ. ತಮ್ಮ ಸಂಗಾತಿಯ ಮಾತು ಅಸಂಬದ್ಧ

೧೯೯೦ನೇ ಫೆಬ್ರವರಿ ತಿಂಗಳಿನ 'ಸರ್ವೋತ್ತಮ್' ಹಿಂದಿ ಮಾಸಪತ್ರಿಕೆಯಲ್ಲಿ ಪ್ರಕಟವಾದ ಆರೋನ್ ಟಿ. ಬೆಕ್. ಎಂ.ಡಿ.ರವರ. "ಜಬ್ ಆಪಕಾ ಜೀವನ್ ಸಾಥೀ ತರ್ಕಪರ್ ಉತರ್ ಆಯೆ" ಲೇಖನದ ಕನ್ನಡ ಅನುವಾದ.

ಎಂದು ತೀರ್ಮಾನಿಸಿ ತಮ್ಮ ಹಠವನ್ನೇ ಸಾಧಿಸಲು ಕಟಿಬದ್ಧರಾಗುತ್ತಾರೆ. ವಾಗ್ವಾದ ಪ್ರಾರಂಭವಾದಾಗ ಇಬ್ಬರೂ ಗೆಲ್ಲಲೇಬೇಕೆಂಬ ಪೈಪೋಟಿಯಲ್ಲಿರುತ್ತಾರೆ. ಇಲ್ಲಿ ಯಾರು ಗೆಲ್ಲುತ್ತಾರೆಂಬುದು ಮುಖ್ಯವೇ ಅಲ್ಲ. ಈ ವಾಗ್ವಾದದಲ್ಲಿ ವಾಸ್ತವಿಕ ಸಮಸ್ಯೆ ಬಿಟ್ಟುಹೋಗುತ್ತದೆ. ಅದಕ್ಕೆ ಪರಿಹಾರವೇ ಸಿಕ್ಕುವುದಿಲ್ಲ.

ಸ್ಯಾಲಿ ಮತ್ತು ಟಾಮ್‌ನ ವಿಷಯವಾಗಿ ದೀರ್ಘವಾದ ಮಾತುಕತೆಯಾಯಿತು. ಕೊನೆಗೆ ಸ್ನಾನದ ಮನೆಯ ಕಿಟಕಿ ಬಾಗಿಲನ್ನು ತೆರೆದಿಡುವ ವಿಷಯದಲ್ಲಿ ಇಬ್ಬರೂ ಒಮ್ಮತಕ್ಕೆ ಬಂದರು. (ಈ ಕಿಟಕಿಯ ಮೂಲಕ ಮಲಗುವ ಕೊಠಡಿಗೆ ಗಾಳಿ ಬರುತ್ತಿತ್ತು.) ಇದರಿಂದ ಸ್ಯಾಲಿಗೆ ಸ್ವಚ್ಛಗಾಳಿಯೂ ಸಿಕ್ಕಿತು. ನೇರವಾದ ತಣ್ಣನೆಯ ಗಾಳಿ ಟಾಮ್‌ಗೂ ತಟ್ಟಲಿಲ್ಲ. ಇದು ಬಹಳ ಸುಲಭೋಪಾಯವಾಗಿತ್ತು. ಆದರೂ ಅವರಿಗೆ ಹೊಳೆಯಲಿಲ್ಲ. ಕಾರಣ ಅವರು ವ್ಯಂಗ್ಯಬಾಣಗಳಿಂದ ಚುಚ್ಚುತ್ತಾ ತಮ್ಮ ವಾದಕ್ಕೆ ಅಂಟಿಕೊಂಡಿದ್ದರು.

ಪತಿ ಪತ್ನಿಯರ ಮಧ್ಯೆ ಉಂಟಾಗುವ ಚಿಕ್ಕಪುಟ್ಟ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಟಾಮ್ ಮತ್ತು ಸ್ಯಾಲಿ ಕಲಿತ ಉಪಾಯವನ್ನು ಅಳವಡಿಸಬಹುದು. ನಿಮ್ಮ ಸಂಗಾತಿ ತಪ್ಪಿತಸ್ಥ ಹಟಮಾರಿ, ಸ್ವಾರ್ಥಿ ಎಂಬ ತೀರ್ಮಾನಕ್ಕೆ ಬರುವ ಮೊದಲು, ಈ ಕೆಳಕಂಡ ವಿಷಯಗಳನ್ನು ಅರಿಯಲು ಸುವ್ಯವಸ್ಥಿತ ರೀತಿಯಲ್ಲಿ ಪ್ರಯತ್ನ ಮಾಡಿರಿ.

೧) ನೀವಿಬ್ಬರೂ ಏನನ್ನು ಅಪೇಕ್ಷಿಸುತ್ತೀರಿ? ೨) ಭಿನ್ನಾಭಿಪ್ರಾಯ ಎಲ್ಲಿ ಮತ್ತು ಏಕೆ ಉಂಟಾಗುತ್ತದೆ? ೩) ಸಂಭವನೀಯ ಪರಿಹಾರಕ್ಕೆ ಸಂಬಂಧಪಟ್ಟಂತೆ ಮುಕ್ತಮಾತುಕತೆ ನಡೆಸಿರಿ. ೪) ಇಬ್ಬರಿಗೂ ಹೆಚ್ಚಿನ ಸಂತೋಷವನ್ನು ತರುವಂತಹ ಪರಿಹಾರವನ್ನು ಕೈಗೊಳ್ಳಿರಿ.

ಪತಿ ಪತ್ನಿಯರಲ್ಲಾಗುವ ಜಗಳ ಪ್ರಾಯಶಃ ಎರಡು ತರದ್ದಾಗಿರುತ್ತದೆ. ಮೊದಲನೆಯದರಲ್ಲಿ ವಾಸ್ತವಿಕವಾಗಿ ಭಿನ್ನಾಭಿಪ್ರಾಯವೇ ಇರುವುದಿಲ್ಲ. ಆದರೆ ಮಾತುಕತೆ ವ್ಯಂಗ್ಯಬಾಣಗಳಿಂದ ಕೂಡಿರುತ್ತದೆ. ಪರಸ್ಪರ ರೇಗಿಸುವಂತಹುದಾಗಿರುತ್ತದೆ. ಈ ತೊಡಕಿನಲ್ಲಿ ವಾಸ್ತವಿಕ ಉದ್ದೇಶವೇ ಬಿಟ್ಟುಹೋಗುತ್ತದೆ.

ಉದಾಹರಣೆಗೆ,

ಟಾಮ್ : ಬಹಳ ಆಯಾಸಗೊಂಡಿರುವನೆಂದು ಸ್ಯಾಲಿಗೆ ಅನಿಸಿತು.

ಸ್ಯಾಲಿ : ಈ ದಿನ ರಾತ್ರಿ ಬೇಕರ್ಸ್‌ರವರಲ್ಲಿಗೆ ಹೋಗೋಣವೆ?

ಟಾಮ್ : ಸರಿ

ಸ್ಯಾಲಿ : ನಿಜವಾಗಿಯೂ ಹೊರಡಲು ಅಪೇಕ್ಷಿಸುತ್ತೀಯಾ?
ಟಾಮ್ : (ರೇಗಿ) ಸರಿ ಎಂದು ಹೇಳಿದೆನಲ್ಲವೇ?
ಸ್ಯಾಲಿ : (ವೇದನೆಯಿಂದ) ನಿಜವಾಗಿಯೂ ನಿನಗೆ ಇಷ್ಟವಿಲ್ಲದಿದ್ದರೆ ಮನೆಯಲ್ಲೇ ಇರಬಹುದು.
ಟಾಮ್ : ನಿಷ್ಕಾರಣವಾಗಿ ಏಕೆ ತಲೆ ತಿನ್ನುತ್ತೀಯಾ?
ಸ್ಯಾಲಿ : (ಕೋಪದಿಂದ) ನಿನ್ನ ಅನುಕೂಲಕ್ಕಾಗಿ ಹೇಳಿದೆ, ನೀನಂತೂ ಕಾಲು ಕೆರೆದು ಜಗಳಕ್ಕೆ ಬರುತ್ತೀಯಾ.

ಸ್ಯಾಲಿಗೆ ಟಾಮ್‌ನೊಡನೆ ವಾಗ್ವಾದ ಮಾಡಲು ಇಷ್ಟವಿರಲಿಲ್ಲ. ಆದರೆ ತನ್ನ ಅನಿಸಿಕೆಗಳನ್ನು, ಆಕೆ ಸುತ್ತಿ ಬಳಸಿ ಅಸ್ಪಷ್ಟವಾದ ಶಬ್ದಗಳಲ್ಲಿ ವ್ಯಕ್ತಪಡಿಸುತ್ತಿದ್ದಳು. ಆದರೆ ಟಾಮ್‌ಗೆ ಅದು ಅರ್ಥವಾಗುತ್ತಿರಲಿಲ್ಲ. ಸ್ಯಾಲಿ ಟಾಮ್‌ಗೆ ಆ ವಿಷಯವನ್ನು ಸ್ಪಷ್ಟಪಡಿಸುವ ಬದಲು ಬೇಸರದಿಂದ ಸುಮ್ಮನಾಗುತ್ತಿದ್ದಳು. ಅತ್ತ ಟಾಮ್‌ಗೆ ಅವಳು ಪ್ರಶ್ನೆ ಕೇಳುವ ರೀತಿ ಇಷ್ಟವಾಗುತ್ತಿರಲಿಲ್ಲ. "ಹೌದು" ಅಥವಾ "ಇಲ್ಲ" ಎಂದು ಮಾತ್ರ ಉತ್ತರ ಕೊಡುವಂತೆ ಅವಳು ಕೇಳುತ್ತಿದ್ದ ಪ್ರಶ್ನೆಗಳು ಅವನನ್ನು ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಸುತ್ತಿದ್ದುವು.

ಸ್ಯಾಲಿ ನೇರವಾಗಿ ಪ್ರಶ್ನೆ ಕೇಳಿ ಸಂಘರ್ಷವನ್ನು ತಪ್ಪಿಸಬಹುದಾಗಿತ್ತು. ಹೇಗೆಂದರೆ:

"ಇಂದು ರಾತ್ರಿ ನಿನ್ನ ಕಾರ್ಯಕ್ರಮವೇನು?"

"ನಾನು ಇನ್ನೂ ಯೋಚಿಸಿಲ್ಲ" ಎಂದು ಅವನು ಹೇಳಿದರೆ,

"ಮನೆಯಲ್ಲೇ ಇರುವ ಅಪೇಕ್ಷೆಯೋ ಅಥವಾ ಹೊರಗಡೆ ಸುತ್ತಾಡುವ ಇಚ್ಛೆಯೋ" ಎಂದು ಕೇಳಬಹುದಾಗಿತ್ತು.

"ಯಾರ ಮನೆಗಾದರೂ ಹೋಗೋಣವೋ ಅಥವಾ ನಾವಿಬ್ಬರೇ ಸುತ್ತಾಡಿ ಬರೋಣವೋ?"

ಈ ರೀತಿ ಆಕೆ ತನ್ನ ಸದ್ಭಾವನೆಯನ್ನು ವ್ಯಕ್ತಪಡಿಸಬಹುದಾಗಿತ್ತು. ಹೀಗೆ ಮಾತನಾಡಿದಾಗ ಇಬ್ಬರಿಗೂ ಮಾತಿಗೆ ಕಟ್ಟುಬಿದ್ದಿದ್ದೇವೆಂದು ಎನಿಸುತ್ತಿರಲಿಲ್ಲ.

ಇನ್ನೊಂದು ರೀತಿಯ ಜಗಳ ನಿಷ್ಕಾರಣವಾದುದಲ್ಲ. ಮಕ್ಕಳ ಪಾಲನೆ ಪೋಷಣೆ, ಹಣ, ಕೆಲಸದ ವಿಭಜನೆ, ವಿರಾಮ ಅಥವಾ ಲೈಂಗಿಕ ವಿಷಯ—ಮುಂತಾದುವಕ್ಕೆ ಸಂಬಂಧಪಟ್ಟಂತೆ ಜಗಳಗಳು ಆಗುತ್ತವೆ. ಇಲ್ಲಿ ಒಮ್ಮತಕ್ಕೆ

ಬರುವುದು ಕಷ್ಟವಾಗುತ್ತದೆಯೇ ಹೊರತು ಅಸಾಧ್ಯವಲ್ಲ. ಜಗಳದ ಮೂಲ ವನ್ನು ಕಂಡುಹಿಡಿದು ಅದನ್ನು ಪರಿಹರಿಸುವುದು ಉತ್ತಮ. ಪರಸ್ಪರ ಚರ್ಚಿಸು ವಾಗ ಈ ಮಾರ್ಗವನ್ನು ಅನುಸರಿಸಿದರೆ, ಪ್ರಯತ್ನ ಫಲಿಸುತ್ತದೆ. ಅನೇಕ ದಂಪತಿಗಳು ಕೋಪವನ್ನು ಉದ್ರೇಕಿಸುವುದಿಲ್ಲ. ಬದಲಾಗಿ ಪರಸ್ಪರ ಮಾತುಕತೆ ಗಳಿಂದ ತಮ್ಮ ದಾಂಪತ್ಯಜೀವನವನ್ನು ಶಾಂತಿಯುತವನ್ನಾಗಿಸುತ್ತಾರೆ. (ಕೆಲವು ದಂಪತಿಗಳು ವಾರಕ್ಕೊಮ್ಮೆ ಹೊರಗೆ ವಿಹಾರಕ್ಕೆ ಹೋಗಿ ಅಲ್ಲಿ ಕುಳಿತು ಶಾಂತಿ ಯಿಂದ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ. ನೀವು ಯಾವ ಮಾರ್ಗವನ್ನು ಬೇಕಾದರೂ ಅನುಸರಿಸಿ. ಆದರೆ ಈ ಸಲಹೆಗಳನ್ನು ಮಾತ್ರ ನೆನಪಿನಲ್ಲಿಡಿ.

೧. ಸಂಕ್ಷೇಪ

ಮೂಲ ವಿಷಯವನ್ನು ಹೇಳಿ, ಒಂದೆರಡು ವಾಕ್ಯ ಗಳಲ್ಲಿಯೇ ನಿಮ್ಮ ಅಭಿಪ್ರಾಯ ತಿಳಿಸುವುದು ಒಳ್ಳೆಯದು. ಹೀಗೆ ಮಾಡುವುದ ರಿಂದ ಚರ್ಚೆ ಅಥವಾ ವ್ಯಂಗ್ಯಮಾತುಗಳಿಗೆ ಅವಕಾಶವಿರುವುದಿಲ್ಲ.

೨. ಸ್ಪಷ್ಟತೆ

ಆಕ್ಷೇಪಣೆ ಮಾಡುವ ಬದಲು ಈ ರೀತಿ ಹೇಳಿ

"ನೀನು ಇನ್ನೂ ಸ್ವಲ್ಪ ಸ್ವಚ್ಛನಾಗಿರು, ಉಪಯೋಗಿಸಿದ ನಂತರ ಟವಲನ್ನು ಕಡೇಪಕ್ಷ ಗೂಟಕ್ಕೆ ನೇತುಹಾಕು."

೩. ಅಪಮಾನ ಮಾಡಬೇಡಿ, ಆಕ್ಷೇಪಣೆ, ದೋಷಾರೋಪಣೆಗಳಿಂದ ದೂರವಿರಿ

ಮುಕ್ತವಾಗಿ ಮಾತನಾಡುವುದು ಉತ್ತಮ. "ಸಮಸ್ಯೆ ಇದೆ ಎನ್ನುವು ದೇನೋ ಸರಿ. ಇದನ್ನು ಪರಿಹಾರ ಮಾಡುವುದು ಹೇಗೆ ಎಂದು ಯೋಚಿಸೋಣ."

೪. ಚುಚ್ಚುಮಾತುಗಳನ್ನು ಉಪಯೋಗಿಸಬೇಡಿ

'ಸ್ವಾರ್ಥಿ', 'ಸೋಮಾರಿ' ಮುಂತಾದ ಪದಗಳನ್ನು ಪ್ರಯೋಗಿಸಬೇಡಿ. ಹೀಗೆ ಮಾಡಿದಲ್ಲಿ, ನೀವು ಮಿಥ್ಯಾರೋಪ ಮಾಡುತ್ತಿದ್ದೀರಿ ಎಂದು ಅರ್ಥವಾಗು

ತ್ತದೆ. ಎರಡನೆಯದಾಗಿ ಇಂತಹ ಶಬ್ದಗಳಿಂದ ನೀವು ನಿಮ್ಮ ಸಂಗಾತಿಯನ್ನು ಕೋಪಗೊಳ್ಳುವಂತೆ ಮಾಡುತ್ತೀರಿ. ಪರಿಣಾಮ ಆಗುವ ಕೆಲಸವೂ ಕೆಟ್ಟು ಹೋಗುತ್ತದೆ.

೫. ಕೊನೆಯ ಮಾತನ್ನು ಹೇಳಬೇಡಿ

ಇಂತಹ ಮಾತಿಗೆ ಬಹಳ ಕಠಿಣವಾದ ಉತ್ತರವೇ ನಿಮಗೆ ಸಿಗುತ್ತದೆ. ಸರಿಯಾದ ಮಾತನ್ನೇ ಆಡದೆ ಇರುವ ದಂಪತಿಗಳ ಸಂಖ್ಯೆ ಬಹಳ ಕಡಿಮೆ. ಹಾಗೆಯೇ ಸದಾ ತಪ್ಪುಮಾತನಾಡುವವರ ಸಂಖ್ಯೆಯೂ ಕಡಿಮೆ.

೬. ರಚನಾತ್ಮಕವಾಗಿ ನಿಮ್ಮ ಮಾತನ್ನು ಹೇಳಿರಿ

"ನೀನು ನನ್ನ ಕೆಲಸದಲ್ಲಿ ಸ್ವಲ್ಪವೂ ಸಹಾಯ ಮಾಡುವುದಿಲ್ಲ" ಈ ರೀತಿ ಹೇಳುವ ಬದಲು.

"ನೀನು ನನಗೆ ಸ್ವಲ್ಪ ಸಹಾಯಮಾಡಿದರೆ ಉಪಕಾರವಾಗುವುದು" ಎಂದು ಹೇಳುವುದು ಉತ್ತಮ.

೭. ಅಭಿಪ್ರಾಯಗಳನ್ನು ವಿಶ್ಲೇಷಿಸಬೇಡಿ

ನಿಮ್ಮ ವಿಶ್ಲೇಷಣೆ ತಪ್ಪಾಗಲೂ ಬಹುದು. ಇದರಿಂದ ನಿಮ್ಮ ಸಂಗಾತಿಗೆ ಕೋಪಬರಲೂ ಬಹುದು.

ಕೇಳುವವರು ಈ ರೀತಿ ಇರಬೇಕು

೧. ನಕಾರಾತ್ಮಕ ಮಾತುಗಳಿಗೆ ಗಮನಕೊಡಬೇಡಿ

ದುಃಖ ಅಥವಾ ಕೋಪದಲ್ಲಿ ನಿಮ್ಮ ಸಂಗಾತಿ ಸಮಸ್ಯೆಯನ್ನು ದೊಡ್ಡದು ಮಾಡಿ ನೋಡಬಹುದು. ಅಥವಾ ಅವರ ದೋಷವನ್ನು ಇನ್ನೊಬ್ಬರ ಮೇಲೆ ಹಾಕಬಹುದು. ಇಲ್ಲಿ, ಕೋಪದ ಕಾರಣವೇನೆಂದು ಗಮನಿಸಬೇಕೇ ಹೊರತು ದೋಷಾರೋಪಣೆಯ ಮಾತುಗಳನ್ನಲ್ಲ.

೨. ನಿಮ್ಮ ಸಂಗಾತಿಯ ಆಕ್ಷೇಪಣೆಯನ್ನು ತಿಳಿಯುವ ಪ್ರಯತ್ನ ಮಾಡಿ

ಆಕ್ಷೇಪಣೆ ಮಾಡುವವರಿಗೆ ಅವರ ಸ್ಪಷ್ಟರೂಪ ತಿಳಿದಿರುತ್ತದೆ. ಆದರೆ

ಕೇಳುವವರಿಗೆ ಅದರ ಸ್ಪಷ್ಟ ಚಿತ್ರ ಗೊತ್ತಿರುವುದಿಲ್ಲ. ಆಕ್ಷೇಪಣೆಯ ಸಾರಾಂಶ ಏನೆಂಬುದನ್ನು ವಿಶ್ಲೇಷಿಸಿ.

ಉದಾಹರಣೆಗೆ:—

"ನನ್ನ ತಾಯಿಯ ಹಸ್ತಕ್ಷೇಪವನ್ನು ಇನ್ನು ಸಹಿಸಲಾರೆಯೆಂಬುದನ್ನು ನೀನು ಹೇಳುತ್ತಿದ್ದೀ ಎಂದು ನನಗನ್ನಿಸುತ್ತದೆ".

ನಿಮ್ಮ ಸಂಗಾತಿ ಅಸ್ಪಷ್ಟವಾಗಿಯೂ, ಸರ್ವಸಾಮಾನ್ಯವಾಗಿಯೂ ತನ್ನ ಮಾತನ್ನು ಈ ರೀತಿ ಹೇಳಿದರೆ,

"ನೀನು ಹೇಳಿದ್ದನ್ನು ಎಂದಿಗೂ ಮಾಡುವುದಿಲ್ಲ."

ನಿಮ್ಮ ಸಂಗಾತಿಗೆ ವಾಸ್ತವಿಕ ವಿಷಯವನ್ನು ಸ್ಪಷ್ಟವಾಗಿ ತಿಳಿಸಲು ಹೇಳಿ.

೩. ಒಮ್ಮತಕ್ಕೆ ಬರುವ ಆಧಾರವನ್ನು ಹುಡುಕಿ

ನಿಮ್ಮ ಸಂಗಾತಿಯ ಆಕ್ಷೇಪಣೆ ಸರಿ ಎನಿಸಿದರೆ ಒಪ್ಪಿಕೊಳ್ಳಿ.

"ನಾನು ವೇಳೆ ಮೀರಿ ಮನೆಗೆ ಬರುವುದು ನಿನಗೆ ಇಷ್ಟವಾಗುವುದಿಲ್ಲವೆಂಬುದು ನನಗೆ ಗೊತ್ತು."

೪. ನಿಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿ

ನಿಮ್ಮ ಸಂಗಾತಿ ನಿಮ್ಮ ಮಾತನ್ನು ತಪ್ಪಾಗಿ ತಿಳಿದುಕೊಂಡಿದ್ದರೆ, ಯಾವ ನೆಪವೂ ಹೇಳದೆ ನಿಸ್ಸಂಕೋಚವಾಗಿ ನಿಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿ.

೫. ವಿಷಾದ ವ್ಯಕ್ತಪಡಿಸಲು ಹಿಂಜರಿಯಬೇಡಿ

ನಿಮ್ಮ ಮಾತು ಅಥವಾ ಕೆಲಸದಿಂದ ನಿಮ್ಮ ಸಂಗಾತಿಗೆ ದುಃಖವಾಗಿದ್ದರೆ ವಿಷಾದ ವ್ಯಕ್ತಪಡಿಸಲು ಹಿಂದು ಮುಂದು ನೋಡಬೇಡಿ. ಈ ವಿಷಾದದ ಅಭಿವ್ಯಕ್ತಿಯೂ ಪ್ರೀತಿಯ ಒಂದು ಭಾಗವೇ ಆಗಿದೆ.

ಸಮಸ್ಯೆಯ ಪರಿಹಾರಕ್ಕೆ ಸಂಬಂಧಪಟ್ಟ ವಿಚಾರಗಳ ವಿಮರ್ಶೆ ಮುಂದುವರಿದಂತೆ, ಪರಿಹಾರದ ದಾರಿ ಸುಗಮವಾಗುವುದು. ಒಂದು ಮಾತು ನೆನಪಿರಲಿ. ನಿಮ್ಮ ಸಂಗಾತಿಯ ತಪ್ಪುಗಳನ್ನು ಒತ್ತಿ ಹೇಳುವ ಬದಲಾಗಿ ಅಪೇಕ್ಷಿತ ಗುರಿಮುಟ್ಟಲು ಹೆಚ್ಚು ಒಲವು ತೋರಿಸಿ ನಿಮ್ಮ ಆಕ್ಷೇಪಣೆಗಳನ್ನು ಒತ್ತಿ

ಹೇಳುವುದರಿಂದ ನಿಮಗೆ ನಿಮ್ಮ ಸಂಗಾತಿಯ ಸಹಕಾರ ಹೆಚ್ಚಾಗಿ ಸಿಗುವುದು. ಉದಾಹರಣೆಗೆ,

"ನೀನು ಈಗ ನನ್ನೊಡನೆ ಮಾತನಾಡುವುದಿಲ್ಲ",

ಎಂದು ಹೇಳುವ ಬದಲು.

"ನಾವು ನಮಗಾಗಿ ಸ್ವಲ್ಪ ಸಮಯವನ್ನು ಉಳಿಸಿಕೊಳ್ಳೋಣ ಅಥವಾ ಸಂಜೆ ಹೊರಗೆ ಹೋಗಿ ಊಟ ಮಾಡೋಣವೇ?

ಒತ್ತಾಯ ಮಾಡುವಾಗ ಸಂಗಾತಿಯನ್ನು ಅಪಮಾನ ಅಥವಾ ಟೀಕೆ ಮಾಡಬೇಡಿ.

"ಮನೆಯ ಕಸವನ್ನು ಪ್ರತಿದಿನ ಬೆಳಿಗ್ಗೆ ನೀನು ಎಸೆದು ಬರಬೇಕು. ನಿನ್ನ ಬಿಡುವಿಲ್ಲದ ಸಮಯದಲ್ಲಿ ಸ್ವಲ್ಪ ವೇಳೆಯನ್ನು ನನಗಾಗಿ ಇರಿಸಬಲ್ಲೆಯಾ?

ಇಂತಹ ಚುಚ್ಚು ಮಾತು ವಾಸ್ತವಿಕ ಉದ್ದೇಶವನ್ನೇ ಹಾಳುಮಾಡುತ್ತದೆ. 'ನೀನು' ಎನ್ನುವ ಬದಲು 'ನಾನು' ಎಂಬ ಶಬ್ದವನ್ನು ಉಪಯೋಗಿಸಿ.

ಈ ರೀತಿ ಹೇಳುವುದಕ್ಕಿಂತ,

"ನಿನ್ನ ಈ ಮಾತುಗಳು ನನ್ನನ್ನು ಯಾವಾಗಲೂ ಬೇಸರಗೊಳಿಸುತ್ತದೆ".

ಈ ರೀತಿ ಹೇಳುವುದರಲ್ಲಿ ಆಕ್ಷೇಪಣೆ ಕಡಿಮೆ ಇರುತ್ತದೆ.

"ನೀನು ಹೀಗೆ ಮಾಡಿದರೆ ನನಗೆ ಬೇಸರವಾಗುತ್ತದೆ."

ಸಮಸ್ಯೆಯ ಪರಿಹಾರ ಹುಡುಕುವಾಗ ಕೆಲವು ಒಳ್ಳೆಯ ಮಾತುಗಳನ್ನು ಆಡಲೂ ಸಹ ಮರೆಯದಿರಿ.

"ನಿಮ್ಮನ್ನು ಹೆಚ್ಚು ಸಂತೋಷಪಡಿಸುವ, ನಿಮ್ಮ ಸಂಗಾತಿಯ ಮಾತುಗಳನ್ನು ಪ್ರತಿವಾರ ಗುರ್ತುಹಾಕಿಕೊಂಡು ಬನ್ನಿ" ಎಂದು ನನ್ನಲ್ಲಿಗೆ ಬರುವ ದಂಪತಿಗಳಿಗೆ ನಾನು ಹೇಳುತ್ತಿರುತ್ತೇನೆ.

ವಿಚಾರ ವಿಮರ್ಶೆ ಮಾಡುವಾಗ ಕಾರೇನ್ ಹೇಳಿದಳು ಕೆಲಸ ಮಾಡುವಾಗ 'ಟೆಡ್' ಮಾತನಾಡುವ ರೀತಿಯಿಂದ ಕೆಲಸ ಮಾಡುವುದು ಬಹಳ ಸುಲಭವಾಗುತ್ತದೆ. ನನ್ನನ್ನು ಸುತ್ತಾಡಿಕೊಂಡು ಬಾ ಎಂದು ಆತ ಹೇಳಿದರೂ ನನಗೆ ಇಷ್ಟವಾಗುತ್ತದೆ. ಕಛೇರಿಯಿಂದ ಬೇಸರಗೊಂಡು ಬಂದಾಗ, ಆತ ಅವಶ್ಯಕತೆಗಿಂತ ಹೆಚ್ಚು ಸಹಾನುಭೂತಿ ತೋರಿಸುತ್ತಾನೆ. ನಾನೇನು ಮಾಡಬೇಕೆಂದು ಆತ ಎಂದಿಗೂ ಉಪದೇಶ ಮಾಡುವುದಿಲ್ಲ.

'ಟೆಡ್' ಸಹ ಇದೇ ತರದ ಮಾತುಗಳನ್ನು ಹೇಳುತ್ತಾನೆ. ಅವು ಉಪಯೋಗವಾಗದಿದ್ದರೂ ಮಹತ್ವಪೂರ್ಣವಾಗಿರುತ್ತವೆ.

"ಕಾರೇನ್ ನನ್ನ ಸೂಟನ್ನು ಒಗೆಸಿತರಲು ತೆಗೆದುಕೊಂಡುಹೋಗಿದ್ದಾಳೆ. ಆಫೀಸಿನ ಸಮಸ್ಯೆಗಳಿಂದ ಮಂಗಳವಾರ ರಾತ್ರಿ ನಾನು ಬಹಳ ಆಯಾಸ ಗೊಂಡಿದ್ದೆ. 'ಹೊರಗೆ' ತಿರುಗಾಡಿ, ಊಟಮಾಡಿ, ಸಿನೆಮಾ ನೋಡಿ ಬರೋಣ ವೆಂದು ಸಲಹೆಕೊಟ್ಟಳು. ಆಗ ಸಮಸ್ಯೆಗಳ ಕಡೆ ನನ್ನ ಗಮನ ಹೋಗಲೇ ಇಲ್ಲ.

ಈ ಸಲಹೆ ಬಹಳ ಸಾಧಾರಣವಾದದ್ದಾಗಿತ್ತು. ಆದರೆ ಕಾರೇನ್ ಹೇಳಿದಂತೆ ಇದು ಉಡುಗೊರೆಯಂತಿತ್ತು.

ಯಶಸ್ವೀ ದಂಪತಿಗಳು ಒಬ್ಬರು ಇನ್ನೊಬ್ಬರ ವಿಶೇಷ ಗುಣಗಳನ್ನು ಅಥವಾ ಉತ್ತಮ ಅಭ್ಯಾಸಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯುತ್ತಾರೆ. ಕಾಲ ಕ್ರಮೇಣ, ಪರಸ್ಪರ ಅಭ್ಯಾಸ ಮತ್ತು ಅಪೇಕ್ಷೆಗಳಲ್ಲಿ ಒಮ್ಮತಕ್ಕೆ ಬರುವುದನ್ನು ಕಲಿಯುತ್ತಾರೆ. ಆದರೆ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡಿರುತ್ತಾರೆ. ತಮ್ಮ ಜಗಳಗಳನ್ನು ಸ್ಮರಿಸಿಕೊಳ್ಳಲು ಸ್ಮಂತಿಕೆಯನ್ನು ಜೋಪಾನವಾಗಿ ಉಳಿಸಿ ಕೊಂಡಿರುತ್ತಾರೆ.

ಟಿ. ವಿ. ಅನ್ನಪೂರ್ಣಮ್ಮ



ಮನುಷ್ಯನು ಹಲವು ಸದ್ಗುಣಗಳಿಂದ ಕೂಡಿರಬಹುದು. ಆದರೆ ಅವನ ಯೋಗ್ಯತೆಯನ್ನು ಅಳೆಯುವ ಸಾಧನ ಅವನ ಸದ್ಗುಣಗಳಲ್ಲ. ಅವನ ಸದಾಚಾರವೇ ಆ ಸಾಧನವಾಗಿದೆ.

—ರೊಚೆಫೊರಾಲ್ಡ್

ಪುಸ್ತಕ ಪರಿಚಯ

ಅನ್ನಮಾರ್ಗದಲ್ಲಿ ಅಪಘಾತಗಳು—ಲೇಖಕರು: ಡಾ॥ ಎಸ್. ಜೆ. ನಾಗಲೋಟಿಮಠ, ಪ್ರಕಾಶಕರು: ವಿಕೃತ ವಿಜ್ಞಾನ ವಿಭಾಗ (Department of Pathology), ಜ. ನೆ. ಮೆಡಿಕಲ್ ಕಾಲೇಜ್, ಬೆಳಗಾವಿ. ಪುಟ ೧೪೪, ಸಚಿತ್ರ. ಬೆಲೆ ನಮೂದಾಗಿಲ್ಲ.

ಡಾ॥ ಎಸ್. ಜೆ. ನಾಗಲೋಟಿಮಠರು ಈಗ (೧೯೯೪) ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರು, ವಿಕೃತವಿಜ್ಞಾನ ದಲ್ಲಿ ಸಂಶೋಧಕರು ಮತ್ತು ಉತ್ತಮ ಬೋಧಕರು. ನಮ್ಮ ಶಿಕ್ಷಣ ಮಾಧ್ಯಮ —ಅದೂ ವೈದ್ಯಕೀಯದಂಥ ಉನ್ನತ ವಿಜ್ಞಾನ ವಿಭಾಗಗಳಲ್ಲಿ—ಇಂದಿಗೂ ಇಂಗ್ಲಿಷ್ ಅಂದ ಮೇಲೆ ನಾಗಲೋಟಿಮಠರ ತಾಂತ್ರಿಕ ಕೃತಿ ಹೇಗಿದ್ದೀತು? ಪುಸ್ತಕೀಯ ಭಾಷೆ, ಪಾರಿಭಾಷಿಕ ಪದಗಳ ಸಮೃದ್ಧಿ, ಚಿತ್ರಗಳ ಗೊಂಡಾರಣ್ಯ ಮತ್ತು ಸಾಮಾನ್ಯ ವಾಚಕನಿಗೆ ಅರ್ಥವಾಗದ ವಿಚಿತ್ರ ವಾಕ್ಯಗಳು! ಇದು ಒಂದು ನಿರೀಕ್ಷೆ.

ವಿಷಯ ಪಾರಂಗತನಲ್ಲಿ ಅಭಿವ್ಯಕ್ತಿ ಮಾಧ್ಯಮ ಕುರಿತಂತೆ ಸೃಜನಶೀಲ ಪ್ರಭುತ್ವವೂ ಈ ಕೆಲಸದ (ಜ್ಞಾನ ಸಂವಹನ) ಬಗ್ಗೆ ಮತಪ್ರಚಾರತನ ನಿಷ್ಠೆ ಉತ್ಸಾಹವೂ ಸಂಗಮಿಸಿದ್ದರೆ ಅಂಥವನ ಬರೆಹ ಹೇಗಿದ್ದೀತು? ಇದು ಇನ್ನೊಂದು ಪರೀಕ್ಷೆ.

ಈ ಎರಡನೆಯ ಅಪೇಕ್ಷೆ ಪರೀಕ್ಷೆ ಪ್ರತೀಕ್ಷೆಗೇಗೆ ಸಮರ್ಥ ಉತ್ತರವೇ 'ಅನ್ನ ಮಾರ್ಗದಲ್ಲಿ ಅಪಘಾತಗಳು.' ಇಲ್ಲಿ 'ಅನ್ನಮಾರ್ಗ'ವೆಂದರೆ ಅನ್ನ ಗಳಿಸಲು ವ್ಯಕ್ತಿ ಹೂಡುವ ಅನ್ಯ ಮಾರ್ಗಗಳಲ್ಲ! ಖುದ್ದು ಉಣಿಸು ಬಾಯಿಯಿಂದ ಜಠರಕ್ಕೆ ಸಾಗುವ ನಿಸರ್ಗಕೃತ 'ರಾಜಮಾರ್ಗ.' ನುಂಗಣೆ ಸಲೀಸು ನಿಜ. ಆದರೆ ಹಾಗೆಂದು ಅದನ್ನು—ಅಂದರೆ ತಿನಪಾಂಡಿತನವನ್ನು—ಹದ್ದು ಮೀರಿ ಬೆಳೆಸಿದರೆ ನಿಸರ್ಗ ಸೂಕ್ಷ್ಮವಾಗಿ, ಆದರೆ ಖಚಿತವಾಗಿ, ತನ್ನ ಪ್ರತಿರೋಧವನ್ನು ಪ್ರದರ್ಶಿಸಿಯೇ ಪ್ರದರ್ಶಿಸುತ್ತದೆ. ಇದೇ 'ಅನ್ನಮಾರ್ಗದಲ್ಲಿ ಅಪಘಾತ' ತಲೆದೋರುವುದರ ಲಕ್ಷಣ.


ನಾಗಲೋಟಿಮಠರು ಈ ಪುಸ್ತಕದಲ್ಲಿ ಎರಡು 'ಪವಾಡ'ಗಳನ್ನು ಸಾಧಿಸಿದ್ದಾರೆ: ಒಂದು, ಇದು ಕನ್ನಡ ಅರ್ಥಮಾಡಿಕೊಳ್ಳಬಲ್ಲ ಯಾವ ಪ್ರಾಮಾಣಿಕ

ವಾಚಕನಿಗೆ ಆತ್ಮೀಯವಾಗಿ ಗ್ರಾಹ್ಯವಾಗುತ್ತದೆ. ವಿಷಯ ಪ್ರಭುತ್ವ ಸ್ಪಷ್ಟ ನಿರೂಪಣೆ. ಮನೋಜ್ಞ ಧಾಟಿ. ಯುಕ್ತ ಆಕರ್ಷಕ ಚಿತ್ರಗಳು. ಎರಡು, ನಿತ್ಯಜೀವನದ ತೋರ್ಕೆ ಸರಳತೆಯ ಹಿಂದೆ ಮರೆಸು ಕುಳಿತಿರುವ ಗಂಭೀರ ಸಂಕೀರ್ಣತೆಯನ್ನು ಸ್ಫುಟವಾಗಿ ಎತ್ತಿ ತೋರಿಸಿ ಆರೋಗ್ಯಭಾಗ್ಯದ ಹಿರಿಮೆಯತ್ತ ವಾಚಕರ ಲಕ್ಷ್ಯ ಸೆಳೆದಿದ್ದಾರೆ. ಮೂರನೆಯದೂ ಒಂದನ್ನು ಸೇರಿಸಬಹುದೋ ಏನೋ: ಇವರ ನೈಜ ಸಾಹಿತ್ಯ ಪ್ರೇಮ ಹಾಗೂ ಸುಹಾಸಪ್ರಜ್ಞೆ. ಒಸಡಿನಲ್ಲಿ ನುಸುಳಿದ ಏಡಿ ಎಲ್ಲಿದೆ? ಸೋರುತ್ತಿರುವ ಜಠರ ಮಠಾರಕ್ಕೆ ತೇಪೆ ಹೇಗೆ ಹಾಕೋಣ? ಜಂತುಹುಳುಗಳ ಸಂತೆಯಲ್ಲಿ ಚಿಂತೆಗೈದರೇನು ಫಲ? ವಾಲ್ಮೀಕಿಯಾದ ಅಮೀಬಾ ರಚಿಸಿದ ಮೇರುಕೃತಿ ಏನು? ಈ ಸ್ವಾರಸ್ಯಗಳನ್ನು ನೀವೇ ಓದಿ ಸವಿಯಬೇಕು. ಉದಾಹರಣೆಗೆ 'ಅನ್ನನಾಳವನ್ನೆ ಹಿಚುಕಿದ ಏಡಿ' ಎಂಬ ಅಧ್ಯಾಯದ ಧ್ವನಿಪೂರ್ಣ ಚಿತ್ರ ನೋಡಿ. ಬಳಿಕ ಹನುಮಪ್ಪನ ಅನುಭವ ಓದಿ: "ಹನುಮಪ್ಪ ಲಕ್ಷ್ಮಣ ಚಲುವಾದಿ ೫೦ ವರ್ಷದ ವ್ಯಕ್ತಿ. ಅವನು ಗೋಕಾಕ ತಾಲ್ಲೂಕಿನ ಒಂದು ಹಳ್ಳಿಯವನು. ವೃತ್ತಿಯಿಂದ ದಿನಗೂಲಿ. ಚಿಕ್ಕವನಿದ್ದಾಗಿನಿಂದಲೂ ಕುಡಿಯುವ ಚಟವನ್ನು ರೂಢಿಸಿಕೊಂಡನು....ಸುಮಾರು ೩-೪ ವರ್ಷಗಳಿಂದೀಚೆಗೆ ಅವನಿಗೆ ಎದೆ ಉರಿ ಪ್ರಾರಂಭವಾಯಿತು. ಎದೆಯುರಿಯೊಡನೆ ಕಮರುಡಮರಿಕೆಗಳು ಹೆಚ್ಚಾಗತೊಡಗಿದುವು. ಕ್ರಮೇಣ ನುಂಗುವಾಗ ಏನೋ ತಟ್ಟಿದಂತೆ ಭಾಸ ವಾಯಿತು...." ನುಂಗಲು ತೊಂದರೆ ಕೊಟ್ಟದ್ದು ಅನ್ನನಾಳವನ್ನೇ ಹಿಚುಕಿದ ಏಡಿ—ಕ್ಯಾನ್ಸರ್.

ಹನುಮಪ್ಪ ಇಲ್ಲಿ ಕೇವಲ ಪ್ರತೀಕ. ನಾವು ಯಾರೂ ಆತನ ಸ್ಥಾನದಲ್ಲಿರ ಬಹುದು, ಆ ಕಷ್ಟ ಅನುಭವಿಸಬಹುದು—ಅರಿಯದೇ ಗೈದ ಅಪರಾಧಕ್ಕಾಗಿ. ಆದ್ದರಿಂದ ಇಂಥ ಕೃತಿಗಳನ್ನು ಓದಿ ಮೊದಲು ಸಂಪಾದಿಸಬೇಕು ಅರಿವು—ಕಾರಣರಹಿತ ಪರಿಣಾಮವಿಲ್ಲ ಎಂಬ ತಿಳಿವಳಿಕೆ. ಏಡಿಗಂತಿ (ಕ್ಯಾನ್ಸರ್) ದೇವರು ಹಾಕಿದ ಶಾಪದ ಫಲವಲ್ಲ, ಪೂರ್ವಜನ್ಮ ಸಂಚಿತ ಪಾಪದ ವರ್ತಮಾನ ಶಿಕ್ಷೆಯಲ್ಲ, ಇತರರ ಮಾಟಮಂತ್ರ ಭೂಮಂತ್ರಗಾಳಿಗಳ ದುಷ್ಟಸೋಂಕೂ ಅಲ್ಲ. ಅದು ಸ್ವಯಂಕೃತಾಪರಾಧದ ದುಷ್ಟ ಫಲ. ಇಂಥ ತಿಳಿವು ನಮ್ಮ ಗ್ರಾಮೀಣ ವಾಚಕರಿಗೂ ನೇರವಾಗಿ ಆತ್ಮೀಯವಾಗಿ ಮತ್ತು ಪರಿಣಾಮಕಾರಿಯಾಗಿ ಮನಂಬುಗುವಂತೆ ರಚಿತವಾಗಿರುವ ಉತ್ತಮ ಕೃತಿ ಈ ಪುಸ್ತಕ. ವಿಷಯ ತಜ್ಞರು ಸಾಮಾನ್ಯರಿಗಾಗಿ ಹೇಗೆ ವಿಜ್ಞಾನ ಪುಸ್ತಕ ಬರೆಯಬೇಕೆಂಬುದಕ್ಕೆ

ಇದೊಂದು ಮಾರ್ಗದರ್ಶಿ. ವಿಷಯ ಪುಟಸೂಚಿ (index) ಹಾಗೂ ಕನ್ನಡ ಅಕಾರಾದಿಯಾಗಿ ಪಾರಿಭಾಷಿಕ ಪದಕೋಶ (ಇಂಗ್ಲಿಷ್ ಸಮಾನಾರ್ಥಕಗಳ ಸಹಿತ) ಈ ಪುಸ್ತಕದ ಕೊನೆಯಲ್ಲಿ ಸೇರಿಸಿದ್ದಿದ್ದರೆ ಇದು ಅಧಿಕ ಉಪಯುಕ್ತ ವಾಗಿರುತ್ತಿತ್ತು.

ಜಿ. ಟಿ. ನಾರಾಯಣರಾವ್



ನೀನು ಈ ವಿಶ್ವದಲ್ಲಿ ಮನುಷ್ಯನಾಗಿ ಬಂದ ಮೇಲೆ ಏನಾದರೂ ಸ್ವಲ್ಪ ಮಹತ್ಕಾರ್ಯವನ್ನು ಸಾಧಿಸು. ಕೇವಲ ಹುಳಗಳಂತೆ ಹುಟ್ಟಿ ಸತ್ತರೆ ಏನು ಫಲ?

—ವಿವೇಕಾನಂದ

ಜನರು ದುರ್ಗುಣಿಗಳಾಗಿರಬಹುದು. ಅವರ ದುರ್ಗುಣಗಳನ್ನು ನೀವು ಬೇಕಾದರೆ ದೂಷಿಸಬಹುದು. ಆದರೆ ಅದಕ್ಕಾಗಿ ಜನರನ್ನು ದ್ವೇಷಿಸು ವುದಲ್ಲ.

—ಬ್ರೆನಾರ್ಡ್

ನೀವು ಓದಲೇಬೇಕಾದ ಪುಸ್ತಕಗಳು....

ಯುದ್ಧ ಮತ್ತು ಶಾಂತಿ (3 ಸಂಪುಟಗಳಲ್ಲಿ)

ಶರಣಚರಿತಾಮೃತ

ಪ್ರಥಮ ಚಿಕಿತ್ಸೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನೈಟಿಂಗೇಲ್ ಮತ್ತು ಇತರ ಕಥೆಗಳು

ರಾಮಕೃಷ್ಣಪರಮಹಂಸ

ಬಸವಣ್ಣನವರ ಮಾತು

ಹಿಂದೂಧರ್ಮ ಭಾಗ ೧ ಮತ್ತು ೨

ನಾಗರಮುರಿ

ಮಹಾಶ್ವೇತೆ

ಅಶೋಕನ ಶಿಲಾ ಶಾಸನಗಳು

ಶ್ರೀಶಂಕರಾಚಾರ್ಯ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

Reg. No. KRNN 29 / WPP 6

LICENSE No. 21
LICENSED TO POST WITH PAYMENT

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ ರೂ. 3-00
ವಾರ್ಷಿಕ ಚಂದಾ ರೂ. 30-00

ಆಜೀವ ಸದಸ್ಯತ್ವದ ಚಂದಾ ವಿವರ:

ಸಂಸ್ಥೆಗೆ ರೂ. 500-00
ವ್ಯಕ್ತಿಗೆ ರೂ. 300-00

ಕಛೇರಿ ವಿಳಾಸ :

ಪ್ರಧಾನ ಸಂಪಾದಕರು
'ಪುಸ್ತಕ ಪ್ರಪಂಚ' ಮಾಸಪತ್ರಿಕೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ, ಮಾನಸಗಂಗೋತ್ರಿ ಕ್ಯಾಂಪಸ್
ಮೈಸೂರು-570006

ದೂರವಾಣಿ : 520435

Edited & Printed by H. V. Sreenivasachar (I/c Editor), Printed at Karnataka State Adult Education Council Press and Published by Karnataka State Adult Education Council, 5/1, Vinoba Road, Gangothri Compus, Mysore-570 006.